ಸಾಹಿತ್ಯ ದಾಸೋಹ – ೧೯೫/೨



೧೩ ನವೆಂಬರ್ ೨೦೨೧ರ
ಸಾಹಿತ್ಯ ದಾಸೋಹದಲ್ಲಿ
ಪ್ರಸ್ತುತಪಡಿಸಿದ
ಬರಹಗಳು, ವರದಿಗಳು





ಸಮನ್ವಯ ಸಮಿತಿ * ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಪ್ರಿಯರೆ,

ಸಾಹಿತ್ಯ ದಾಸೋಹ ೧೯೫/೨೮* ಸಂಚಿಕೆಯನ್ನು ತಮ್ಮ ಕೈಗಿಡಲು ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆ ಹರ್ಷಿಸುತ್ತದೆ.

೧೫ ಅಗಸ್ಟ್ ೧೯೯೯ ರಲ್ಲಿ ಆರಂಭವಾದ ದಾಸೋಹ ಕಾರ್ಯಕ್ರಮಗಳು ಕರೋನಾ ಹಿನ್ನೆಲೆಯಲ್ಲಿ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯ ಮೂಲಕ ಯಶಸ್ವಿಯಾಗಿ ನಡೆಯಲಾರಂಭಿಸಿ ಇದೀಗ ೨೦೦ನೇ ದಾಸೋಹದತ್ತ ಹೆಜ್ಜೆ ಇರಿಸುತ್ತಿರುವುದು ಸದಸ್ಯರೆಲ್ಲರೂ ಹೆಮ್ಮೆಪಡಬೇಕಾದ ವಿಷಯ.

ಸದಸ್ಯರು ಶ್ರದ್ಧೆಯಿಂದ ಮತ್ತು ಬದ್ಧತೆಯಿಂದ ದಾಸೋಹದಲ್ಲಿ ಭಾಗವಹಿಸಿ ನಿಗದಿತ ಕಾಲಮಿತಿಯಲ್ಲಿ ಪರಿಶ್ರಮದಿಂದ ಉತ್ತಮ ಲೇಖನಗಳನ್ನು ಪ್ರಸ್ತುತಪಡಿಸಿ ಈ ಸಂಚಿಕೆ ಸರ್ವಾಂಗ ಸುಂದರವಾಗಿ ರೂಪುಗೊಂಡು ಬರಲು ಕಾರಣವಾಗಿದ್ದಾರೆ. ಎಲ್ಲ ಲೇಖಕರಿಗೂ ಅಭಿನಂದನೆಗಳು.

ಈ ಕೃತಿಯಲ್ಲಿ ೧೯೫/೨ನೇ ದಾಸೋಹದ ವರದಿಯ ಜೊತೆಗೆ ದೀಪಾವಳಿಯ ಅಂಗವಾಗಿ ನಡೆಸಿದ ವಿಶೇಷ ನೋಡಿಯೋ ಕಾರ್ಯಕ್ರಮ "ಬಲಿಚರಿತ್ರೆ – ತಾಳಮದ್ದಳೆ" ಯ ವರದಿಯೂ ಇದೆ. ಅಧ್ಯಕ್ಷರ ಅನಿಸಿಕೆಗಳೂ ಸೇರಿದಂತೆ ಒಟ್ಟು ೨೮ ವೈವಿಧ್ಯಮಯ ಬರಹಗಳಿವೆ. ದಾಸೋಹದ ಅಧ್ಯಕ್ಷತೆ ವಹಿಸಿದ್ದ ಶ್ರೀ ಗುರುರಾಜ ಶಾಸ್ತ್ರಿಯವರು ಎಲ್ಲ ಕೃತಿಗಳ ಬಗ್ಗೆ ತಮ್ಮ ಅನಿಸಿಕೆ ವ್ಯಕ್ತಪಡಿಸಿದ್ದಾರೆ. ಅವರಿಗೆ ಹೃತ್ಪೂರ್ವಕ ವಂದನೆಗಳು.

ದಾಸೋಹದ ಎಲ್ಲ ಪ್ರಸ್ತುತಿಗಳನ್ನೂ ಕ್ರೋಢೀಕರಿಸಿ ಸುಂದರ ಮುಖಪುಟದೊಂದಿಗೆ ಸಂಚಿಕೆಯನ್ನು ಒಂದು ಸಂಗ್ರಹ ಯೋಗ್ಯ ಕೃತಿಯನ್ನಾಗಿ ಹೊರತಂದಿರುವ ಶ್ರೀ ಶೃಂಗೇಶ್ವರ ಶರ್ಮರವರಿಗೆ ಹೃತ್ಪೂರ್ವಕ ವಂದನೆಗಳು.

ನೂತನ ಸಂಚಿಕೆ ನಿಮ್ಮ ಮುಂದಿದೆ. ಓದಿ ನಿಮ್ಮ ಅಭಿಪ್ರಾಯವನ್ನು ಮುಕ್ತವಾಗಿ ಹಂಚಿಕೊಳ್ಳಿ. ಕೃತಿಯ ಗುಣದೋಷಗಳನ್ನು ಸ್ವೀಕರಿಸುವ ಪ್ರಾಂಜಲ ಮನಸ್ಸು ನಮ್ಮದಾಗಿದೆ.

ಧನ್ಯವಾದಗಳು,

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ದಾಸೋಹ ವೇದಿಕೆ

---

*ಸೂಚನೆ: ೧೭೭ನೆಯ ದಾಸೋಹ ನಡೆದದ್ದು ಮೇ ೨೦೨೦ರಲ್ಲಿ. ಜೂನ್ ೨೦೨೦ರ ದಾಸೋಹದ ಸಂಖ್ಯೆಯನ್ನು ೧೭೮ರ ಬದಲಿಗೆ ತಪ್ಪಾಗಿ ೧೭೯ ಎಂದು ನಮೂದಿಸಿದ ಕಾರಣ, ಅಲ್ಲಿಂದೀಚೆಗೆ ದಾಸೋಹಗಳ ಸಂಖ್ಯೆ ಹಾಗೆಯೇ ಮುಂದುವರಿದು ಬಂತು. ಇದನ್ನು ಸರಿಪಡಿಸಲು ನವೆಂಬರ್ ೨೦೨೧ರ ದಾಸೋಹದ ಸಂಖ್ಯೆಯನ್ನು ೧೯೫/೨ ಎಂದು ನಮೂದಿಸಲಾಗಿದೆ. ಡಿಸೆಂಬರ್ ೨೦೨೧ರಲ್ಲಿ ನಡೆದದ್ದು ೧೯೬ನೆಯ ದಾಸೋಹ.

ದಾಸೋಹದ ಪುಟಗಳಲ್ಲಿ . . .

ಮುಖಚಿತ್ರ : ಕನ್ನಡ ರಾಜ್ಯೋತ್ಸವ ಮತ್ತು ದೀಪಾವಳಿ ಚಿತ್ರ ಕೃಪೆ : ಅಂತರಜಾಲ

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ನೋಡಿಯೋ ಸಾಹಿತ್ಯ ದಾಸೋಹ ೧೯೫/೨

ಕಾರ್ಯಕ್ರಮ ವರದಿ: ಹು.ವಾ.ಶ್ರೀಪ್ರಕಾಶ್

ದಿನಾಂಕ ೧೩.೧೧.೨೦೨೧ರಂದು ಶನಿವಾರ ಮಧ್ಯಾಹ್ನ ೩.೩೦ಕ್ಕೆ ಶ್ರೀ ಗುರುರಾಜ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಆರಂಭವಾಯಿತು. ಶ್ರೀ ಸುನಿಲ್ ಹಳೆಯೂರು ಅವರು ಎಲ್ಲರನ್ನೂ ಸ್ವಾಗತಿಸಿ ಅಧ್ಯಕ್ಷರ ಪರಿಚಯ ಮಾಡಿದರು.



ಶ್ರೀ ಗುರುರಾಜ ಶಾಸ್ತ್ರಿಯವರು ಬಿಎಸ್ಸಿ, ಎಂಸಿಎ ಪದವೀಧರರು. ೧೯೯೫ರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನ ಅಧಿಕಾರಿಯಾಗಿ ೧೭ ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಪಡೆದರು. ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ತಂತ್ರಾಂಶದ ಅಭಿವೃದ್ಧಿಪಡಿಸಿದ್ದಾರೆ. ಮೂರು ನಾಟಕ ಒಂದು ಕಾದಂಬರಿ ಮತ್ತು ಹಲವಾರು ಕವನ ಲೇಖನಗಳನ್ನು ಬರೆದಿದ್ದಾರೆ. ಸಮನ್ವಯ ಸಮಿತಿಯ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ. ಸ್ವಯಂ ನಿವೃತ್ತಿಯ ನಂತರ ಸಂಗೀತದ ಕಲಿಕೆ, ವನ್ಯಜೀವಿ ಛಾಯಾಗ್ರಹಣ, ಚಾರಣಗಳಲ್ಲಿ ತೊಡಗಿಕೊಂಡಿದ್ದಾರೆ. ಗುರುರಾಜ ಶಾಸ್ತ್ರಿಯವರು ಸಮನ್ವಯ ಸಮಿತಿಯ ಆಸ್ತಿ ಎಂದರೆ ತಪ್ಪಾಗಲಾರದು ಎಂದು ಹೇಳಿ ಎಲ್ಲರನ್ನೂ ಸ್ವಾಗತಿಸಿದರು.

ನಂತರ ವೇದಿಕೆಯ ೨೦ ಸದಸ್ಯರು ತಮ್ಮ ಪ್ರಸ್ತುತಿಗಳನ್ನು ಮಂಡಿಸಿದರು. ಕೊನೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಗುರುರಾಜ ಶಾಸ್ತ್ರಿಯವರು ಎಲ್ಲ ಪ್ರಸ್ತುತಿಗಳನ್ನೂ ವಿಶ್ಲೇಷಿಸಿ ಸವಿಸ್ತಾರವಾಗಿ ಆಕರ್ಷಕವಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಅಧ್ಯಕ್ಷರ ಅಭಿಪ್ರಾಯಗಳನ್ನು ಈ ಸಂಚಿಕೆಯ ಕೊನೆಯಲ್ಲಿ ನೀಡಲಾಗಿದೆ.

ಕಾರ್ಯಕ್ರಮ ನಿರ್ವಹಣೆ ಮಾಡಿದ ಶ್ರೀ ಕೆ.ಎನ್.ಮಹಾಬಲರವರು ವಂದನಾರ್ಪಣೆ ಮಾಡಿ ಅಧ್ಯಕ್ಷತೆ ವಹಿಸಿದ್ದ ಗುರುರಾಜ ಶಾಸ್ತ್ರಿಯವರಿಗೆ, ತಮ್ಮ ಸ್ವರಚಿತ ಬರಹಗಳನ್ನು ಪ್ರಸ್ತುತಪಡಿಸಿದ ಎಲ್ಲಾ ಸದಸ್ಯರಿಗೆ, ಆತಿಥ್ಯ ನೀಡಿದ ರೇಣುಕಾ ದೇಸಾಯಿಯವರಿಗೆ, ತಂತ್ರಜ್ಞಾನ ಸಹಕಾರ ನೀಡಿದ ಶ್ರೀ ಗುರುಪ್ರಸಾದ್ ಮತ್ತು ಶ್ರೀ ರವೀಂದ್ರ ಬಾಳಿಹಳ್ಳಿಯವರಿಗೆ, ಪಿಡಿಎಫ್ ಆವೃತ್ತಿ ಪ್ರಕಟಿಸುವ ಶ್ರೀ ಶೃಂಗೇಶ್ವರ ಶರ್ಮರವರಿಗೆ, ಸಂಚಾಲಕ ಸಮಿತಿಯ ಸದಸ್ಯರಿಗೆ ಮತ್ತು ನೋಡುಗರಿಗೆ ವಂದನೆಗಳನ್ನು ಸಲ್ಲಿಸಿದರು.

*****

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ತಾಳಮದ್ದಳೆ - ಬಲಿಚರಿತ್ರೆ

ಕಾರ್ಯಕ್ರಮ ವರದಿ: ಹು.ವಾ.ಶ್ರೀಪ್ರಕಾಶ್

ಕರ್ನಾಟಕ ರಾಜ್ಯೋತ್ಸವ ಮತ್ತು ದೀಪಾವಳಿ ಹಬ್ಬದ ವಿಶೇಷ ಕಾರ್ಯಕ್ರಮವಾಗಿ ಯಕ್ಷಗಾನ ತಾಳಮದ್ದಳೆ "ಬಲಿ ಚರಿತ್ರೆ"ಯನ್ನು ದಿನಾಂಕ 31–10–2021 ಭಾನುವಾರ ಸಂಜೆ 05.00 ಗಂಟೆಗೆ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯ ಅಂತರಜಾಲ ಮುಖೇನ ಏರ್ಪಡಿಸಲಾಗಿತ್ತು.



ವೇದಿಕೆಯ ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ.ರವೀಂದ್ರರವರು ಪ್ರಾಸ್ತಾವಿಕ ಮಾತುಗಳನ್ನಾಡಿ ದೀಪಾವಳಿ ಹಬ್ಬ ಮತ್ತು 66ನೇ ರಾಜ್ಯೋತ್ಸವದ ಅಂಗವಾಗಿ ವಿಶೇಷ ಕಾರ್ಯಕ್ರಮ 'ಬಲಿ ಚರಿತ್ರೆ – ಯಕ್ಷಗಾನ ತಾಳಮದ್ದಲೆ' ಹಮ್ಮಿಕೊಂಡಿದ್ದು ಶ್ರೀ ಗಣಪತಿ ಹೆಗಡೆಯವರು ಕಾರ್ಯಕ್ರಮದ ಎಲ್ಲ ವ್ಯವಸ್ಥೆ ಮಾಡಿದ್ದಾರೆ ಎಂದು ಹೇಳಿ ವೇದಿಕೆಯ ಇತರ ಚಟುವಟಿಕೆಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು.

ರಾಜ್ಯೋತ್ಸವದ ಅಂಗವಾಗಿ ವಿಷಯಾಧಾರಿತ ಮೂವತ್ತು ಸರಣಿ ಲೇಖನ ಬರೆಯಲು ವಿನಂತಿಸಿ ಕೊಂಡಿದ್ದೆವು. ಇದಕ್ಕೆ ಉತ್ತಮ ಪ್ರತಿಸ್ಪಂದನೆ ಬಂದಿದ್ದು, ವೈವಿಧ್ಯಮಯ ವಿಷಯಗಳ ಬಗ್ಗೆ ಹಲವರು ಸರಣಿ

ಲೇಖನಗಳನ್ನು ನಾಳೆಯಿಂದ ಬರೆಯಲಿದ್ದಾರೆ. ವೇದಿಕೆಯ ಸದಸ್ಯರು ಲೇಖನಗಳನ್ನು ಓದಿ ಪ್ರತಿಕ್ರಿಯೆ ನೀಡಿ ಎಂದರು. ವೇದಿಕೆಯ ಮತ್ತೊಂದು ವಿಶಿಷ್ಟ ಕಾರ್ಯಕ್ರಮವಾದ 'ಖೋ ಕಾದಂಬರಿ' ಯಶಸ್ವಿಯಾಗಿ ಮೂಡಿಬರುತ್ತಿದೆ ಎಂದ ಅವರು ಎಚ್ಚೆಸ್ಕೆ ಬರಹಗಳ ಕೇಳ್ಹೊತ್ತಿಗೆ ಸ್ವಲ್ಪ ಬಾಕಿ ಉಳಿದಿದ್ದು ನವಂಬರ್ ಹದಿನೈದರ ಹೊತ್ತಿಗೆ ಈ ಕಾರ್ಯ ಮುಗಿಸಬೇಕೆಂಬ ಯೋಚನೆ ಇದೆ ಎಂದರು.

ಸ್ವಾತಂತ್ರ್ಯ ಪೂರ್ವ ಕನ್ನಡ ದೇಶಭಕ್ತಿ ಗೀತೆಗಳ ಕಾರ್ಯಕ್ರಮ ನವಂಬರ್ 20 ಅಥವಾ 21ರಂದು ನಡೆಯಲಿದ್ದು ಸದಸ್ಯರು ಸಿದ್ಧತೆ ಮಾಡಿಕೊಳ್ಳುವಂತೆ ವಿನಂತಿಸಿದರು. ನವಂಬರ್ 13ರಂದು 195/2 ನೇ ದಾಸೋಹ ನಡೆಯಲಿದೆ. ಇನ್ನೂರನೇ ದಾಸೋಹವನ್ನು ವಿಶಿಷ್ಟವಾಗಿ ಹಮ್ಮಿಕೊಳ್ಳುವ ಆಲೋಚನೆ ಇದೆ ಎಂದರು.

ಶ್ರೀ ಗಣಪತಿ ಹೆಗಡೆಯವರು ತಾಳಮದ್ದಲೆಯ ಹಿಮ್ಮೇಳ ಹಾಗೂ ಮುಮ್ಮೇಳದ ಕಲಾವಿದರನ್ನು ಪರಿಚಯಿಸಿ, ಈ ಕಾರ್ಯಕ್ರಮ ನಡೆಸಲು ನಿನಾದ ರಾಮಣ್ಣ ರವರ ಸಹಕಾರದಿಂದ ಸಾಧ್ಯವಾಗಿದೆ ಎಂದು ಹೇಳಿದರು.

ನಂತರ ಮನಮೋಹಕವಾದ ಬಲಿಚರಿತ್ರೆ ತಾಳಮದ್ದಳೆ ಕಾರ್ಯಕ್ರಮ ನಡೆಯಿತು. ಭಾಗವತರು, ಚಂಡೆ ಮದ್ದಳೆ ಮೃದಂಗ ವಾದಕರು, ಅರ್ಥಧಾರಿಗಳು ಬೇರೆಬೇರೆ ಪ್ರದೇಶಗಳಲ್ಲಿದ್ದುಕೊಂಡು, ಯಾವುದೇ ಚ್ಯುತಿ ಬರದಂತೆ ಸರಾಗವಾಗಿ ಅಂತರಜಾಲದ ಮೂಲಕ ಕಾರ್ಯಕ್ರಮ ನಡೆಸಿಕೊಟ್ಟದ್ದು ಒಂದು ವಿಶೇಷವೇ ಸರಿ.

ಕೊನೆಯಲ್ಲಿ ವಂದನಾರ್ಪಣೆ ಮಾಡಿದ ಶ್ರೀ ರವೀಂದ್ರ ಬಾಳಿಹಳ್ಳಿಯವರು, ಕವಿ ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ ವಿರಚಿತ ಬಲಿ ಚರಿತ್ರೆ ತಾಳಮದ್ದಳೆ ವಿಶಿಷ್ಟ ಅಪರೂಪದ ಅಮೋಘ ಕಾರ್ಯಕ್ರಮ ಎಂದು ಹೇಳಿ ಬಲಿ ಚರಿತ್ರೆಯ ಹಲವು ಘಟನೆಗಳನ್ನು ಸೊಗಸಾಗಿ ಸಂಕ್ಷಿಪ್ತವಾಗಿ ವಿಶ್ಲೇಷಿಸಿದರು.

ಭಾಗವತರಾದ ಶ್ರೀ ಗಣೇಶ ಯಾಜಿ, ಮೃದಂಗ ವಾದಕರಾದ ಶ್ರೀ ಪಿ.ಕೆ. ಹೆಗಡೆ, ಚಂಡೆವಾದಕ ಕುಮಾರ ಮಯೂರ್ ಪಿ.ಹೆಗಡೆ, ವ್ಯವಸ್ಥೆ ಮಾಡಿದ ನಿನಾದ ರಾಮಣ್ಣ ಕುಮಟಾರವರಿಗೆ, ಪಾತ್ರಧಾರಿಗಳಾದ ಶ್ರೀ ಗಣಪತಿ ಹೆಗಡೆ (ಬಲಿ), ಶ್ರೀ ಮಹಾಬಲ ಭಟ್ (ವಾಮನ), ಶ್ರೀ ಎಚ್.ವಿ.ಶ್ರೀಪ್ರಕಾಶ್ (ಶುಕ್ರಾಚಾರ್ಯ), ಶ್ರೀ ಜಗದೀಶ್ ಭಟ್ (ಕಶ್ಯಪ) ರವರಿಗೆ, ತಂತ್ರಜ್ಞಾನ ಸಹಕಾರ ನೀಡಿದ ಶ್ರೀ ಎಚ್.ಎಲ್.ಗುರುಪ್ರಸಾದ್ ಹಾಗೂ ಶ್ರೀ ಗುರುರಾಜ ಶಾಸ್ತ್ರಿಯವರಿಗೆ, ಕಾರ್ಯಕ್ರಮ ನಿರ್ವಹಣೆಮಾಡಿದ ಶ್ರೀಮತಿ ರೇಣುಕಾ ದೇಸಾಯಿಯವರಿಗೆ, ಹೊಸ ಹೊಸ ಕನಸುಗಳಿಂದ ವೇದಿಕೆ ಯನ್ನು ಶ್ರೀಮಂತಗೊಳಿಸುತ್ತಿರುವ ಶ್ರೀ ಬೆಂ.ಶ್ರೀ.ರವೀಂದ್ರ ಅವರಿಗೆ, ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರೋತ್ಸಾಹಿಸಿದ ಎಲ್ಲ ವೀಕ್ಷಕರಿಗೆ ಹಾಗೂ ಸಂಚಾಲಕ ವರ್ಗದವರಿಗೆ ಧನ್ಯವಾದಗಳನ್ನು ಅರ್ಪಿಸಿದರು.

*****

ಲಲಿತ ಪ್ರಬಂಧ

ದಂತಕಥೆ

- ನಾಗರತ್ನ ಚಂದ್ರಶೇಖರ್

ಇದು ದಂತಚೋರ ಕುಖ್ಯಾತ ವೀರಪ್ಪನ್ ಕಥೆ ಅಲ್ಲ. ನಮ್ಮ ವಕ್ರದಂತ ವಿನಾಯಕ ಚೌತಿಯಂದು ಚಂದ್ರನ ಮೇಲೆ ಸಿಟ್ಟಾಗಿ ತನ್ನ ದಂತವನ್ನೇ ಮುರಿದುಕೊಂಡ ಪ್ರಕರಣವಲ್ಲ. ನನ್ನದೇ ಬಾಯೊಳಗಿನ ಸೇತುವೆಗಳು, ಕಿರೀಟಗಳೋ, ಟೋಪಿಗಳೋ ಎಂದು ಕರೆಯುವ ಶಿಲಾನ್ಯಾಸ, ಸ್ಮಾರಕಗಳ ದಂತಕಥೆ. ಹಲ್ಲುಗಳೇ ಬಾಯಿಗೆ ವಜ್ರದ ಆಭರಣ ಎಂದು ಹಲ್ಲಿಲ್ಲದವರು ಒಪ್ಪಿಕೊಂಡು ಹಲ್ಲಿನ ಮೇಲೆ ಹಲ್ಲೆಯಾಗದಂತೆ ಜೋಪಾನ ಮಾಡಿಕೊಳ್ಳಿ. ಆಮೇಲೆ ಹಲ್ಲು ಹಲ್ಲೆಂದು ಹಲುಬೇಕಾದೀತು ಹುಲುಮಾನವರು ಎಂಬ ಅನುಭವದ ಮಾತನ್ನು ಹೇಳುತ್ತಾರೆ. ಪಳಪಳ ಹೊಳೆಯುವ ಹಲ್ಲುಗಳು ದಾಳಿಂಬೆ ಬೀಜಗಳಂತೆ, ಮುತ್ತಿನ ಸಾಲಿನಂತಹ ಹಲ್ಲುಗಳಿದ್ದಾಗ ನಮ್ಮ ಮಾತು, ನಗು, ಮುಖ ಎಲ್ಲವೂ ಸುಂದರ, ಸುಂದರ. ಅದಕ್ಕಾಗಿ ನೀವು ಯಾವ ಪೇಸ್ಟು ಬಳಸಬೇಕೆಂದು ಜಾಹೀರಾತು ಕಂಪನಿಯವರು ಹೇಳುತ್ತಲೇ ಇರುತ್ತಾರೆ. ಹಲ್ಲುಗಳು ಆಹಾರ ನುರಿಸಲು ಮಾತ್ರವಲ್ಲ, ಅಪಾಯ ಎದುರಾದರೆ ಕಚ್ಚಲು ಸಹ ಬಳಸಬಹುದಾದ ಅಸ್ತ್ರವಾಗಿ ಸಿಗುವ ಸಿದ್ಧ ಆಯುಧ. ಪುಟ್ಟ ಮಕ್ಕಳು ಹಲ್ಲು ಬರಲು ಪ್ರಾರಂಭಿಸಿದಾಗ ತುರಿಕೆಯಾಗಿ ಸಿಕ್ಕದ್ದನ್ನೆಲ್ಲ ಕಚ್ಚಲು ಪ್ರಾರಂಭಿಸುತ್ತಾರೆ. ಮನೆಗೆ ನಾಯಿಮರಿ ತಂದರೆ ಬಟ್ಟೆ, ಶೂಗಳು, ಕೊನೆಗೆ ಕುರ್ಚಿ ಮೇಜುಗಳ ಕಾಲುಗಳು ಕೂಡ ಅವುಗಳ ಬಾಯಿಗೆ ಸಿಕ್ಕಿ ಚೂರುಚೂರಾಗುತ್ತವೆ,

ಕೋರೆಹಲ್ಲು, ಬಾಚಿಹಲ್ಲು, ಕಿಂಡಿ ಹಲ್ಲುಗಳ ಜೊತೆಗೆ ಹುಳುಕು ಹಲ್ಲುಗಳ ವಿಶಾಲ ಚರಿತ್ರೆಯೇ ದಂತಕತೆಯಾಗಿ ಹುಟ್ಟಿನಿಂದ ಸಾಯುವ ತನಕ ವೈದ್ಯರ ನೆರವನ್ನು ಪ್ರತಿಯೊಬ್ಬರು ಅಪೇಕ್ಷೆಪಡುವಂತಾಗಿದೆ. 32 ಹಲ್ಲುಗಳ ಎರಡು ಸಾಲುಗಳಲ್ಲಿ ಎಷ್ಟನ್ನು ನಾವು ಉಳಿಸಿಕೊಳ್ಳಬಲ್ಲೆವು ಎಂಬುದೇ ದೊಡ್ಡ ಪ್ರಶ್ನೆ, ಪ್ರತಿಯೊಬ್ಬರಿಗೂ. ದಂಡಯಾತ್ರೆ ಮಾಡಿದ ಅಲೆಕ್ಸಾಂಡರ್ ಮತ್ತು ಎಸೆಸೆಲ್ಸಿ ಪರೀಕ್ಷೆಗೆ ಐದಾರು ಬಾರಿ ದಂಡಯಾತ್ರೆ ಮಾಡುವ ವಿದ್ಯಾರ್ಥಿಗಳಂತೆ, ದಂತ ಯಾತ್ರೆಯು ಒಂದು ಹಂತದಲ್ಲಿ ಕೆಲವರ ಪಾಲಿಗೆ ಅನಿವಾರ್ಯವಾಗಿ ಬಿಡುತ್ತದೆ. ಬೇವಿನ ಕಡ್ಡಿಯಿಂದ ಹಿಡಿದು ಭತ್ತದ ಹೊಟ್ಟಿನ ಸುಟ್ಟ ಬೂದಿಯವರಿಗೆ ಆನಂತರ ನಂಜನಗೂಡು ಹಲ್ಲುಪುಡಿಯೋ ಬೇರೆ ಯಾವುದೋ ಕಂಪನಿಯ ಹಲ್ಲು ಪುಡಿಯು ಹೀಗೆ ನಾನಾ ನಮೂನೆಯ ಟೂತ್ ಪೇಸ್ಟ್ ಪ್ರಯಾಣ ಎಲ್ಲರಿಗೂ ಸಲ್ಲಿಸಲಾಗಿದ್ದರೂ ಕಾಲ ಸರಿದಂತೆ ರಸ್ತೆಯಲ್ಲಿ ಹೇಗೆ ಹೊಂಡಗಳು ಬಾಯ್ದೆರೆಯುವುದು, ಗುಂಡಿಗಳಾಗುವಂತೆ ಹುಳುಕಾದ ಹಲ್ಲುಗಳ ಗುಂಡಿಗಳು ದಂತಯಾತ್ರೆಗೆ ಹಸಿರು ನಿಶಾನೆ ತೋರಿಸಿ ಬಿಡುತ್ತವೆ. ಹೀಗೆ ಹಿಪಾಪಟಮಸ್ ಪ್ರಾಣಿಯು ಬಾಯಿ ತೆರೆದಂತೆ ಗಂಟೆಗಟ್ಟಲೆ ದಂತವೈದ್ಯರ ಮುಂದೆ ತೆರೆದ ಬಾಯೊಳಗೆ ಅವರು ಕೈಹಾಕಿ ವಿವಿಧ ಶಸ್ತ್ರಗಳ ಪ್ರಯೋಗ ಚಿಕಿತ್ಸೆ ಮಾಡುವಾಗ ಜೀವವೇ ಕೈಗೆ ಬಂದುಬಿಡುತ್ತದೆ.

ಮಂಗಳೂರಿನಲ್ಲಿ ಹೀಗೆ ನಾನೊಮ್ಮೆ ಹಲ್ಲಿನ ರಿಪೇರಿಗೆ ದಂತ್ಯ ವೈದ್ಯ ಕಾಲೇಜಿಗೆ ಹೋಗಿದ್ದೆ. ಅಲ್ಲಿ ವಿದ್ಯಾರ್ಥಿಗಳ ಸಣ್ಣ ಸಣ್ಣ ಗುಂಪುಗಳಿಗೆ ನುರಿತ ಅಧ್ಯಾಪಕರು ಪ್ರಯೋಗಕ್ಕೆ, ಜ್ಞಾನಾರ್ಜನೆಗೆ ಸ್ಪೆಸಿಮನ್ ಗಳಾಗಿ ನಮ್ಮಂಥವರನ್ನು

ಸುತ್ತುವರಿಯುತ್ತಾರೆ. ನನ್ನ ಹುಳುಕು ಹಲ್ಲಿಗೆ ಡ್ರಿಲ್ ಮಾಡಬೇಕಾಗಿತ್ತು. ಅದಕ್ಕಾಗಿ ಮುಂದೆ ಬಂದ ವಿದ್ಯಾರ್ಥಿನಿಯದು ಮೊದಲ ಪ್ರಯತ್ನವಿರಬೇಕು. ಅವಳ ಕೈ ನಡುಗುತ್ತಿತ್ತು. ತೆರೆದ ಬಾಯಿಂದ ನಾನು ಆತಂಕದಿಂದ ಅವಳನ್ನೇ ನೋಡುತ್ತಿದ್ದೆ. ಮಿಕ್ಕವರು ಅವಳನ್ನು ಹುರಿದುಂಬಿಸುತ್ತಿದ್ದಾರೆ. ನನಗೋ ಹುಲಿಯ ಕೈಗೆ ಬಾಯಿ ಕೊಟ್ಟಂತೆ ಭಯವಾಗತೊಡಗಿತ್ತು. ಧೈರ್ಯಮಾಡಿ ನಾನು ಕುರ್ಚಿಯಿಂದ ಮೇಲೆದ್ದುಬಿಟ್ಟೆ. ಪ್ರಥಮ ಚುಂಬನ ದಂತ ಭಗ್ನ ಆಗಬಾರದು ಎಂದು. ಅವಳ ಮುಖ ಎಷ್ಟೊಂದು ಕಪ್ಪಿಟ್ಟಿತ್ತು ಎಂದುಕೊಂಡೆನಾದರೂ ನಾನಂತೂ ಬಚಾವಾದೆ ಎಂದು ಬೇರೆ ವೈದರ ಬಳಿ ಓಡಿದ್ದೆ.

ಮುಂದೆ ಚಿನ್ನ-ಬೆಳ್ಳಿ ಸಿಮೆಂಟು ಯಾವುದನ್ನು ಬೇಕಾದರೂ ದಂತ ಕೋಳಿಗಳಲ್ಲಿ ತುಂಬಿಸಿಕೊಂಡು ಒಂದಷ್ಟು ವರ್ಷ ನಿರಾಳವಾಗಬಹುದು. ಆದರೆ ಹಲ್ಲುಗಳಿಗೆ ಪ್ರಮೋಷನ್ ಇಲ್ಲದಿದ್ದರೆ ಹೇಗೆ? ಮಳೆ ಬಂದು ಬಂದು ರಸ್ತೆಗಳಲ್ಲಿ ಆದ ಹೊಂಡಗಳಿಗೆ ಕಾರ್ಪೊರೇಷನ್ ನವರು ರಿಪೇರಿ ಮಾಡುತ್ತಲೇ ಇರುವಂತೆ ಸೇತುವೆಗಳೇ ಕುಸಿದು ಬೀಳುವಾಗ ಹೊಂಡಗಳೇನು ಮಹಾ?

ಚಿಕ್ಕಂದಿನಲ್ಲಿ ಹಾಲುಹಲ್ಲುಗಳು ಬಿದ್ದಾಗ ಅಮ್ಮ ಅದಕ್ಕೆ ಸಗಣಿ ಮೆತ್ತಿ ಹೆಂಚಿನ ಮೇಲೆ ದೂರಕ್ಕೆ ಎಸೆಯುತ್ತಿದ್ದ ನೆನಪು. ಈಗಿನ ಪೀಳಿಗೆಯ ಮಕ್ಕಳಿಗೆ ಫೇರಿ ಬಂದು ಉಡುಗೊರೆ ಕೊಡುತ್ತಾರೆ ಎಂದು ತಾಯಿ ಸಮಜಾಯಿಸಿ ಮಾಡಿ ಹಲ್ಲಿನ ನೋವನ್ನು ಮರೆಸುತ್ತಾರೆ. ದೊಡ್ಡವರಾದ ಮೇಲೆ ಬರುವ ವಿಸ್ಡಮ್ ಟೀತ್ ಎಂದರೆ ಬುದ್ಧಿವಂತ ಹಲ್ಲು ಸಾಕಷ್ಟು ತೊಂದರೆ ಕೊಡುತ್ತದೆ. ಅದನ್ನು ವೈದ್ಯರು ಅರಿವಳಿಕೆ ಕೊಟ್ಟು ಬೇಕಾದರೆ ತೆಗೆದುಬಿಡುತ್ತಾರೆ. ಬುದ್ಧಿ ಬಂತೋ ಹೋಯಿತೋ ಗೊತ್ತಿಲ್ಲ, ಹಲ್ಲಂತೂ ಹೋಗಿ ನೋವು ಇಲ್ಲವಾಗುತ್ತದೆ. ವಯಸ್ಸಾದಂತೆಲ್ಲ ಹಲ್ಲುಗಳನ್ನು, ಎಲ್ಲಾ ಹಲ್ಲುಗಳು ಬಿದ್ದು ಹೋಗಿ ಬೊಚ್ಚುಬಾಯಿ ಆದಾಗ ಕೃತಕ ದಂತ ಪಂಕ್ತಿಗಳನ್ನು ಹಾಕಿಸಿಕೊಳ್ಳಬಹುದು ಕೂಡ. ಸಾಕಷ್ಟು ಹಣ ಖರ್ಚು ಮಾಡಿದರೆ ಹಲ್ಲುಗಳನ್ನು ರಿಪೇರಿ ಮಾಡಿಸಿ ಮತ್ತಷ್ಟು ವರ್ಷ ಉಳಿಸಿಕೊಳ್ಳಬಹುದು ಕೂಡ. ಕೆಟ್ಟು ನಿಂತ ಗಾಡಿಗಳು ಗ್ಯಾರೇಜಿಗೆ ರಿಪೇರಿಗೆ ಬಂದಂತೆ ಹಲ್ಲಿನ ರಿಪೇರಿಗೆ ದಂತ ವೈದ್ಯರ ಕ್ಲಿನಿಕ್ಕುಗಳಲ್ಲಿ ದೊಡ್ಡ ಸಾಲೇ ಇರುತ್ತದೆ.

ಕಾಲಾಂತರದಲ್ಲಿ ಈ ದಂತಕಥೆಯನ್ನು ಬರೆಯುವ ಹೊತ್ತಿನಲ್ಲಿ ನನ್ನ ಎಡ ದವಡೆಯ ಹಲ್ಲು ನೋವಿನಿಂದಾಗಿ ಅದಕ್ಕೆ ರೂಟ್ ಕೆನಾಲ್ ಚಿಕಿತ್ಸೆ ಮಾಡಬೇಕೆಂದು ವೈದ್ಯರು ಹೇಳಿ ಸೇತುವೆಯನ್ನು ಒಡೆದು ಪುಡಿಮಾಡಿ ಕಿತ್ತುಹಾಕಿದರು. ಮಳೆಗಾಲದಲ್ಲಿ ಬ್ರಿಡ್ಜ್ ಮುರಿದರೆ ಪ್ರವಾಹದಲ್ಲಿ ಜನ ಎಷ್ಟು ಸುರಕ್ಷಿತವಾಗಿ ಪ್ರಯಾಣಿಸಲು ಸಾಧ್ಯ ಅಲ್ಲವೇ? ಹೊಸ ಬ್ರಿಡ್ಜ್ ಬರುವವರೆಗೂ ನನಗೂ ಗಟ್ಟಿಯಾದ ಆಹಾರದ ಪ್ರಯಾಣ ಹೊಟ್ಟೆಯೊಳಗೆ ಸಾಧ್ಯವಾಗಿರಲಿಲ್ಲ. ಕಿರೀಟ ಧರಿಸಲು ಬನ್ನಿ ಎಂದು ಕರೆ ಬಂದಾಗ ಹಿಂದೆ ಕಿರೀಟಧಾರಣೆ ಆಗಿತ್ತು. ಈಗ ಹೊಸ ಸೇತುವೆಗಾಗಿ ಟೆಂಡರ್ ಕೊಟ್ಟಾಗಿದೆ. ಉದ್ಘಾಟನೆಗಾಗಿ ಕಾಯಲೇಬೇಕಾಗಿದೆ. ಅಲ್ಲಿಯತನಕ ಮಾತುಗಳಿಗೆ ಕಡಿವಾಣ ಹಾಕಬೇಕಿದೆ. ಲವಂಗ, ಲವಂಗದೆಣ್ಣೆ, ಸೀಬೆ ಎಲೆ ಇತ್ಯಾದಿಗಳ ಪ್ರಯೋಗದಿಂದ ನೋವು ಕೊಂಚ ಉಪಶಮನ ಆಗುತ್ತಿದೆ. ನುಡಿದರೆ ಮುತ್ತಿನ ಹಾರದಂತಿರಬೇಕು ಎನ್ನುವುದಕ್ಕೆ ಬದಲಾಗಿ 'ನುಡಿದರೆ ಕಿಂಡಿ ಹಲ್ಲು ಕಾಣದಂತಿರಬೇಕು' ಎಂದು ಬದಲಾಯಿಸಿಕೊಂಡೆ.

ವರ್ಷಗಳು ಕಳೆದಂತೆ ಬಾಯೊಳಗೆ ಸೇತುವೆಗಳು ಬಂದವು ಅದಕ್ಕೆ ಮುಂಚೆ ಅಂದರೆ ಕ್ಯಾಪುಗಳ ಪ್ರಯೋಗವು ಆಗಿತ್ತಲ್ಲ. ಇಂಜಿನಿಯರುಗಳು ಸಿಮೆಂಟು, ಕಬ್ಬಿಣ ಹಾಕಿ ಕಟ್ಟಿದ ಸೇತುವೆಗಳು ಮುರಿದು ಬೀಳುವುದನ್ನು ಇತ್ತೀಚೆಗೆ ನಾವು ನೋಡಿದ್ದೇವೆ. ಆದರೆ ಬಾಯೊಳಗಿನ ಸೇತುವೆಗಳು ಹೀಗೆ ಹೇಳಬಹುದು ಎಂಬ ಕಲ್ಪನೆಯೇ ನನಗಿರಲಿಲ್ಲ. ಯೂರೋಪ್ ಪ್ರವಾಸದಲ್ಲಿ ನಾವು ಲಂಡನ್ ಬ್ರಿಡ್ಜ್ ನೋಡಲು ಹೋಗಬೇಕಿತ್ತು. ಆ ದಿನ ಬೆಳಿಗ್ಗೆ ನಮ್ಮ ಪ್ರವಾಸದ ಗುಂಪಿನ ಒಬ್ಬರ ಹುಟ್ಟುಹಬ್ಬವಿದ್ದುದರಿಂದ ಪ್ರವಾಸದ ಮೆನೇಜರ್ ಎಲ್ಲರಿಗೂ ಚಾಕಲೇಟ್ ಹಂಚಿದ. ಅದು ವಿದೇಶಿ ಚಾಕ್ಲೇಟ್ ಇರಬಹುದೆಂಬ ಆಮಿಷದಿಂದ ಚಪ್ಪರಿಸಿ ತಿಂದೆ. ಅದು ಹಲ್ಲಿಗೆ ಹೇಗೆ ಅಂಟಿಕೊಂಡು ಬಿಟ್ಟಿತೆಂದರೆ ಕೆಲವೇ ಕ್ಷಣಗಳಲ್ಲಿ ಕಟುಂ ಎಂಬ ಶಬ್ದ ಬಂತು. ಅಯ್ಯೋ ವಿದೇಶಿ ಚಾಕ್ಲೇಟಿನಲ್ಲಿ ಕಲ್ಲಿರಬಹುದು ಎಂದುಕೊಂಡು ಬಾಯೊಳಗಿದ್ದುದನ್ನು ಕೈಗೆ ಉಗಿದುಕೊಂಡು ನೋಡಿದರೆ ಅಂಟಾದ ಚಾಕಲೇಟ್ ಜೊತೆಗೆ ಹೊರಬಂದದ್ದು 3000 ರುಪಾಯಿ ಖರ್ಚು ಮಾಡಿ ಹಾಕಿಸಿಕೊಂಡಿದ್ದ ನನ್ನ ಸೇತುವೆ. ಲಂಡನ್ ಬ್ರಿಡ್ಜ್ ಇಸ್ ಫಾಲಿಂಗ್ ಡೌನ್... ಫಾಲಿಂಗ್ ಡೌನ್... ಎಂದು ಚಿಕ್ಕಂದಿನಲ್ಲಿ ಹೇಳುತ್ತಿದ್ದ ಹಾಡು ನೆನಪಾಯಿತು. ಲಂಡನ್ ಬ್ರಿಡ್ಜ್ ನಿಜಕ್ಕೂ ಬಿದ್ದಿರಲಿಲ್ಲ. ನನ್ನ ಹಲ್ಲಿನ ಬ್ರಿಡ್ಜಂತೂ ಬಿದ್ದುಹೋಗಿತ್ತು. ಅದರ ರಿಪೇರಿ ಆಗಲು ಮತ್ತೆ ಭಾರತಕ್ಕೆ ಬರಬೇಕಾಗಿತ್ತು. ಆದರೆ ನಾವು ಅಲ್ಲಿಂದ ಅಮೆರಿಕಾಗೆ ಮಗಳ ಮನೆಯಲ್ಲಿರಲು ಹೋಗಬೇಕಿದ್ದರಿಂದ ಆರು ತಿಂಗಳ ನಂತರ ಭಾರತಕ್ಕೆ ಬಂದು ಪರ್ಸಿನಲ್ಲಿ ಸುರಕ್ಷಿತವಾಗಿದ್ದ ಸೇತುವೆಯನ್ನು ವೈದ್ಯರಿಗೆ ತೋರಿಸಿದಾಗ ಅದು ಕೆಲಸಕ್ಕೆ ಬರುವುದಿಲ್ಲ ಎಂದರು. ಹೀಗೆ ಮುಂದೆ ಒಂದರ ಮೇಲೊಂದರಂತೆ ಎಡ, ಬಲ ದವಡೆಗಳಿಗೆ ಎರಡು ಸೇತುವೆ ಕಟ್ಟಿಸಿಕೊಂಡ ನನ್ನ ಬಾಯಿ ಈಗ ನಾಲ್ಕೈದು ಕಿರೀಟಗಳಿಂದ (ಕ್ರೌನ್) ಅಲಂಕೃತಗೊಂಡು ಬಾಯಿಬಿಟ್ಟರೆ ಬಣ್ಣಗೇಡು ಅಂತಾರಲ್ಲಾ ಹಾಗಾಗಿತ್ತು.

ಕಾಲಾಂತರದಲ್ಲಿ ಅಂದರೆ ಈ ದಂತಕಥೆ ಬರೆಯುವ ಹೊತ್ತಿನಲ್ಲಿ ನನ್ನ ಎಡ ದವಡೆಯ ಹಲ್ಲು ನೋವಿನಿಂದಾಗಿ ಅದಕ್ಕೆ ರೂಟ್ ಕೆನಾಲ್ ಚಿಕಿತ್ಸೆ ಮಾಡಬೇಕೆಂದು ವೈದ್ಯರು ಹೇಳಿ ಸೇತುವೆಯನ್ನು ಒಡೆದು ಪುಡಿ ಮಾಡಿ ಕಿತ್ತುಹಾಕಿದರು. ಮಳೆಗಾಲದಲ್ಲಿ ಬ್ರಿಡ್ಜ್ ಮುರಿದರೆ ಪ್ರವಾಹದಲ್ಲಿ ಜನ ಎಷ್ಟು ಸುರಕ್ಷಿತವಾಗಿ ಪ್ರಯಾಣಿಸಲು ಸಾದ್ಯ? ಹೊಸ ಬ್ರಿಡ್ಜ್ ಬರುವವರೆಗೂ ನನಗೂ ಗಟ್ಟಿಯಾದ ಆಹಾರದ ಪ್ರಯಾಣ ಹೊಟ್ಟೆಯೊಳಗೆ ಸಾಧ್ಯವಾಗಿರಲಿಲ್ಲ. ಕಿರೀಟ ಧರಿಸಲು ಬನ್ನಿ ಎಂದು ಕರೆ ಬಂದಾಗ ಹಿಂದೆ ಕಿರೀಟಧಾರಣೆ ಆಗಿತ್ತು. ಈಗ ಹೊಸ ಸೇತುವೆಗಾಗಿ ಟೆಂಡರ್ ಕೊಟ್ಟಾಗಿದೆ. ಉದ್ಘಾಟನೆಗಾಗಿ ಕಾಯಲೇಬೇಕಾಗಿದೆ. ಅಲ್ಲಿಯತನಕ ಮಾತುಗಳಿಗೆ ಕಡಿವಾಣ ಹಾಕಬೇಕಿದೆ .ಲವಂಗ, ಲವಂಗದೆಣ್ಣೆ, ಸೀಬೆ ಎಲೆ ಇತ್ಯಾದಿಗಳ ಪ್ರಯೋಗದಿಂದ ನೋವು ಕೊಂಚ ಉಪಶಮನ ಆಗುತ್ತಿದೆ. ನುಡಿದರೆ ಮುತ್ತಿನ ಹಾರ ದಂತಿರಬೇಕು ಎನ್ನುವುದಕ್ಕೆ ಬದಲಾಗಿ ನುಡಿದರೆ ಕಿಂಡಿ ಹಲ್ಲು ಕಾಣದಂತಿರಬೇಕು ಎಂದು ಬದಲಾಯಿಸಿಕೊಂಡೆ.

*****

ಏನಾಯ್ತು ಗೊತ್ತಾ?

-ಶೀಲಾ ಅರಕಲಗೂಡು

ಅಂದು ಮಧ್ಯಾಹ್ನ ಮನೆಯಂಗಳದಲ್ಲಿ ಕುಳಿತು ಬಿಸಿಲು ಕಾಯಿಸುತ್ತಾ ಪೇಪರ್ ಕೈಲಿ ಹಿಡಿದು ಓದುತ್ತಿದ್ದೆ. ಸ್ವಲ್ಪ ಹೊತ್ತಿನಲ್ಲೇ ಯಾರೋ ಗೇಟು ತೆರೆದು ಒಳ ಬಂದಂತಾಯ್ತು. ನೋಡಿದರೆ ನಮ್ಮ ಬೀದಿಯ ಕೊನೆ ಮನೆಯ ಕಮಲಮ್ಮ!

'ಬನ್ನಿ, ಬನ್ನಿ ಕಮಲಮ್ಮ, ಅಪರೂಪಕ್ಕೆ ಬಂದಿದ್ದೀರಿ' ಎನ್ನುತ್ತಾ ಅಲ್ಲೇ ಮತ್ತೊಂದು ಕುರ್ಚಿಯನ್ನು ತೋರಿಸಿ ಕುಳಿತುಕೊಳ್ಳಲು ಹೇಳಿದೆ. ಕುಳಿತುಕೊಂಡ ಅವರು, 'ಶೀಲಾ ಅವರೇ, ಬರೋ ಶನಿವಾರ ನಮ್ಮ ಸಾಹಿತ್ಯ ಸಂಘದ ವಿಶೇಷ ಸಮಾರಂಭವಿದೆ. ಅದರ ಅಧ್ಯಕ್ಷತೆಯನ್ನು ದಯವಿಟ್ಟು ನೀವು ವಹಿಸಿಕೊಳ್ಳಬೇಕು' ಎಂದು ಕೇಳಿಕೊಂಡರು. ಅಲ್ಲಾ, ಇಮಾಂ ಸಾಬೀಗೂ ಗೋಕುಲಾಷ್ಟಮಿಗೂ ಸಂಬಂಧ ಜೋಡಿಸ್ತಿದಾರಲ್ಲಾ?! ಅಂತ ಅನ್ನಿಸಿ ನಂಬಲಾರದಂತೆ 'ಏನಂದ್ರಿ?' ಅಂದೆ. ಆಹ್ವಾನವನ್ನು ಪುನರುಚ್ಚರಿಸಿ ನನ್ನ ಒಪ್ಪಿಗೆಗಾಗಿ ಕಾಯತೊಡಗಿದರು.

ನನ್ನ ಮನಸ್ಸು ತಕ್ಷಣ ಮೊನ್ನೆ ತಾನೇ ಕೊಂಡ ಹೊಸ ಸೀರೆಯ ನೆನಪು ಮಾಡಿಕೊಂಡಿತು. ಅದನ್ನುಟ್ಟು ಎಲ್ಲರ ಮುಂದೆ ಮೆರೆಯುವ ಸದವಕಾಶ ಸಿಕ್ತಲ್ಲಾ ಅಂತ ಯೋಚಿಸುತ್ತಾ, ಅದಕ್ಕಿನ್ನೂ ಮ್ಯಾಚಿಂಗ್ ರವಿಕೆಯನ್ನೇ ಹೊಲೆಸಿಕೊಂಡಿಲ್ವಲ್ಲಾ? ನಾಳೆಯೇ ಹೊಲಿಯಲು ಕೊಟ್ಟು ಬರಬೇಕು. ಯಾವ ವಿನ್ಯಾಸದಲ್ಲಿ ಹೊಲಿಸಲಿ? ಎಂಬೆಲ್ಲ ಆಲೋಚನೆಗಳು ಅಡ್ಡಾದಿಡ್ಡಿ ನುಗ್ಗತೊಡಗಿದವು.

ನಾನು ಹೀಗೆ ಮೌನಕ್ಕೆ ಜಾರಿದುದನ್ನು ನೋಡಿ ಮೌನಂ ಸಮ್ಮತಿ ಲಕ್ಷಣಂ ಎಂದುಕೊಂಡ ಕಮಲಮ್ಮನವರು, 'ಮೇಡಂ, ಏನು ಯೋಚಿಸ್ತಿದೀರಿ? ಖಂಡಿತ ಬರ್ತೀರಿ ತಾನೆ? ಬರೋ ಶನಿವಾರ ಮೂರು ಘಂಟೆಗೆ ತಯಾರಾಗಿರಿ. ನಾನೇ ಬಂದು ಕರ್ಕೊಂಡು ಹೋಗ್ತೀನಿ' ಅಂತ ತಿಳಿಸಿ ಹೊರಟುಹೋದರು.

ಮುಂದಿನ ನಾಲ್ಕು ದಿನಗಳು ನನಗೆ ಸಂಭ್ರಮವೋ ಸಂಭ್ರಮ! ಸೀರೆಯನ್ನು ಮೈಮೇಲೆ ಹಾಕಿ ನೋಡಿದ್ದೇನು? ಕನ್ನಡಿಯಲ್ಲಿ ನೋಡಿಕೊಂಡು ವಾಲಾಡಿದ್ದೇನು? ರವಿಕೆ ಹೊಲಿಸಲು ಹೊಲಿಗೆಯವರ ಬಳಿ ಓಡಾಡಿದ್ದೇನು? ಜೊತೆಗೆ ಬೇಕಾದ ಇತರೇ ಅಲಂಕಾರ ಸಾಮಗ್ರಿಗಳನ್ನು ಜೋಡಿಸಿಕೊಂಡಿದ್ದೇನು? ಹೀಗೆ ನನ್ನದೇ ಲೋಕದಲ್ಲಿ ತೇಲಾಡ ತೊಡಗಿದೆ. ಒಟ್ಟಾರೆ, ಪರೀಕ್ಷೆಗೆ ತಯಾರಿ ಮಾಡಿಕೊಳ್ಳುವ ಹಾಗೆ ನನ್ನ ಅಲಂಕಾರದ ಪೂರ್ವ ಸಿದ್ಧತೆ ಮಾಡಿಕೊಂಡೆ.

ನಾನು ಚಾತಕ ಪಕ್ಷಿಯಂತೆ ಕಾಯುತ್ತಿದ್ದ ಶನಿವಾರ ಅಂತೂಇಂತೂ ಬಂದೇಬಿಟ್ಟಿತು. ಸಾಕಷ್ಟು ಸಮಯ ತೆಗೆದುಕೊಂಡು ಅಲಂಕಾರವನ್ನು ತೃಪ್ತಿಯಾಗಿ ಮಾಡಿಕೊಂಡು ಮಧ್ಯಾಹ್ನ ೨.೩೦ಕ್ಕೇ ತಯಾರಾಗಿ ಕುಳಿತೆ. ಮೂರು ಘಂಟೆ ಹೊತ್ತಿಗೆ ನನ್ನನ್ನು ಕರೆದೊಯ್ಯಲು ಕಮಲಮ್ಮನವರು ಕಾರು ಮಾಡಿಕೊಂಡು ಬಂದರು. ನಾನು ಕಾರಿನಲ್ಲಿ ಕುಳಿತುಕೊಳ್ಳುವ ಮುಂಚೆ ಯಾರಾದರೂ ಗಮನಿಸುತ್ತಿರಬಹುದೇ? ಎಂದು ಹಾಗೇ ಆಚೀಚೆ ಮನೆಗಳ ಕಡೆಗೆ ಕಣ್ಣು ಹಾಯಿಸಿದೆ. ಯಾರೂ

ಕಾಣಲಿಲ್ಲ. ಅಲ್ಲಾ, ಮಟಮಟ ಮಧ್ಯಾಹ್ನ ಯಾರಾದರೂ ಅದೇಕೆ ಮನೆ ಮುಂದೆ ನಿಂತಿರ್ತಾರೆ ಹೇಳಿ? ಸ್ವಲ್ಪ ಪೆಚ್ಚೆನಿಸಿ ಕಾರು ಹತ್ತಿ ಕುಳಿತೆ.

ಇದ್ದಕ್ಕಿದ್ದ ಹಾಗೆ ಯೋಚನೆಯೊಂದು ಬಂತು. ನನ್ನನ್ನು ಸಭೆಯಲ್ಲಿ 'ಮಾತನಾಡಿ ಎಂದರೆ ಏನು ಮಾಡೋದು? ಇಲ್ಲೀವರೆಗೂ ನಂಗೆ ಆ ಬಗ್ಗೆ ಯೋಚನೆಯೇ ಬರಲಿಲ್ಲವಲ್ಲ ಅಂತ ತಳಮಳವಾಯ್ತು. ನನಗೆ ನಾನೇ ಸಮಾಧಾನ ಮಾಡಿಕೊಂಡೆ, ಹೇಗಿದ್ರೂ ನಾನು ಹೋಗ್ತಿರೋದು ಅಧ್ಯಕ್ಷಳಾಗಿ. ಅಧ್ಯಕ್ಷರ ಭಾಷಣ ಕಾರ್ಯಕ್ರಮದ ಕಡೆಯಲ್ಲಿರುತ್ತೆ. ಯಾರಿಗೂ ಕೇಳಿಸಿಕೊಳ್ಳುವ ಸಹನೆ ಇರೋದಿಲ್ಲ. 'ಎಲ್ಲರಿಗೂ ನಮಸ್ಕಾರ, ಎಲ್ಲರ ಪ್ರಸ್ತುತಿಗಳೂ ತುಂಬಾ ಚೆನ್ನಾಗಿತ್ತು, ಅಭಿನಂದನೆಗಳು. ನನ್ನನ್ನು ಆಹ್ವಾನಿಸಿದ್ದಕ್ಕೆ ವಂದನೆಗಳು' ಅಂತ್ಹೇಳಿ ಕುಳಿತರಾಯಿತು, ನಾನೂ ಬಚಾವ್, ಶ್ರೋತೃ ಗಳೂ ಖುಷ್! ಹೀಗೆ ನಿಶ್ಚಯ ಮಾಡಿಕೊಂಡ ನಂತರ ನೆಮ್ಮದಿ ಎನಿಸಿತು.

ಸಭಾಂಗಣದಲ್ಲಿ ಜನ ತುಂಬಿದ್ದು, ಅವರ ನಡುವಿನಿಂದ ಸಾಗಿ ವೇದಿಕೆಯ ಬಳಿ ಹೋಗುವಾಗ ಎಲ್ಲರ ಚಿತ್ತ ನನ್ನತ್ತ. ನನ್ನ ಚಿತ್ತ ನನ್ನ ಸೀರೆಯತ್ತ. ಸೀರೆಯ ಸೆರಗನ್ನೊಮ್ಮೆ ನೇವರಿಸುತ್ತಾ, ನೆರಿಗೆಗಳನ್ನು ಚಿಮ್ಮಿಸುತ್ತಾ ನಡೆದೆ. ಹಾಗೆಯೇ ಕೃತಕ ನಗೆ ಬೀರುತ್ತಾ ವೇದಿಕೆಯೇರಿ ನನಗಾಗಿ ಕಾಯ್ದಿರಿಸಿದ್ದ ಕುರ್ಚಿಯಲ್ಲಿ ಆಸೀನಳಾದೆ.

ಕಾರ್ಯಕ್ರಮ ಆರಂಭವಾಗಿಯೇ ಬಿಟ್ಟಿತು. ನನ್ನ ಗಮನವೆಲ್ಲಾ ಪ್ರೇಕ್ಷಕರು ನನ್ನ ಸೀರೆ, ಅಲಂಕಾರ ಗಮನಿಸುತ್ತಿದ್ದಾರೋ ಇಲ್ಲವೋ ಅನ್ನುವ ಕಡೆಯೇ ಇತ್ತು. ಛಾಯಾಗ್ರಾಹಕ ತೆಗೆಯುವ ಫೋಟೋಗಳಲ್ಲಿ ಅಂದವಾಗಿ ಕಾಣಬೇಕೆಂದು ಹಸನ್ಮುಖಳಾಗಿ ಕುಳಿತೆ.

ನಿರೂಪಕರು ನನ್ನನ್ನು ಪರಿಚಯಿಸುತ್ತಾ, 'ಉದಯೋನ್ಮುಖ ಲೇಖಕಿ' ಎಂದಾಗ ಯಾರ ಬಗ್ಗೆ ಹೇಳ್ತಿದಾರಪ್ಪಾ ಅಂತ ಅನುಮಾನವಾಯ್ತು. ಚಿಕ್ಕ ಮಕ್ಕಳು ಬರೆಯುವಂತಹ ಪಕ್ವವಲ್ಲದ ನಾಲ್ಕಾರು ಕವನಗಳನ್ನು ಬರೆದದ್ದು ಬಿಟ್ಟರೆ ನಂಗೆ ಸಾಹಿತ್ಯದ ಗಂಧ ಅಷ್ಟಕ್ಕಷ್ಟೇ.

ಕಾರ್ಯಕ್ರಮದ ಮುಖ್ಯ ಭಾಗ ಆರಂಭವಾಯಿತು. ಹೆಸರಾಂತ ಲೇಖಕ-ಲೇಖಕಿಯರು, ಕವಿ-ಕವಯಿತ್ರಿಯರು ಒಬ್ಬರ ನಂತರ ಒಬ್ಬರಂತೆ ವೇದಿಕೆಯೇರಿ ತಾವು ರಚಿಸಿದಂತಹ ಹೊಸ ಲೇಖನ-ಕವನಗಳನ್ನು ಪ್ರಸ್ತುತಪಡಿಸಿದರು. ನಂಗೆ ಏನೂ ಅರ್ಥವೇ ಆಗಲಿಲ್ಲ. ನನ್ನ ಹೊಟ್ಟೆ ಬೇರೆ ಹಸಿಯೋಕೆ ಆರಂಭವಾಗಿತ್ತು. ಮನೆಗೆ ಹೋಗಿ ಏನು ಮಾಡಿಕೊಂಡು ತಿನ್ನಲಿ? ಹೇಗಿದ್ರೂ ಕಾರ್ಯಕ್ರಮದ ಕಡೆಯಲ್ಲಿ ನನಗೆ ಹಣ್ಣಿನ ಬುಟ್ಟಿ ಕೊಡ್ತಾರೆ, ಎಲ್ಲ ಹಣ್ಣುಗಳನ್ನು ಹೆಚ್ಚಿ ಫ್ರೂಟ್ ಸಲಾಡ್ ಮಾಡಿ ತಿಂದರೆ ಹೇಗೆ? ಹೀಗೆ ಹೊಟ್ಟೆಯನ್ನು ತುಂಬಿಸಿಕೊಳ್ಳುವ, ನಾಲಗೆಯನ್ನು ರಂಜಿಸುವ ಬಗೆಯನ್ನು ಕಲ್ಪಿಸಿ ಕೊಳ್ಳುತ್ತಾ ನನ್ನದೇ ಕಲ್ಪನಾ ಲೋಕದಲ್ಲಿ ವಿಹರಿಸತೊಡಗಿದೆ.

ಅಷ್ಟರಲ್ಲೆ ನಿರೂಪಕರು ನನ್ನ ಹೆಸರನ್ನು ಕರೆದಂತೆನಿಸಿ ಬೆಚ್ಚಿ ಬಿದ್ದೆ. ನನಗೇನೂ ಕೇಳಿಸಿರಲೇ ಇಲ್ಲ. ನನ್ನ ಪೆಚ್ಚು ನೋಟ ನೋಡಿದ ನಿರೂಪಕರು, 'ಬನ್ನಿ ಮೇಡಂ, ಇಲ್ಲಿಯವರೆಗೆ ನೀವು ಕೇಳಿದ ಎಲ್ಲ ಪ್ರಸ್ತುತಿಗಳ ಬಗ್ಗೆ ನಿಮ್ಮ ವಿಮರ್ಶಾತ್ಮಕ

ನುಡಿಗಳಿಗಾಗಿ ನಾವೆಲ್ಲ ಕಾದಿದ್ದೇವೆ, ಮಾತನಾಡಿ' ಎಂದರು. ಕೇಳಿಸಿಕೊಂಡಿದ್ದರಲ್ವೇ ಮಾತನಾಡೋದು? ಆದರೂ ಎದ್ದು ನಿಲ್ಲಲು ಪ್ರಯತ್ನಪಟ್ಟೆ. ಗಾಬರಿಯಿಂದ ತಲೆಯೆಲ್ಲಾ ಸುತ್ತಿದಂತಾಗಿ, ಕಣ್ಣು ಕತ್ತಲಿಟ್ಟು, ಕಾಲುಗಳು ಥರಥರನೇ ನಡುಗಿ, ಬಾಯೆಲ್ಲಾ ಒಣಗಿ ನಿಲ್ಲಲಾರದೆ 'ಧಪ್' ಎಂದು ಕುಕ್ಕರಿಸಿದೆ. ಕುಳಿತ ರಭಸಕ್ಕೆ ಕುರ್ಚಿ ಅಲ್ಲಾಡಿತು. ಅಯ್ಯೋ ಬಿದ್ದು ಬಿಟ್ಟೆನೇ.. ಎಂದು ಕಣ್ಣು ತೆರೆದು ನೋಡಿದರೆ ನಾನು ನನ್ನ ಮನೆಯಂಗಳದಲ್ಲೇ ಕುಳಿತಿದ್ದೆ. ಹಾಗಾದ್ರೆ, ನಾನಿಷ್ಟೂ ಹೊತ್ತು ಕಂಡದ್ದು ಹಗಲುಗನಸು ಎಂದು ತಿಳಿದು ಮನಸ್ಸು ನಿಧಾನವಾಗಿ ಸ್ಥಿಮಿತಕ್ಕೆ ಬಂತು. ಅಯ್ಯಪ್ಪಾ, ಕನಸಿನಲ್ಲಿಯಾದರೂ ಸರಿ, ನಾನು ಯಾಕಾದರೂ ಸಾಹಿತ್ಯ ಗೋಷ್ಠಿಯ ಅಧ್ಯಕ್ಷತೆ ವಹಿಸಿದೆನಪ್ಪಾ! ಎನಿಸಿತು. ನಿಜ ಜೀವನಕ್ಕೆ ಇದೊಂದು ಎಚ್ಚರಿಕೆಯ ಪಾಠ ಅಂತ ತಿಳ್ಕೊಂಡೆ. ಇನ್ಮೇಲಾದರೂ ಚೆನ್ನಾಗಿ ಓದುವುದನ್ನು, ಕೇಳಿಸಿಕೊಳ್ಳುವುದನ್ನು ಮೊದಲು ಕಲೀಬೇಕು ಎಂದು ಕನಸನ್ನು ಅರ್ಥೈಸುತ್ತಾ ಬಿಸಿಬಿಸಿ ಕಾಫಿ ಕುಡಿದು ಸುಧಾರಿಸಿಕೊಳ್ಳಲು ಮೇಲೆದ್ದೆ. ****

ನವೆಂಬರ್ ಕನ್ನಡಿಗರು ನಾವು

– ಜಿ ಬಿ ಕೋಟೆ ಅನಂತ

ನವೆಂಬರ್ ಬಂತೆಂದರೆ ನಾವು ಎಚ್ಚರಗೊಳ್ಳುತ್ತೇವೆ ಗಾಢ ನಿದ್ದೆಯಿಂದ ಒಮ್ಮೆಲೆ! ಮೈಮುರಿದು ಮೈಕೊಡವಿ ದೀರ್ಘವಾಗೊಮ್ಮೆ ಆಕಳಿಸಿ ಹೊರಡುತ್ತೇವೆ, ಕನ್ನಡಮ್ಮನ ಗುಡಿಯತ್ತ ಸಿರಿಗನ್ನಡಂ ಗೆಲ್ಗೆ ಬಾಳ್ಗೆ ಎಂದು ಕೂಗುತ್ತಾ!

ಗುಡಿಯ ಅಂಗಳವ ಗುಡಿಸಿ ಸಾರಿಸಿ ಕೆಂಪು ಹಳದಿ ಬಣ್ಣದಿಂದ ರಂಗೋಲಿ ಇಟ್ಟು ಸಿಂಗರಿಸುತ್ತೇವೆ ತಳಿರು ತೋರಣ ಕಟ್ಟಿ ಕೂಗುತ್ತೇವೆ ಸಿರಿಗನ್ನಡಂ ಗೆಲ್ಗೆ ಬಾಳ್ಗೆ ಎಂದು!!

ತುಕ್ಕು ಹಿಡಿದ ಗುಡಿಯ ಬಾಗಿಲ ಬೀಗ ತೆಗೆಯುತ್ತೇವೆ ಹರಸಾಹಸ ಮಾಡಿ ಕೂಗುತ್ತೇವೆ ಸಿರಿಗನ್ನಡಂ ಗೆಲ್ಗೆ ಬಾಳ್ಗೆ ಎಂದು!!

ಸುಪ್ರಭಾತವ ಹಾಡಿ ಕೊಂಬು ಕಹಳೆ ಊದಿ ಡೊಳ್ಳು ತಮಟೆಯ ಬಾರಿಸಿ ಕನ್ನಡಮ್ಮನನ್ನು ಗಾಢನಿದ್ರೆಯಿಂದ ಎಚ್ಚರಿಸುತ್ತೇವೆ ಕೂಗುತ್ತೇವೆ ಸಿರಿಗನ್ನಡಂ ಗೆಲ್ಗೆ ಬಾಳ್ಗೆ ಎಂದು!!

ಕನ್ನಡಮ್ಮನಿಗೆ ಹೊಚ್ಚ ಹೊಸ ಉಡುಗೆ ತೊಡಿಗೆ ತೊಡಿಸಿ ಒಡವೆಗಳನ್ನು ಹಾಕಿ ಹಾರ ತೋರಣ ಮಾಲೆಯ ಅಲಂಕಾರ ಮಾಡಿ ಮೆರವಣಿಗೆ ಮಾಡುತ್ತೇವೆ ಕೂಗುತ್ತಾ ಸಿರಿಗನ್ನಡಂ ಗೆಲ್ಗೆ ಬಾಳ್ಗೆ ಎಂದು!!

ತಿಂಗಳೊಪ್ಪತ್ತು ಹಾಡಿ ಕುಣಿದು ಕುಪ್ಪಳಿಸುತ್ತೇವೆ ನಿನ್ನ ಗುಣಗಾನ ಮಾಡಿ ಹೊತ್ತು ತಿರುಗುತ್ತೇವೆ ಕೂಗುತ್ತಾ ಸಿರಿಗನ್ನಡಂ ಗೆಲ್ಗೆ ಬಾಳ್ಗೆ ಎಂದು!!

ಗಲ್ಲಿಗಲ್ಲಿಯಲ್ಲಿ ಹಳ್ಳಿಯಲ್ಲಿ ಪೇಟೆ ಕೋಟೆ ಪಟ್ಟಣಗಳಲ್ಲೆಲ್ಲಾ ನವಂಬರ್ ತಿಂಗಳಲ್ಲಿ ಕನ್ನಡಮ್ಮನದೇ ದರ್ಬಾರು ಕೂಗು ಸಿರಿಗನ್ನಡಂ ಗೆಲ್ಗೆ ಬಾಳ್ಗೆ ಎಂದು!!

ಭಾಷಣಗಳ ಮೇಲೆ ಭಾಷಣ ಬಿಗಿಯುತ್ತೇವೆ ಗಂಟೆಗಟ್ಟಲೆ ಜಯಘೋಷ ಮಾಡುತ್ತೇವೆ ಕೂಗುತ್ತ ಸಿರಿಗನ್ನಡಂ ಗೆಲ್ಗೆ ಬಾಳ್ಗೆ ಎಂದು!!

ಮುಗಿದಂತೆ ಮಾಸ ಮುದುರಿ ಮಲಗುತ್ತೇವೆ ಮುಸುಗಿಟ್ಟು ಹೊಡೆಯುತ್ತೇವೆ ಗೊರಕೆ.... ಮಲಗಿ ನಿದ್ರಿಸು ತಾಯೆ ನೀನು ನಿಶ್ಚಿಂತೆಯಿಂದ. ಇದ್ದೀವಲ್ಲ ನಾವು ಮರೆಯದೆ ಎಚ್ಚರಿಸುವೆವು ನಿನ್ನ ಮುಂದಿನ ನವೆಂಬರ್ ಒಂದರಂದು.....

ಮರೆಯದೆ ಎಚ್ಚರಿಸುವೆವು ನಿನ್ನ ಮುಂದಿನ ನವೆಂಬರ್ ಒಂದರಂದು....!!

*****

ವೃತ್ತಿ ಜೀವನಾನುಭವ

ಜೀವನ ಪ್ರಮಾಣ ಪತ್ರ

- ಗೌರಿ ಭಟ್ಟ

ನನ್ನ ಬ್ಯಾಂಕಿಂಗ್ ವೃತ್ತಿಯಲ್ಲಿ ಬಹುತೇಕ ಎಲ್ಲಾ ಕೌಂಟರುಗಳಲ್ಲೂ ಕೆಲಸ ಮಾಡಿದ್ದೇನೆ. ಪೆನ್ಷನ್ ಕೌಂಟರಿನಲ್ಲಿ ಜೀವನ ಪ್ರಮಾಣ ತೆಗೆದುಕೊಳ್ಳುವಾಗ ಆದ ಕೆಲವು ಅನುಭವಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ.

ಮತ್ತೆ ಬಂದಿದೆ ನವೆಂಬರ್ ತಿಂಗಳು. ಜೀವನ ಪ್ರಮಾಣಪತ್ರ ಸಲ್ಲಿಸಲು ಬ್ಯಾಂಕಿಗೆ ಪಿಂಚಣಿದಾರರು ಬರುತ್ತಾರೆ. ಬಹುತೇಕ ಎಲ್ಲಾ ಪಿಂಚಣಿದಾರರ ಪರಿಚಯವೂ ನನಗೆ ಇದೆ. ಕೆಲವರು ನನ್ನನ್ನು ಮಗಳೆಂದು ಅಂದುಕೊಳ್ಳುತ್ತಾರೆ. ನಾನೂ ಕೂಡ ಅವರಲ್ಲಿ ಅಮ್ಮನನ್ನೋ, ಅಕ್ಕ ಅಣ್ಣಂದಿರನ್ನೋ ಕಾಣುತ್ತೇನೆ. ಕೆಲವರನ್ನು ನೋಡಿದಾಗ ನನ್ನ ತಂದೆಯ ನೆನಪೂ ಬರುತ್ತದೆ. ಅವರ ಕೆಲಸ ಆದಮೇಲೆ ನನ್ನನ್ನು ಪ್ರೀತಿಯಿಂದ ಹರಸಿ ಹೋಗುತ್ತಾರೆ. ಕೆಲವರಿಗೆ ನಾನು ಇದ್ದರೆ ಧೈರ್ಯ, ವಿಶ್ವಾಸ.

ಒಬ್ಬೊಬ್ಬರದ್ದೂ ಒಂದೊಂದು ಕತೆ.

೧. ಒಬ್ಬರು ಅರ್ಜೆಂಟಾಗಿ ನನ್ನ ಕೌಂಟರಿಗೆ ಬಂದು ಜೀವನ ಪ್ರಮಾಣ ಬೇಗ ತೆಗೆದುಕೊಳ್ಳಲು ಹೇಳಿದರು. ಕಾರಣ, ವಯಸ್ಸಾದ ಗಂಡನನ್ನು ಮನೆಯಲ್ಲಿ ಕೂಡಿಹಾಕಿ ಬಂದಿದ್ದಾರಂತೆ. ಇಲ್ಲದಿದ್ದರೆ ಅವರು ಬಾಗಿಲು ತೆಗೆದು ಎಲ್ಲಾದರೂ ಹೋಗಿಬಿಡುತ್ತಾರಂತೆ.

೨. ಇನ್ನೊಬ್ಬರು ಶ್ರೀಮತಿ ಮಾರ್ಜೋರಲಿನ್. ವಯಸ್ಸು ಎಂಭತ್ತು. ತಾವೇ ಕಾರು ಚಲಾಯಿಸಿಕೊಂಡು ಬಂದಿದ್ದಾರೆ. ಮೂವರು ಮಕ್ಕಳೂ ವಿದೇಶದಲ್ಲಿ ನೆಲೆಸಿದ್ದಾರೆ. ತುಂಬಾ ಕ್ರಿಯಾಶೀಲರು, ನನಗೇ ನಾಚಿಯಾಗುವಷ್ಟು.

೩. ಮತ್ತೊಬ್ಬರ ವಯಸ್ಸು ಅರವತ್ತೆರಡು. ಎಲ್ಲರನ್ನೂ ಬಲವಂತವಾಗಿ ಹಿಂದೆ ಹಾಕಿ ನನ್ನ ಹತ್ತಿರ ಬಂದು ಜೀವನ ಪ್ರಮಾಣ ತೆಗೆದುಕೊಳ್ಳಲು ಅವಸರಿಸಿದರು. ಕಾರಣ ಅವರಿಗೆ ಸಿಹಿಮೂತ್ರ ರೋಗ ಇದೆಯಂತೆ. ಕಾಯಲು ಸಾಧ್ಯ ವಾಗುತ್ತಿಲ್ಲ ಅಂತ. ಯಾರು ವಿರೋಧಿಸಿದರೂ ಕೇಳ್ತಾ ಇಲ್ಲ. ಅಲ್ಲಿ ಒಂದು ವಾಗ್ಯುದ್ಧವೇ ನಡೆಯಿತು. ನಂತರ ನಾನು "ಇಲ್ಲಿ ಎಲ್ಲರೂ ಹಿರಿಯ ನಾಗರೀಕರೇ" ಎಂದು ಅವರಿಗೆ ಸರದಿಯಲ್ಲೇ ಬರಲು ತಿಳಿಸಿದೆ ಹಾಗೂ ಹಸಿವಾದರೆ ಅವರ ಚೀಲದಲ್ಲಿರುವ ಬಿಸ್ಕತ್ತು ತಿನ್ನಲು ಹೇಳಿದೆ. ಅವರು ಅವರ ಜಾಗಕ್ಕೆ ವಾಪಸ್ಸಾದಾಗ ಎಲ್ಲರಿಗೂ ಸಮಾಧಾನ ಆಯಿತು.

೪. ಇನ್ನೊಂದು ಪ್ರಕರಣದಲ್ಲಿ ಮೂವರು ಪಿಂಚಣಿದಾರರೂ ಬ್ರಹ್ಮಚಾರಿಗಳೇ!. ಒಬ್ಬರಿಗೆ ೭೧ ವರ್ಷ, ಇನ್ನೊಬ್ಬರಿಗೆ ೮೪, ಅವರ ಅಣ್ಣನಿಗೆ ೯೦. ದೊಡ್ಡವರೇ ಎಲ್ಲರಿಗಿಂತಲೂ ಆರೋಗ್ಯವಾಗಿದ್ದಾರೆ.ಹಾಗೂ ಉಳಿದ ಇಬ್ಬರ ಜವಾಬ್ದಾರಿ ದೊಡ್ಡ ಅಣ್ಣನಿಗೆ.

೫. ಗೌತಮ್ ಬುದ್ಧಿಮಾಂದ್ಯ ವಿಕಲಚೇತನ. ೨೯ ವರ್ಷದ ಅಜಾನುಬಾಹು. ಇಬ್ಬರು ಗಂಡಸರು ಅವನನ್ನು ಹಿಡಿದು ಕರೆದುಕೊಂಡು ಬಂದಿದ್ದಾರೆ. ನನ್ನನ್ನು ನೋಡುತ್ತಿದ್ದಂತೇ ಅಳಲು ಪ್ರಾರಂಭಿಸಿದ. ಅವನು ಹೇಳಿದ್ದು ನನಗೆ ಅರ್ಥವಾಗಲಿಲ್ಲ. ಅವನ ಜೊತೆಯಲ್ಲಿ ಇರುವವರು ಹೇಳಿದರು, ಗೌತಮನ ಅಜ್ಜ ತೀರಿಹೋಗಿದ್ದಾರಂತೆ,.ಅವನಿಗೆ ಹುಡುಗಿ ನೋಡಿಕೊಡಬೇಕಂತೆ, ಮದುವೆ ಆಗ್ತಾನಂತೆ. ಆಯಿತು ಅಂತ ಸಮಾಧಾನ ಮಾಡಿ ಜೀವನ ಪ್ರಮಾಣ ತೆಗೆದುಕೊಂಡು ಅವನನ್ನು ಕಳುಹಿಸಿದೆ.

೬. ಇನ್ನೊಬ್ಬರು ಹಿರಿಯ ನಾಗರಿಕರು ಮಗನ ಜೊತೆಯಲ್ಲಿ ಬಂದಿದ್ದಾರೆ. ಜೀವನ ಪ್ರಮಾಣ ತೆಗೆದುಕೊಂಡ ನಂತರ ಅವರ ಮಗ ಚೀಲದಲ್ಲಿದ್ದ ಬಾಟಲಿಯಿಂದ ಶಾಯಿಯನ್ನು ತೆಗೆದುಕೊಂಡು ತಂದೆಯ ಬೆರಳಿಗೆ ಹಚ್ಚಿದರು. ಇಲ್ಲದಿದ್ದರೆ ಅವರಿಗೆ ಕಾರ್ಯ ಅಪೂರ್ಣವಂತೆ. 'ಮತದಾನದ ಪ್ರಭಾವ' ಅಂದರು ಅವರ ಮಗ.

೭. ಇನ್ನೊಂದು - ಶ್ರೀಮತಿ ರಾಧಾಬಾಯಿಯವರನ್ನು ಅವರ ಸೊಸೆ ಕರೆದುಕೊಂಡು ಬಂದಿದ್ದಾರೆ. ಮೊಂಡು ಹಟ. ಎಷ್ಟೇ ಹೇಳಿದರೂ ಬಯೋಮೆಟ್ರಿಕ್ ಮೇಲೆ ಬೆರಳು ಇಡುವುದೇ ಇಲ್ಲ. ಅಂತೂ ಇಂತೂ ಜೀವನ ಪ್ರಮಾಣ ತೆಗೆದುಕೊಂಡೆ. ಮತ್ತೆ ಅವರನ್ನು ಖುರ್ಚಿಯಿಂದ ಎಬ್ಬಿಸಲು ಹರಸಾಹಸ ಪಡಬೇಕಾಯಿತು. ಅವರ ಸೊಸೆಯ ಸಹನೆಯನ್ನು ನಿಜಕ್ಕೂ ಮೆಚ್ಚಬೇಕು.

೮. ಜೀವನ ಪ್ರಮಾಣಪತ್ರ ಸಲ್ಲಿಸಲು ಬಹಳ ಜನರು, ನನ್ನೊಟ್ಟಿಗೆ ಬ್ಯಾಂಕಿನಲ್ಲಿ ಕೆಲಸ ಮಾಡಿದ ಹಿರಿಯರು, ಸ್ವಯಂ ನಿವೃತ್ತಿ ತೆಗೆದುಕೊಂಡವರು, ನನಗೆ ಮೇನೆಜರ್ ಆಗಿದ್ದವರೂ ಬರುತ್ತಾರೆ. ಅವರು ಸರದಿಯಲ್ಲಿ ಬಂದರೆ ನಿಜಕ್ಕೂ ನನಗೆ ಏನೋ ಮುಜುಗರ ಆಗುವುದು. ಅದರ ಅನಿವಾರ್ಯತೆಯ ಬಗ್ಗೆ ಹೇಳಿದರೆ, 'ಹಿಂದೆ ಬ್ಯಾಂಕ್ ಛೇರ್ಮನ್ ಆಗಿದ್ದರೂ ಅಷ್ಟೆ. ನಿವೃತ್ತಿಯ ನಂತರ ಎಲ್ಲರೂ ಒಂದೇ' ಅಂತ ಅವರೇ ನನಗೆ ಸಮಾಧಾನ ಮಾಡುತ್ತಾರೆ.

ಎಷ್ಟೇ ಅವಾಂತರಗಳು, ಸವಾಲುಗಳು ಇದ್ದರೂ ಪಿಂಚಣಿದಾರರಿಗೆ ಸೇವೆ ಸಲ್ಲಿಸಿದ ವಿಶಿಷ್ಟ ಅನುಭವದೊಂದಿಗೆ, ಸಮಾಧಾನ, ಸಂತೃಪ್ತಿ ನನಗೆ.

*****

ನೀವು ಅಳಿಲು ಸಾಕಿದ್ದೀರಾ?

- ಪ್ರಮೋದಾ. ಎಸ್. ಮೂರ್ತಿ

ವೇದಿಕೆಯಲ್ಲಿ ಎರಡು ಮೂರು ವರುಷಗಳ ಹಿಂದೆಯೇ ಅಳಿಲಿನ ಬಗ್ಗೆ ಹಲವರು ತಮ್ಮ ಅನುಭವ ಹಂಚಿಕೊಂಡಿದ್ದರು. ನಾನು ಆವಾಗಲೇ ಈ ವಿಷಯದ ಬಗ್ಗೆ ಬರೆಯೋಣ ಅಂತ ಅಂದುಕೊಂಡಿದ್ದೆ. ಆದರೆ ಇವತ್ತು ಅದನ್ನು ಕಾರ್ಯರೂಪಕ್ಕೆ ಇಳಿಸುತ್ತಿದ್ದೇನೆ. ಅಂದರೆ ನನ್ನ ಬರವಣಿಗೆಯ ವೇಗವನ್ನು ನೀವೇ ಊಹಿಸಿ! ಮನಸ್ಸಿನ ಯಾವುದೋ ಮೂಲೆಯಲ್ಲಿ ಭದ್ರವಾಗಿ ಕುಳಿತಿದ್ದ ಈ ವಿಷಯವನ್ನು ಸ್ವಲ್ಪ ಧೂಳು-ಕಸ ಹೊಡೆದು ನಿಮ್ಮ ಮುಂದೆ ಇಡುತ್ತಿದ್ದೇನೆ. ಇದು ನಿಜವಾಗಿ ನಡೆದದ್ದು. ನಾಯಿ ಬೆಕ್ಕು ಸಾಕಿದಂತೆ ಅಳಿಲು ಸಾಕಿದ್ದೂ ಒಂದು ನಿಜವಾದ ಕಥೆ. ಕಟ್ಟುಕಥೆಯಲ್ಲ!

ಇದು ಹತ್ತು ವರುಷದ ಹಿಂದೆ ನಡೆದ ಘಟನೆ. ಅಂದು ಬೆಳಿಗ್ಗೆ ಪೇಟೆಗೆ ಹೋಗಿ ಹೂವು, ಹಣ್ಣು, ಸೀರೆ, ಪಂಚೆ, ಅರಿಶಿಣ-ಕುಂಕುಮ ಇತ್ಯಾದಿ ಇತ್ಯಾದಿ ಎಲ್ಲಾ ತೆಗೆದುಕೊಂಡು ಬಂದಿದ್ದೆ. ಮಧ್ಯಾಹ್ನ ಊಟ ಮುಗಿಸಿ ಅಕ್ಕಿಹೆಬ್ಬಾಳಿನಲ್ಲಿ ಇರುವ ಮನೆ ದೇವರು ಲಕ್ಷೀನರಸಿಂಹ ಸ್ವಾಮಿ ದರ್ಶನಕ್ಕೆ ಮಾರನೇ ದಿನ ಹೊರಡಲು ತಯಾರಿ ಮಾಡುತ್ತಾ ಕುಳಿತಿದ್ದೆ. ನನ್ನ ಎರಡನೆಯ ಮಗಳು ಮೇಘನಾ ಅಂದು ಕಾಲೇಜಿಗೆ ಹೋಗಿರಲಿಲ್ಲ. ಏನೋ ಕೆಲಸ ಮಾಡುತ್ತಾ ಅವಳ ಕೋಣೆ ಯಲ್ಲಿದ್ದಳು. ಇದ್ದಕ್ಕಿದ್ದಂತೆ ಚೀ ಚೀ ಚೀ ಎಂದು ಕೂಗುವ ಸದ್ದು ಕೇಳಿ ಬಂತು. ನನ್ನ ಮಗಳು ಏನಮ್ಮಾ ಅದು ಸದ್ದು ಎನ್ನುತ್ತಾ ಮುಂಬಾಗಿಲ ಕಡೆಗೆ ಓಡಿದಳು. ಯಾವುದೋ ಬೆಕ್ಕು ಅಳಿಲನ್ನು ಹಿಡಿದಿರಬೇಕು ಎನ್ನುತ್ತಾ ನಾನೂ ಅವಳ ಹಿಂದೆ ಹೋದೆ. ನೋಡಿದರೆ, ನಮ್ಮ ತೆರೆದ ಕಾರ್-ಗರಾಜ್ ನಲ್ಲಿ ಮೂರು ಅಳಿಲು ಮರಿಗಳು ನೆಲದ ಮೇಲೆ ಬಿದ್ದಿವೆ. ಮೇಲಿದ್ದ ಹೆಂಚಿನ ಮಾಡಿನ ಸಂದಿನಲ್ಲಿದ್ದ ಗೂಡಿನಿಂದ ಪಾಪ! ತಪ್ಪಿ ಕೆಳಗೆ ಬಿದ್ದುಬಿಟ್ಟಿವೆ. ಒಂದು ಮರಿ ಸ್ವಲ್ಪ ಚಲಿಸಿ, ಆಮೇಲೆ ನಿಶ್ಚಲವಾಯಿತು. "ಅಮ್ಮ ಅದು ಸತ್ತು ಹೋಯಿತೇನೋ" ಅಂತ ನನ್ನ ಮಗಳು ಚಡಪಡಿಸಿದಳು. ನನಗೆ ಏನು ಮಾಡಲೂ ತೋಚಲಿಲ್ಲ. ಇನ್ನೆರಡು ಮರಿಗಳು ಚೀ... ಚೀ... ಎಂದು ಅರಚುತ್ತಲೇ ಇದ್ದವು. ಅಷ್ಟರಲ್ಲಿ ನನ್ನ ಮಗಳು ಮೈಸೂರಿನಲ್ಲಿ ಎಂ.ಬಿ.ಬಿ.ಎಸ್ ಓದುತ್ತಿದ್ದ ನನ್ನ ಅಣ್ಣನ ಮಗ ವಿನಯ್ ಗೆ ಫೋನ್ ಮಾಡಿ ವಿಷಯ ತಿಳಿಸಿದಳು.

ಅವನು ಕೊಟ್ಟ ಸಲಹೆಯಂತೆ ಪುಟ್ಟ ಮರದ ಪೆಟ್ಟಿಗೆಯೊಂದನ್ನು ಒಳಗಿಂದ ಹೊತ್ತು ತಂದಳು. ಕೈಗವಸು ಧರಿಸಿ, ಹಳೆಯ ಬೆಡ್ ಶೀಟ್ ಒಂದನ್ನು ದಪ್ಪಗೆ ಮಡಿಸಿ ಹಾಸಿ ಪೆಟ್ಟಿಗೆಯೊಳಗೆ ಇನ್ನೂ ಬದುಕಿದ್ದ ಎರಡು ಮರಿಗಳನ್ನು ಮೃದುವಾಗಿ ಎತ್ತಿಟ್ಟು ಮಲಗಿಸಿದಳು. ಸತ್ತು ಹೋಗಿದ್ದ ಇನ್ನೊಂದು ಅಳಿಲನ್ನು ಗಾರ್ಡನ್ ನಲ್ಲೇ ಆಳವಾಗಿ ಮಣ್ಣು ಅಗೆದು ಹೂತಿದ್ದಳು. ನಾನು ಅದೆಲ್ಲವನ್ನೂ ನೋಡುತ್ತಾ ಮೂಕಪ್ರೇಕ್ಷಕಳಾಗಿ ನಿಂತಿದ್ದೆ. ಇಲ್ಲಿ ನಾನು ಅಣ್ಣನ ಮಗ ವಿನಯ್ ಪರಿಚಯ ನಿಮಗೆ ಮಾಡಿ ಕೊಡಲೇಬೇಕು.

ವಿನಯ್ ಒಂದು ಅಪರೂಪದ ಹುಡುಗ. ಮೊದಲಿನಿಂದಲೂ ಪ್ರಾಣಿ, ಪಕ್ಷಿಗಳೆಂದರೆ ಬಹಳ ಪ್ರೀತಿ. ಮನೆಯಲ್ಲಿ ಯಾರಿಗೂ ಇಷ್ಟವಿಲ್ಲದಿದ್ದರೂ ನಾಯಿಮರಿಯೊಂದನ್ನು ಬಲವಂತವಾಗಿ ಪಡೆದು, ಮನೆ ಮಂದಿಯೆಲ್ಲಾ ಅದನ್ನು ಸಾಕುವಂತೆ ಮಾಡಿದ್ದ. ಕಾಲೇಜು ಓದುತ್ತಿದ್ದಾಗ ಬಿಡುವಿನ ಸಮಯದಲ್ಲಿ ಕಾಡುಮೇಡು ಸುತ್ತಿ ಅಲ್ಲಿನ ಪ್ರಾಣಿ ಪಕ್ಷಿಗಳನ್ನು

ವೀಕ್ಷಿಸುತ್ತಾ ಅದರ ಫೋಟೋಗಳನ್ನು ತೆಗೆಯುತ್ತಿದ್ದ, ಅದರ ಬಗ್ಗೆ ಅಭ್ಯಸಿಸುತ್ತಿದ್ದ. ಅವನು ಪಿಯುಸಿಯಲ್ಲಿ ಓದುತ್ತಾ ಇದ್ದಾಗ, ಮನೆಗೆ ಅವರ ತೋಟದಿಂದ ಬಂದ ತರಕಾರಿ ಗೋಣಿಚೀಲದೊಳಗೆ ಹಾವೊಂದು ಸೇರಿಕೊಂಡಿದ್ದಾಗ ಯಾರಿಗೂ ಅದರ ಅರಿವಿರಲಿಲ್ಲ. ಮನೆಯಲ್ಲಿದ್ದ ನಾಯಿ ಗೋಣಿಚೀಲದ ಬಳಿಗೆ ಹೋಗಿ ಒಂದೇ ಸಮನೆ ಬೊಗಳುತ್ತಿತ್ತು.. ವಿನಯ್ ಅಣ್ಣ ರಾಹುಲ್ ಏಕೆ ಹೀಗೆ ನಾಯಿ ಬೊಗಳುತ್ತಿದೆ ಎಂದು ನೋಡಲು ಹೋದಾಗ ಗೋಣಿಯೊಳಗಿಂದ ಹಿಸ್ಸೆಂಬ ಸದ್ದು ಕೇಳಿ ಬರುತ್ತಿತ್ತು. ಆಗ ಅವನಿಗೆ ಅಲ್ಲಿ ಹಾವಿರುವುದು ಅರಿವಾಗಿ ಅದರ ಮೇಲೆ ದಪ್ಪಗಿದ್ದ ಒಂದು ದೊಡ್ಡ ಬಟ್ಟೆಯನ್ನು ಹಾಕಿದ್ದ.. ಆಗ ವಿನಯ್ ತಕ್ಷಣ ತನ್ನ ಕಾಲೇಜಿನ ನೇಚರ್ ಕ್ಲಬ್ ಟೀಚರ್ ಸಲಹೆಯಂತೆ ಒಂದು ಖಾಲಿ ಗೋಣಿಚೀಲ ತೆಗೆದುಕೊಂಡು, ಒಂದು ಕೋಲಿನ ಸಹಾಯದಿಂದ ಅವರ ದೂರವಾಣಿ ಮಾರ್ಗದರ್ಶನದಲ್ಲಿ ಆ ಹಾವನ್ನು ಖಾಲಿ ಚೀಲಕ್ಕೆ ಸ್ಥಳಾಂತರಿಸಿದ್ದ.. ಅದು ವೈಪರ್ ಹಾವಾಗಿತ್ತು.

ಮುಂದೆ ಒಂದು ಸಲ ಮೈಸೂರಿನಲ್ಲಿ ರೆಸ್ಟೋರೆಂಟ್ ಒಂದರ ಬಳಿ ಅವನು ಕಾರು ನಿಲ್ಲಿಸಿ ಸ್ನೇಹಿತರೊಂದಿಗೆ ಉಪಹಾರ ಸೇವಿಸುತ್ತಿದ್ದಾಗ "ಹಾವು, ಹಾವು" ಎಂದು ಜನರು ಕೂಗುತ್ತಿದ್ದುದನ್ನು ಕೇಳಿ ಹೊರ ಬಂದು ನೋಡಿದಾಗ ಅವನ ಕಾರ್ ಬಾನೆಟ್ ಒಳಗೆ ಆ ಹಾವು ಭಯದಿಂದ ಹೋಗಿ ಸೇರಿಕೊಂಡಿತ್ತು. ಸುತ್ತಲೂ ಸೇರಿದ್ದ ಜನರನ್ನು ದೂರ ಸರಿಸಿ ಬಹಳ ಏಕಾಗ್ರತೆಯಿಂದ ಆ ಹಾವನ್ನು ಕೋಲಿನ ಸಹಾಯದಿಂದ ತನ್ನ ಬ್ಯಾಗ್ ಪ್ಯಾಕ್ ಗೆ ಸೇರಿಸಿ ದೂರದ ಮರ ಗಿಡಗಳ ಸಮೀಪದಲ್ಲಿ ಅದನ್ನು ಬಿಟ್ಟಾಗ ಅದು ಸರಸರನೆ ಹರಿದು ಹೋಯಿತಂತೆ. ಹೋಗುವಾಗ ಒಂದು ಸರ್ತಿ ಅದು ತಿರುಗಿ ನೋಡಿತು ಎಂಬುದು ಅವನ ಬಾಯಿಂದ ಕೇಳಿದ ಮಾತು. ಇನ್ನು ಪಕ್ಷಿಯೊಂದನ್ನು ಅವನು ಸಾಕಿದ ಕಥೆಯೇ ಬೇರೆ. ಅದೆಲ್ಲಾ ಬರೆಯುತ್ತಿದ್ದರೆ ನಮ್ಮ ಅಳಿಲಿನ ಕಥೆಯ ಓಟ ದಿಕ್ಕು ತಪ್ಪಿಬಿಡುತ್ತದೆ.. ಇರಲಿ. ಇಂತಹ ಧೀರ ನಮ್ಮ ವಿನಯ್. ಅಂದಿನಿಂದ ನಮ್ಮ ಮನೆಯಲ್ಲಿ ಪ್ರಾಣಿ-ಪಕ್ಷಿಗಳ ಬಗ್ಗೆ ಏನಾದರೂ ಕೇಳಬೇಕಾದರೆ ಮೊದಲು ವಿನಯ್ ಸಲಹೆಯನ್ನೇ ಎಲ್ಲರೂ ಪಡೆಯುತ್ತಿದ್ದರು. ಅದೇ ಕೆಲಸವನ್ನೇ ನನ್ನ ಮಗಳೂ ಮಾಡಿದ್ದಳು. ಅವನಿಗೆ ಫೋನ್ ಮಾಡಿ ಸರಸರನೆ ಅಳಿಲಿಗೆ ಹಾಸಿಗೆ ಸಿದ್ಧಮಾಡಿ ಒಳಗೆ ತೆಗೆದುಕೊಂಡು ಬಂದಳು. ಅರ್ಧ ಅರ್ಧ ಗಂಟೆಗೆ ಹೋಗಿ ಅದನ್ನು ನೋಡುವುದು, ಸಣ್ಣ ಚಮಚದಿಂದ ಹಾಲು, ನೀರು ಕೊಡಲು ಪ್ರಯತ್ನಿಸುವುದು ಇದೇ ಅವಳ ಕೆಲಸ. ಆದಷ್ಟು ಅದನ್ನು ಬೆಚ್ಚಗೆ ಇಡಲು ಪ್ರಯತ್ನಿಸುತ್ತಿದ್ದಳು.

ಮಾರನೇದಿನ ಎಲ್ಲರೂ ಬೇಗ ಎದ್ದು ಆರು ಗಂಟೆಗೆಲ್ಲ ಮನೆಬಿಟ್ಟು ಅಕ್ಕಿಹೆಬ್ಬಾಳದ ದಾರಿ ಹತ್ತಿದ್ದೆವು. ನನ್ನ ಮಗಳ ಗಮನವೆಲ್ಲ ಅಳಿಲು ಇಟ್ಟಿದ್ದ ಪೆಟ್ಟಿಗೆಯ ಮೇಲೇ. ಅವುಗಳಿನ್ನೂ ಕಣ್ಣೂ ತೆರೆದಿರಲಿಲ್ಲ. ಅವುಗಳನ್ನು ಬೆಚ್ಚಗಿಡಲು ಶಾಲು ಹೊದಿಸಿದ್ದಳು. ಅವಳ ಒದ್ದಾಟ ಹೇಳತೀರದು. ಆದಷ್ಟು ಬೇಗ ಮೈಸೂರು ಸೇರಬೇಕೆಂಬುದು ಅವಳ ಇಚ್ಛೆ.

ಹತ್ತೂವರೆಗೆಲ್ಲಾ ಬಂದು ದೇವಸ್ಥಾನ ತಲುಪಿದೆವು. ಅಲ್ಲಿ ಅಭಿಷೇಕ, ಅಲಂಕಾರ, ಪೂಜೆ, ಆರತಿ, ಪ್ರಸಾದ ಎಲ್ಲಾ ಮುಗಿಸಿಕೊಂಡು ನಾವು ಹೊರಡುವ ಹೊತ್ತಿಗೆ ಮೂರು ಗಂಟೆಯಾಗಿತ್ತು. ಆದರೆ ಅಷ್ಟರಲ್ಲಿ ಇನ್ನೊಂದು ಅಳಿಲಿನ ಮರಿ ಭಗವಂತನ ಪಾದ ಸೇರಿತ್ತು. ಭಾರವಾದ ಹೃದಯದಿಂದ ಅದನ್ನು ಅಲ್ಲೇ ಗದ್ದೆಯಲ್ಲಿ ಮಣ್ಣು ಮಾಡಿ ಮೈಸೂರಿನ ಕಡೆಗೆ ಹೊರಟಿದ್ದೆವು. ನಾವು ಮನೆ ತಲುಪುವ ವೇಳೆಗೆ ವಿನಯ್ ಅಲ್ಲಿನ ಸಮೀಪದ ಔಷಧಾಲಯದಿಂದ ವಿಟಮಿನ್ಸ್,

ಮಿನರಲ್ಸ್ ಮತ್ತು ಸಿರಿಂಜ್ ಎಲ್ಲಾ ತಂದಿಟ್ಟುಕೊಂಡು ನಮ್ಮ ದಾರಿಯನ್ನು ಕಾಯುತ್ತಾ ಕುಳಿತಿದ್ದ. ಅಳಿಲನ್ನು ಮರದ ಪೆಟ್ಟಿಗೆಯಿಂದ ತೆಗೆದು ಸೋಫಾದ ಮೇಲೆ ಇಟ್ಟಾಗ ಅದು ಭಯಕ್ಕೆ ಅಲ್ಲೇ ಮೂತ್ರ ವಿಸರ್ಜನೆ ಮಾಡಿತ್ತು. ಮೆತ್ತಗೆ ಅಂಗೈಯಲ್ಲಿ ಇಟ್ಟುಕೊಂಡು ಸಿರಿಂಜಿನಿಂದ ಮಿನರಲ್ಸ್ ಮತ್ತು ಹಾಲನ್ನು ಸ್ವಲ್ಪ ಸ್ವಲ್ಪ ಕೊಟ್ಟಾಗ ಒಂದೆರಡು ಗುಟುಕು ಕುಡಿಯಿತು. ಅದನ್ನು ಕಂಡು ನಮಗಾದ ಆನಂದಕ್ಕೆ ಪಾರವೇ ಇಲ್ಲ. ಅದೂ ಹೆಣ್ಣು ಮರಿ ಎಂದು ಅವನೇ ಹೇಳಿದ. ಅಳಿಲಿಗೋಸ್ಕರ ನಾವು ಮೈಸೂರಿಗೆ ಪ್ರಯಾಣಮಾಡಿದ್ದು ಸಾರ್ಥಕವಾಗಿತ್ತು. ಕತ್ತಲಾಗುತ್ತಿದ್ದಂತೆ ಅಲ್ಲಿಂದ ಬೆಂಗಳೂರಿನತ್ತ ಹೊರಟಾಗ ಮೇಘನಾಳಿಗೆ ಅದನ್ನು ಬಿಟ್ಟು ಬರಲು ದುಃಖ ಆದರೆ ಅದನ್ನು ಸಮರ್ಥನಾದವನ ಕೈಗಳಲ್ಲಿ ಬಿಟ್ಟು ಹೋಗುತ್ತಿದ್ದೇನೆ ಎಂಬ ದೃಢವಿಶ್ವಾಸದಿಂದ ಅಲ್ಲಿಂದ ಹೊರಟು ಬಂದಿದ್ದಳು.

ಅಂದಿನಿಂದ ಅಳಿಲಿನ ಆರೈಕೆ ಶುರುವಾಯಿತು. ನಿತ್ಯ ಅವರಿಬ್ಬರ ನಡುವೆ ದೂರವಾಣಿಯಲ್ಲಿ ಬರೀ ಅಳಿಲಿನ ಬಗ್ಗೆ ಮಾತು. ಇವತ್ತು ಅಳಿಲು ಕಣ್ಣುಬಿಟ್ಟಿತು, ಇವತ್ತು ಕಿವಿ ತೆರೆದುಕೊಂಡಿತು, ಇವತ್ತು ಬಾಲ ತೆರೆದುಕೊಂಡಿತು ಅಂತ ಇಬ್ಬರೂ ಖುಷಿಪಡುತ್ತಿದ್ದರು. ನಿಧಾನವಾಗಿ ಅವನ ಶುಶ್ರೂಷೆಯಲ್ಲಿ ಅದು ಬೆಳೆಯತೊಡಗಿತು. ಅದನ್ನು ಒಂದು ರಟ್ಟಿನ ಪೆಟ್ಟಿಗೆಯಲ್ಲಿ ಇಟ್ಟು ಅದಕ್ಕೆ ಆಹಾರ ಕೊಟ್ಟು ಕಾಲೇಜಿಗೆ ಹೋಗುತ್ತಿದ್ದ. ಮಧ್ಯದಲ್ಲಿ ಕ್ಲಾಸ್ ಇಲ್ಲದಿರುವಾಗ ಮನೆ ಕಾಲೇಜ್ ಹತ್ತಿರ ಇದ್ದುದರಿಂದ ಮನೆಗೆ ಬಂದು ಹಾಲು ಕೊಟ್ಟು ಉಪಚರಿಸುತ್ತಿದ್ದ. ನಿಧಾನವಾಗಿ ಎರಡು ಮೂರು ತಿಂಗಳುಗಳಾದ ಮೇಲೆ ಅದು ಸ್ವಲ್ಪ ಸ್ವಲ್ಪ ಓಡಾಡತೊಡಗಿತ್ತು.. ಅವನು ಮನೆಗೆ ಬಂದು ಶಿಳ್ಳೆ ಹೊಡೆದರೆ ಡಬ್ಬದಲ್ಲಿ ದಡಬಡನೆ ಓಡಾಡುತ್ತಿತ್ತು. ಅವನ ಬರುವುದು ಅದಕ್ಕೆ ತಿಳಿಯುತ್ತಿತ್ತೇನೋ!

ವಿನಯ್ ಮೈಸೂರಿನಿಂದ ಬೆಂಗಳೂರಿಗೆ ಬಂದಾಗ ಅಳಿಲನ್ನೂ ತರುತ್ತಿದ್ದ. ಆಗ ಮನೆಯ ಎಲ್ಲ ಮಕ್ಕಳು ಅದನ್ನು ನೋಡಲು ಒಟ್ಟಿಗೆ ಸೇರುತ್ತಿದ್ದರು. ವಿನಯ್ ಅದನ್ನು ಅಂಗೈಯಲ್ಲಿ ಇಟ್ಟುಕೊಂಡರೆ ಮೈಮೇಲೆ ಓಡಾಡುತ್ತಿತ್ತು. ಅವನ ಷರ್ಟ್ ಒಳಗಡೆ, ಹೊರಗಡೆ ಎಲ್ಲಾ ಓಡಾಡುತ್ತಿದ್ದರೂ ಅವನಿಗೆ ಮುಜುಗರವೇ ಆಗುತ್ತಿರಲಿಲ್ಲ. ಅವನು ಅದನ್ನು ತನ್ನ ಷರ್ಟ್ ಜೇಬಿನಲ್ಲಿ ಇಟ್ಟುಕೊಂಡರೆ, ಜೇಬಿನಿಂದ ತನ್ನೆರಡು ಕೈಗಳು, ಮೂತಿಯನ್ನು ಹೊರಹಾಕಿ ತನ್ನೆರಡು ಪುಟ್ಟ ಕಣ್ಣುಗಳಿಂದ ನೋಡುವ ಆ ದೃಶ್ಯವೇ ಬಲು ಸೊಗಸು. ಮನೆಯ ಮಕ್ಕಳಿಗೆಲ್ಲಾ ಅದೇ ಆಟ. ಅಳಿಲು ಬಂದರೆ ನಾಯಿ ಓಡುತ್ತಿತ್ತು. ನಾಯಿಗೆ ವಿಪರೀತ ಮುಜುಗರ. ಈ ಅಳಿಲು ಅದರ ಮೇಲೆ ಎಗರುತ್ತಿತ್ತು! ಈ ತರಹ ಆಟವಾಡುತ್ತಿದ್ದರೆ ಅವನ ಅಮ್ಮನಿಗೆ ಎಲ್ಲಿ ಮಗನ ಓದಿಗೆ ತೊಂದರೆಯಾಗುತ್ತದೆಯೊ ಎಂಬ ಆತಂಕ. ಅದಕ್ಕೇ ಅದು ಓಡಾಡಲು ಶುರು ಮಾಡಿದ ಮೇಲೆ ತೆಗೆದುಕೊಂಡು ಹೋಗಿ ಅದನ್ನು ಹೊರಗಿನ ಪರಿಸರದಲ್ಲಿ ಬಿಡು ಎಂದು ಅವನಿಗೆ ಸಲಹೆ ನೀಡಿದರು.

ಅಂತೆಯೇ ಅದನ್ನು ಒಂದು ದಿನ ಉತ್ತರಹಳ್ಳಿಯ ಬಳಿ ಇದ್ದ "ಪೀಪಲ್ ಫಾರ್ ಅನಿಮಲ್ಸ್" ಎಂಬ ಸಂಘದವರ ಪುನರುತ್ಥಾನ ಉದ್ಯಾನವನದಲ್ಲಿ ಅದನ್ನು ಬಿಟ್ಟೊಡನೆಯೇ ಅದು ಸರಸರನೆ ಮರ ಹತ್ತಿ ಕಣ್ಮರೆಯಾಗಿತ್ತು. ಭಾರವಾದ ಹೃದಯದಿಂದ ಅದಕ್ಕೆ ವಿದಾಯ ಕೋರಿದ್ದ ವಿನಯ್. ಅಂತೂ ಅಳಿಲು ಸಾಕುಪ್ರಾಣಿಯಾಗಿ ಅವನ ಜೊತೆ ಬಾಂಧವ್ಯ ಬೆಸೆದಿತ್ತು ಎಂಬುದಂತೂ ನಿಜ.

ಮುಂದೊಂದು ದಿನ ನನ್ನ ಮಗಳು ಅವರ ಮನೆಯಲ್ಲಿ ಇನ್ನೊಂದು ಪ್ರಾಣಿ ಸಾಕುವುದರ ಬಗ್ಗೆ ಮಾತನಾಡುತ್ತಿದ್ದಾಗ ಅದನ್ನು ಕೇಳಿಸಿಕೊಂಡ ನಮ್ಮ ಅತ್ತಿಗೆ "ನೀನು ಸುಮ್ಮನಿರು ಮೇಘನಾ, ಅವನಿಗೆ ಇನ್ನೊಂದು ಪ್ರಾಣಿ ತಂದು ಕೊಡಬೇಡ" ಎಂದ ತಕ್ಷಣ ಅಲ್ಲಿದ್ದ ನಾವೆಲ್ಲಾ ಗೊಳ್ಳೆಂದು ನಕ್ಕಿದ್ದೆವು.

*****

ಈ ಸಾವು ನ್ಯಾಯವೇ?

–ರೇಣುಕಾ ದೇಸಾಯಿ

ಪೂಜೆಗೈಯುವ ಆಲಯದಲಿ
ಬೆಂಕಿ, ಧ್ವಂಸ, ಆರ್ತನಾದ
ನಂಬಿಕೆಯ ಮೂಲಕ್ಕೆ ಕೊಡಲಿ
ಮನಸ್ಸಿನ ಮುಹೂರ್ತಕ್ಕೆ ನುಚ್ಚು ನೂರು

ಕಾರಣ ಬೇಕಿಲ್ಲ ಖೂಳರಿಗೆ
ಅವರೇ ತಂದು ಹಾಕುವರು ಕಾರಣ
ಜೀವ, ರಕ್ತ ಪಿಪಾಸುಗಳು
ಎಲ್ಲಲ್ಲೂ ಅವರದೇ ಅಟ್ಟಹಾಸ

ಸಾವಿರ, ಲಕ್ಷ, ಜೀವಗಳ ಆರ್ತನಾದ
ಅಲ್ಲಿಹುದು ನಿಷ್ಪಾಪಿ ಜೀವಿಗಳು
ಶ್ರಮಜೀವಿಗಳು, ಮುಗ್ಧರು, ಹಸುಳೆಗಳು
ಸರ್ವವನ್ನೂ ತ್ಯಜಿಸಿದ ಸನ್ಯಾಸಿಗಳು

ಕಾಲ ಕಾಲದಿಂದಲೂ ಅನೂಚಾನವಾಗಿ
ನೆಡೆದಿದೆ ಘೋರ ಹತ್ಯಾಕಾಂಡ
ಇಪ್ಪತ್ತೊಂದರ ಶತಮಾನಕ್ಕೂ ಅದೇ
ವಿಶ್ವದ ಗಮನ ಎಲ್ಲಿದೆ?

ಭರತ ಖಂಡೇ, ಭರತ ವರ್ಷೇ
ಜಂಬೂದ್ವೀಪೇ ವಿಶಾಲ ನಾಡು
ಕ್ರೂರಿಗಳ, ಅಧರ್ಮಿಗಳ ಪಾಲು
ಹಿಡಿಯಾಗಿಹುದು ಧರ್ಮದ ಬೀಡು

ಇರುವದೊಂದು ನೆಲೆ, ನೆಲ
ಸಮುಷ್ಟಿಯಲಿ ಅಂಗೈಮುಷ್ಟಿಯಾಗಿ
ಸಮಸ್ತರೂ ಹರಿಸೋಣ ಚಿತ್ತ
ಕಾಪಾಡೋಣ ನಮ್ಮ ವಿತ್ತ

ನಾನೊಂದು ಜೀವಿ ನನಗೆಲ್ಲಿದೆ ಧ್ವನಿ
ಬನ್ನಿ ಕರೆದಿರುವರು ಯುವಕರ ಗಣಿ
ಸಾಲಾಗಿ ಕೈ ಜೋಡಿಸಿ ನ್ಯಾಯ ಕೇಳಿ
ಒಟ್ಟಾಗಿ ಧ್ವನಿಯನ್ನು ಪ್ರತಿಧ್ವನಿಸಿ

ಸಾವಿರಾರು ಸೇರಿದೆವು ಎಲ್ಲಾ
ಕೂಗಿದೆವು ಜೋರಾಗಿ ಈ ಸಾವು ನ್ಯಾಯವೇ?
ಹಿಡಿದೆವು ಕೈಯಲ್ಲಿ ಪಂಜುಗಳ
ನುಡಿದೆವು ನಮ್ಮ ಮನದಾಳದ ಜ್ವಾಲೆ

ಕೃಷ್ಣನ ಪದತಲದಿಂದ ಹೊರಟಿತು ಕೂಗು
ಭುಗಿಲೆದ್ದಿತು ದೀಪಗಳ ಜ್ವಾಲೆ ಹಿಲಾಲು
ಬಿಸಿಯೂ ತಗಲದಂತೆ ಕಾಪಾಡಿದೆವು ಮನುಕುಲವ
ಸನಾತನ ಧರ್ಮದ ತಾತ್ಪರ್ಯ ಇದುವೆ

ಮನದಲ್ಲಿ ದುಃಖದ ಮಡುವು
ಕೂಗುವದು ನ್ಯಾಯಕ್ಕೆ ಅನವರತವು
ರಾಧೆಯ ಸಮ್ಮುಖದಲ್ಲಿ ಇರಿಸಿದೆವು ಅಗ್ನಿ
ಓಂ ಶಾಂತೀಃ, ಓಂ ಶಾಂತೀಃ, ಓಂ ಶಾಂತೀಃ

*****

ಸಣ್ಣ ಕತೆ

ತಪ್ಪೊಪ್ಪಿಗೆ

- ಮಾಲತಿ ಶ್ರೀನಿವಾಸನ್

ಸುಸಜ್ಜಿತ ಆಸ್ಪತ್ರೆಯ ಖಾಸಗಿ ಕೋಣೆ, ಕಣ್ಣು ಮುಚ್ಚಿ ಮಲಗಿದ ರುಕ್ಮಿಣಿಯ ಮನಸ್ಸು ಮೂರು ದಿನಗಳ ನಂತರ ಇಂದು ನಿರಾಳವಾಗಿತ್ತು. "ಏನು ತೊಂದರೆ ಇಲ್ಲಮ್ಮ, ಗಾಯ ಮಾಗಿದೆ ನಾಳೆ ನನ್ನ ಅಸಿಸ್ಟೆಂಟ್ ಮಧುಕರ್ ಕಟ್ಟು ಬಿಚ್ಚುತ್ತಾನೆ, ಒಂದು ತಿಂಗಳು ಫಿಸಿಯೋಥೆರಪಿ ಮಾಡಬೇಕು ತೋಳಿಗೆ ಬಲ ಬರೋದಕ್ಕೆ, ಕಟ್ಟು ಬಿಚ್ಚುತ್ತಲೇ ಎಲ್ಲ ಕೆಲಸ ಜಾಸ್ತಿ ಮಾಡಬೇಡಿ, ಆಮೇಲೆ ಆ ಕೈಯೂ ರಿಪೇರಿಯಾದರೆ ಕಷ್ಟ" ಅಂತ ಹಿರಿಯ ವೈದ್ಯರು ನಗಾಡಿದರು.

"ಇಲ್ಲ ಡಾಕ್ಟರ್, ನಾನು ನೋಡ್ಕೋತೀನಿ" ಅಂತ ಗಂಡ ಹೇಳಿದಾಗ ನೆಮ್ಮದಿಯ ನಿಟ್ಟುಸಿರು ಬಿಟ್ಟಳು ರುಕ್ಮಿಣಿ. 75 ದಾಟಿದ ಗಂಡನ ಪರದಾಟದ ಅರಿವಿತ್ತು ಅವಳಿಗೆ. ಮನಸ್ಸು ಯೋಚಿಸಿತು, ನಾವು ಹೆಂಗಸರೇ ಹೀಗೆ. ಮುಂಚೆ ಎಲ್ಲ ತಲೆ ಮೇಲೆ ಎಳಕೊಂಡು ಅವರನ್ನು ಪರಾವಲಂಬಿಗಳಾಗಿ ಮಾಡಿಬಿಡುತ್ತೇವೆ, ನಂತರ ನಾವೇ ನಗುತ್ತೇವೆ ಅವರ ಪರದಾಟ ನೋಡಿ. ಇದೊಂದು ರೀತಿಯ ಸ್ವಯಂಕೃತಾಪರಾಧ.

ಅವಳ ಆರೈಕೆಗೆ ಹೊರದೇಶದಲ್ಲಿದ್ದ ಮಗ-ಮಗಳು ಬರುವುದಾಗಿ ಕರೆ ಮಾಡಿದಾಗ, ಚಿಕ್ಕ ಮಕ್ಕಳನ್ನು ಬಿಟ್ಟು ಖಂಡಿತ ಬರುವುದು ಬೇಡ, ಅದೂ ಕೋವಿಡ್ ಗಲಾಟೆಯ ನಡುವೆ ಬಿಲ್ಕುಲ್ ಬೇಡ ಅಂತ ಇಬ್ಬರೂ ಹೇಳಿದ್ದರು. ಸಣ್ಣ ಶಸ್ತ್ರಚಿಕಿತ್ಸೆ ಬಲತೋಳಿನ ಮೂಳೆಯದು ಏನು ಆಗೊಲ್ಲ ಅಂತ ಧೈರ್ಯ ಹೇಳಿ, ತಾವಿಬ್ಬರೇ ಮೂರು ದಿನ ಆಸ್ಪತ್ರೆಯಲ್ಲೇ ಇದ್ದು, ಮನೆಗೆ ಹೋಗುವ ನಿರೀಕ್ಷೆಯಲ್ಲಿದ್ದರು.

ಮಾರನೆಯ ದಿನ ದಾದಿಯ ಸಹಾಯದಿಂದ ಸ್ನಾನ ಮುಗಿಸಿ ತಿಂಡಿ ತಿಂದು, ಸ್ತೋತ್ರ ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾ ಮಲಗಿದ್ದಾಗ ಒಳಬಂದ ವೈದ್ಯ ಮಧುಕರನನ್ನು ಕಂಡು ಶಾಕ್ ಹೊಡೆದಂತಾಯಿತು ರುಕ್ಮಿಣಿಗೆ. "ಮಧುಕರ್, ಎಷ್ಟು ವರ್ಷದ ನಂತರದ ಭೇಟಿ. ಹೇಗಿದ್ದೀಯಪ್ಪಾ?" ಎದ್ದು ಕುಳಿತಳು ನಗುತ್ತ.

“ರುಕ್ಮಿಣಿ ಮಾಮ್, ವ್ಹಾಟ್ ಎ ಸರ್ಪ್ರೈಸ್” ಅನ್ನುತ್ತಾ ಬಗ್ಗಿ ಕಾಲಿಗೆ ನಮಸ್ಕಾರ ಮಾಡಿದ ಮಧುವಿನ ತಲೆ ಮೇಲೆ ಕೈ ಇಟ್ಟು ಆಶೀರ್ವದಿಸಿದಾಗ ಕಣ್ಣಲ್ಲಿ ನೀರು ತುಂಬಿತ್ತು ಇಬ್ಬರಿಗೂ. ನಾಲ್ಕು ದಶಕಗಳ ಹಿಂದಿನ ಘಟನೆ ನೆನಪಾಗಿ ಒಮ್ಮೆಲೆ ಮಾತನಾಡಲಾಗದಂತಹ ಸ್ಥಿತಿ.

"ಹೇಗಿದ್ದೀಯಾ? ಎಲ್ಲಿದ್ದೀಯಾ ಮಧು? ಓದು ಎಲ್ಲಿ ಮುಗಿಸಿದೆ? ಅಮ್ಮ ಅಪ್ಪ ಹೇಗಿದ್ದಾರೆ?" ಪ್ರಶ್ನಿಸಿದಳು.

"ಕೂತ್ಕೊಳಿ ಮೇಡಂ ಎಲ್ಲ ಹೇಳ್ತೀನಿ" ಅಂತ ತನ್ನ ಕಥೆ ಬಿಚ್ಚಿಟ್ಟ ಮಧು, "ಏನ್ ಹೇಳಲಿ ಮೇಡಂ ಸ್ವಲ್ಪ ದಿನ, ಮಾಡಿದ ತಪ್ಪಿಗೆ ಓದೋದೇ ಬೇಡ ಅನಿಸಿತ್ತು, ನಂತರ ಸುಧಾರಿಸಿಕೊಂಡೆ, ನಿಮ್ಮ ಔದಾರ್ಯ, ದೊಡ್ಡ ಮನಸ್ಸು, ನಾ ಮಾಡಿದ

ತಪ್ಪು ಮುಚ್ಚಿಹೋಗಿತ್ತು. ಶ್ರದ್ಧೆ ಇಟ್ಟು ಓದಿ ಎಂಬಿಬಿಎಸ್ ಮುಗಿಸಿದೆ. ಮೂಳೆ ತಜ್ಞನಾಗಬೇಕು ಅಂತ ಆ ವಿಭಾಗದಲ್ಲಿ ಉನ್ನತ ಶಿಕ್ಷಣ ಇದೇ ದೇಶದಲ್ಲಿ ಮಾಡಿದೆ. ಈ ಆಸ್ಪತ್ರೆಯಲ್ಲಿ ಕೆಲಸ ಮಾಡ್ತಾ ಇದ್ದೀನಿ. ನೀವು ಹೇಗಿದ್ದೀರಾ? ಮಾಧು ಎಲ್ಲಿದ್ದಾನೆ?" ಎಂದು ಕೇಳಿದ.

"ನಾವಿಬ್ಬರೂ ಚೆನ್ನಾಗಿದ್ದೇವೆ ಮಧು, ನಿವೃತ್ತಿಯ ನಂತರವೂ ಇವರು ತಮ್ಮ ಸಂಶೋಧನೆ ಮುಂದುವರಿಸಿದ್ದಾರೆ, ಮಾಧು ವಿದೇಶದಲ್ಲಿ ದೊಡ್ಡ ಕಂಪನಿಯಲ್ಲಿ ತನ್ನ ವಿಭಾಗಕ್ಕೆ ಮುಖ್ಯಸ್ಥನಾಗಿ ದುಡಿಯುತ್ತಿದ್ದಾನೆ, ಮಗಳು ನಿನ್ನಂತೆಯೇ ವೈದ್ಯೆ, ಇಬ್ಬರೂ ಹೊರದೇಶದಲ್ಲಿ. ನಿಮ್ಮ ಅಮ್ಮ ಅಪ್ಪ ಹೇಗಿದ್ದಾರೆ?" ಅಂತ ಪ್ರಶ್ನಿಸಿದಳು.

"ಅಪ್ಪ ಹೋಗಿಬಿಟ್ರು ಮೇಡಂ, ಕೊರೋನಾ ಸೋಂಕು ಬಲಿ ತೊಗೊಂಡು ಬಿಡ್ತು, ಅವರನ್ನ ಉಳಿಸಿಕೊಳ್ಳಲಾಗದ ನೋವು ತುಂಬಾ ಕಾಡುತ್ತೆ. ಅಮ್ಮ ಇನ್ನೂ ಅದೇ ದುಃಖದಲ್ಲಿದ್ದಾರೆ. ಹಿಂದೆ ನಾ ಮಾಡಿದ ತಪ್ಪಿಗೆ ಅವರೇ ಕಾರಣ, ಯಾಕಾದ್ರು ಸುಳ್ಳು ಹೇಳಿದೆವೋ ಅನ್ನಿಸುತ್ತೆ" ಅನ್ನುತ್ತಾ ತಲೆ ತಗ್ಗಿಸಿ ಕುಳಿತ ಅವನಿಗೆ ಸಮಾಧಾನ ಹೇಳಿದಳು. "ಬಿಡು ಮಧು, ಆದದ್ದು ಆಯಿತು, ಅವರಿಗೆ ನೀನು ವೈದ್ಯನೇ ಆಗಬೇಕು ಅನ್ನುವ ಆಸೆ, ಹಠ. ಅವರು ಮಾಡಿಸಿದ ತಪ್ಪಿಗೆ ನೀ ಕಾರಣನಲ್ಲ, ಹಿಂದಿನದನ್ನು ಮರೆತು ಬಿಡು. ಚೆನ್ನಾಗಿ ಓದಿ ಮುಂದೆ ಬಂದಿದ್ದೀಯ, ಈ ವೃತ್ತಿಯಲ್ಲಿ ಒಳ್ಳೆಯ ಹೆಸರು ಮಾಡಿದ್ದೀಯ, ಹೆಂಡತಿ ಸಹ ಇದೇ ವೃತ್ತಿಯಲ್ಲಿದ್ದಾಳೆ" ಅಂತ ಹೇಳಿದೆ, "ಮುಂದಿನ ಜೀವನ ಚೆನ್ನಾಗಿರಲಿ, ಅಮ್ಮನ್ನ ಚೆನ್ನಾಗಿ ನೋಡಿಕೊ, ಕೆಲಸ ಚೆನ್ನಾಗಿ ಮಾಡು" ಅಂತ ತುಂಬು ಮನದಿಂದ ಸಮಾಧಾನ ಮಾಡಿದಳು ರುಕ್ಮಿಣಿ.

ಅವಳ ಕಾಲುಮುಟ್ಟಿ ಮತ್ತೊಮ್ಮೆ ನಮಸ್ಕರಿಸಿ, "ಮಲಕ್ಕೊಳ್ಳಿ ಮೇಡಂ ಕಟ್ಟು ಬಿಚ್ಚುತ್ತೇನೆ, ಮತ್ತೆ ನೀವು ಇಲ್ಲಿನ ಫಾರ್ಮಲಿಟೀಸ್ ಮುಗಿಸಿ ಮನೆಗೆ ಹೋಗಬಹುದು" ಅಂತ ಹೇಳಿ ಮಧು ತನ್ನ ಕೆಲಸಕ್ಕೆ ಕೈ ಹಾಕಿದ. ಕಟ್ಟು ಬಿಚ್ಚಿ, ಹೊಲಿಗೆ ತೆಗೆದು "ಗಾಯ ಮಾಗಿದೆ, ಏನು ಪ್ರಾಬ್ಲೆಮ್ ಇಲ್ಲ, ನನ್ನ ಮೊಬೈಲ್ ನಂಬರ್ ತೊಗೊಳಿ ಮತ್ತೆ ಬರುವಾಗ ಕರೆ ಮಾಡಿ. ಇನ್ನೇನಿದ್ದರೂ ನಿಮ್ಮ ಎಲ್ಲಾ ಆರೋಗ್ಯದ ತಪಾಸಣೆಗೆ ನನ್ನ ನೆರವು ಇರುತ್ತೆ. ಈ ಸೇವೆ ಮಾಡೋ ಅವಕಾಶ ಕೊಡಿ" ಅಂತ ಕಳಕಳಿಯಿಂದ ಹೇಳಿದ ಮಧು.

"ಆಯ್ತು ಮಧು, ಅಮ್ಮನ್ನ ಕೇಳಿದೆ ಅಂತ ಹೇಳು" ಅನ್ನುತ್ತ ಒಳಗೆ ಬಂದ ಗಂಡನಿಗೆ ಮಧುವನ್ನು ಪರಿಚಯಿಸಿದಳು. ಏನು ಮಾತನಾಡಲೂ ತೋಚದೆ ವಾಸು ಮಧುವಿನ ಕೈ ಕುಲುಕಿ ಥಾಂಕ್ಸ್ ಮಧು ಅನ್ನುತ್ತಾ ಕೈ ಮುಗಿದರು.

ಮಧು ತನ್ನ ಕೆಲಸ ಮುಗಿಸಿ ಹೊರಟಾಗ, ಅವಳ ಮನಸ್ಸಲ್ಲಿ ಮತ್ತೆ ಹಳೆಯ ಘಟನೆಗಳ ಬಗ್ಗೆ ವಿಶ್ಲೇಷಣೆ ಶುರುವಾಯಿತು. ಅಂದಿನ ದಿನಗಳಲ್ಲಿ ರುಕ್ಮಿಣಿ ಬೆಂಗಳೂರಿನಲ್ಲಿ ಪದವಿಪೂರ್ವ ಕಾಲೇಜೊಂದರಲ್ಲಿ ಜೀವಶಾಸ್ತ್ರ ವಿಭಾಗದ ಮುಖ್ಯಸ್ಥೆಯಾಗಿ ಹಿರಿಯ ಅಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದಳು. ಪಿಯುಸಿ ಪರೀಕ್ಷೆಯ ಮೌಲ್ಯಮಾಪನಕ್ಕೆ, ಪ್ರಶ್ನೆ ಪತ್ರಿಕೆ ತಯಾರಿಕೆ ಗಾಗಿ ಸರ್ಕಾರಿ ಪದವಿಪೂರ್ವ ನಿರ್ದೇಶಕರ ಕಚೇರಿಗೆ ಹಾಗೂ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶ ನಿರ್ಧಾರ ಮಾಡುತ್ತಿದ್ದ ಕಚೇರಿಯ ಕೆಲಸಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ತನ್ನ ಶಿಸ್ತು, ಕ್ರಮಬದ್ಧತೆಯಿಂದ

ಎಲ್ಲರಿಗೂ ಚಿರಪರಿಚಿತಳಾಗಿದ್ದಳು. ಮಧು ಅವಳ ವಿದ್ಯಾರ್ಥಿ. ಹೆಚ್ಚು ಮಾತಿಲ್ಲ, ದೂರದ ಸಂಬಂಧಿಯ ಮಗ, ಅಷ್ಟು ಮಾತ್ರ ತಿಳಿದಿತ್ತು ಅವನ ಬಗ್ಗೆ.

ಪ್ರತಿ ತರಗತಿಯಲ್ಲಿ ತೊಂಬತ್ತಕ್ಕೂ ಹೆಚ್ಚು ಸಂಖ್ಯೆಯ ಹುಡುಗರ ನಡುವೆ ಮಧುವನ್ನು ಎರಡು ವರುಷ ಅಷ್ಟು ಹತ್ತಿರದಿಂದ ಗಮನಿಸಿರಲಿಲ್ಲ ರುಕ್ಮಿಣಿ. ಪ್ರತಿ ವರುಷದಂತೆ ಆ ವರುಷವೂ ಪಿಯುಸಿ ಫಲಿತಾಂಶದ ನಂತರ ಸಿಇಟಿ ಫಲಿತಾಂಶ ಹೊರಬಂದಾಗ ಕಾಲೇಜಿನ ಅಂಗಳದಲ್ಲಿ ದೊಡ್ಡ ಕೋಲಾಹಲ, ಕೆಲವು ಹುಡುಗರು ರುಕ್ಮಿಣಿಯ ಕೊಠಡಿಗೆ ಬಂದು "ಮೇಡಂ, ಏನೋ ಗೋಲ್ಮಾಲ್ ನಡೆದಿದೆ, ಮಧುಕರನ ಮಾರ್ಕ್ಸ್ 80ರ ಮೇಲೆ ಹೋಗಿಲ್ಲ ಸಿಇಟಿ ರಾಂಕು ನಮ್ಮೆಲ್ಲರಿಗಿಂತ ಮೇಲೆ. ಆದ್ರೂ ಅವನಿಗೆ ಸರ್ಕಾರಿ ವೈದ್ಯಕೀಯ ಕಾಲೇಜಲ್ಲಿ ಸೀಟು ಹೇಗೆ ಕೊಟ್ಟಿದ್ದಾರೆ? ಹಲವಾರು ವಿದ್ಯಾರ್ಥಿಗಳ ಕಣ್ಣಲ್ಲಿ ನೀರು.

ಪರಿಸ್ಥಿತಿ ಬಿಗಡಾಯಿಸೋ ಮುನ್ನ ಎಚ್ಚೆತ್ತುಕೊಳ್ಳುತ್ತ, "ನೋಡಿ ವಿಚಾರಿಸೋಣ, ಈಗ ನೀವು ಅವನ ಬಗ್ಗೆ ಯೋಚಿಸದೆ ನಿಮ್ಮ ಭವಿಷ್ಯ ನೋಡಿಕೊಳ್ಳಿ. ಆ ಕಡೆ ಹೋದಾಗ ನಾನು ತನಿಖೆ ಮಾಡುತ್ತೇನೆ. ನೀವು ರೀಟೋಟಲಿಂಗ್ ಹಾಕೋಕೆ ಸಮಯ ಇದೆ, ಅದರ ಬಗ್ಗೆ ಯೋಚಿಸಿ" ಅಂತ ಎಲ್ಲರನ್ನೂ ಹೊರಗೆ ಕಳುಹಿಸಿದಳು. ಸುಮ್ಮನಿರಲು ಮನ ಒಪ್ಪಲಿಲ್ಲ.

ಕಾಲೇಜಿನ ಕಾರ್ಯಾಲಯದ ವಿಭಾಗದಿಂದ ಮಧುವಿನ ಹಾಲ್ ಟಿಕೆಟ್ ಸಂಖ್ಯೆ, ಸಿಇಟಿ ಸಂಖ್ಯೆ ಮಾಹಿತಿ ತೆಗೆದುಕೊಂಡು ಸಿಇಟಿ ನಿರ್ದೇಶಕರ ಕಚೇರಿಗೆ ಹೋಗಿ ಪರಿಚಿತ ಸಿಬ್ಬಂದಿಯ ಮುಂದೆ ಕುಳಿತು, "ನೋಡಿ ಈ ಹುಡುಗನಿಗೆ ಸೀಟು ಎಲ್ಲಿ ಸಿಕ್ಕಿದೆ ಅಂತ ಹೇಳ್ತೀರಾ" ಅಂತ ಕೇಳಿದಾಗ, "ಲಿಸ್ಟ್ ಇಲ್ಲೇ ಇದೆ ತೊಗೊಳಿ ಮೇಡಂ ನೋಡಿ" ಅಂತ ಆ ಅಧಿಕಾರಿ ಪೂರ್ತಿ ಕಡತ ಮುಂದಿಟ್ಟಿದ್ದರು.

ಮಧುಕರನ ಹೆಸರನ್ನು ಹುಡುಕಿದಾಗ ಮಾಹಿತಿ ದಿಗ್ಭ್ರಾಂತಳಾಗಿಸಿತು ಅವಳನ್ನು. ಮಧುಕರನಿಗೆ ಆರ್ಥಿಕವಾಗಿ ಹಿಂದುಳಿದ ವರ್ಗ ಅಂತ ಬರೀ ತಾಯಿಯ ಹೆಸರಲ್ಲಿನ ಸಣ್ಣ ಕೈಗಾರಿಕೆಯ ಆದಾಯ ತೋರಿಸಿ ಮೈಸೂರಿನ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಕೊಡಲಾಗಿತ್ತು. ಎಂತಹ ಸುಳ್ಳು, ಮಗ ತಾನಂದುಕೊಂಡ್ದೇ ಓದಬೇಕೆಂಬ ಹಠ, ಸರ್ಕಾರಿ ಕಚೇರಿಯಲ್ಲಿ ಕ್ಲಾಸ್-1 ಆಫೀಸರ್ ಆಗಿದ್ದ ಮಧುಕರನ ತಂದೆ ನಾಗೇಶ್ ಅವರ ಹೆಸರೇ ಇರಲಿಲ್ಲ ಮಾಹಿತಿಯಲ್ಲಿ! ತಂದೆ ಅನ್ನುವ ಕಡೆ ಬರಿ ಗೆರೆ ಎಳೆದಿದ್ದರು. ಎಂತಹ ಮೋಸ.!

ರುಕ್ಮಿಣಿಯ ಕಣ್ಣ ಮುಂದೆ ಮಧುಕರನ ತಂದೆತಾಯಿಯ ಮುಖಗಳು ನಿಂತಂತಾಯಿತು. ಇದನ್ನು ಹೀಗೆ ಬಿಡೋದ? ದೂರು ದಾಖಲಿಸೋದ? ಸತ್ಯ ಹೇಳಿದರೆ ನಾಗೇಶ್ ಕೆಲಸ ಹೋಗುವುದು ಖಂಡಿತ. ಅವರ ಹೆಂಡತಿಯ ಸ್ಥಿತಿ ಊಹಿಸಲು ಸಾಧ್ಯವಿಲ್ಲ, ಇನ್ನು ಮಧುಕರನ ಭವಿಷ್ಯ ಹಾಳಾಗುತ್ತೆ, ಸೂಕ್ಷ್ಮ ಮನಸ್ಸು. ಕೆಟ್ಟ ನಿರ್ಧಾರ ತೆಗೆದುಕೊಂಡರೆ?

ಮಗ ಮಾಧುವಿನ ಮುಖ ನೆನಪಾಯ್ತು. ಇಡೀ ಸಂಸಾರ ಹಾಳು ಮಾಡಿದ ಪಾಪ, ಅಪರಾಧೀ ಭಾವ ಜೀವನ ಪೂರ್ತಿ ಕಾಡಿದರೆ? ದಾಖಲೆಯ ಕಡತ ಅಧಿಕಾರಿಗೆ ವಾಪಸ್ ಕೊಟ್ಟು ಹೊರಬಂದ ರುಕ್ಮಿಣಿ ಯೋಚಿಸಿದಳು .ಈ ವ್ಯವಸ್ಥೆ ಸರಿ ಇಲ್ಲ. ಅದನ್ನು ಸರಿಮಾಡೋ ಪ್ರಯತ್ನ ಮಾಡಬೇಕು. ಇದು ಒಂದು ನನ್ನ ಕಣ್ಣಿಗೆ ಕಂಡ ಸತ್ಯ. ಕಾಣದ್ದು ಎಷ್ಟಿದೆಯೋ?!

ತನ್ನ ಕಣ್ಣಿಗೆ ಕಂಡ ಅವ್ಯವಹಾರ ಅನಾವರಣ ಮಾಡಿದರೆ ಮುಂದಾಗುವ ಪರಿಣಾಮ ಊಹಿಸಿ ಹೆದರಿದಳು ರುಕ್ಮಿಣಿ. ಸರ್ಕಾರಿ ಹುದ್ದೆಯಲ್ಲಿ ಪ್ರಥಮ ದರ್ಜೆಯ ಆಫೀಸರ್ ಆಗಿ ಮಧುಕರನ ತಂದೆ ನಾಗೇಶ್ ಯಾರ ಸಹಾಯದಿಂದ ನಕಲಿ ದಾಖಲೆ ಸೃಷ್ಟಿಸಿದರೋ, ಲಂಚ ಎಷ್ಟು ಕೊಟ್ಟರೋ? ಈ ರೀತಿಯ ವಂಚನೆ ಹಲವಾರು ವರುಷಗಳಿಂದ ನಡೆದು ಬಂದಿರ ಬಹುದು. ಈಗ ನಮ್ಮ ಕಣ್ಣಿಗೆ ಕಂಡಾಗ ದೊಡ್ಡದೆನಿಸಿದೆ. ಹೇಳದೆ ಸುಮ್ಮನಿರಲು ಮನಸ್ಸು ಒಪ್ಪದು, ಬಿಚ್ಚಿಟ್ಟರೆ ಅನಾಹುತ ತಪ್ಪದು, ದೊಡ್ಡ ಸುದ್ಧಿಯಾಗುವುದಂತೂ ನಿಜ. ಇರುವ ತಂದೆಯನ್ನು ಹೆಸರಿಸದೆ ಅಥವಾ ಜಾತಿ ಬದಲಾವಣೆ ದಾಖಲಿಸಿ ಮೀಸಲಾತಿಯ ವರ್ಗದ ಕೆಳಗೆ ಸೀಟು ಕಬಳಿಸಲು ಕಾರಣ ವ್ಯವಸ್ಥೆಯಲ್ಲಿನ ನ್ಯೂನ್ಯತೆಗಳು. ಅರ್ಜಿಗಳನ್ನು ಸರಿಯಾದ ಪರೀಕ್ಷೆಗೆ ಒಳಪಡಿಸದೆ ಅಲ್ಲೂ ಅವ್ಯವಹಾರ ನಡೆಯುತ್ತಿರುವುದು ಖಂಡಿತ. ಕಣ್ಣಿಗೆ ಸಿಕ್ಕದ್ದನ್ನು ಹಿಡಿದುಕೊಟ್ಟರೆ ಏನು ಸಾಧಿಸಿದಂತೆ? ನಿರ್ದೇಶಕರನ್ನು ಕಂಡು ಅರ್ಜಿಗಳ ನಮೂನೆ ತಿದ್ದಿ ಬದಲಾಯಿಸುವ ಪ್ರಯತ್ನ ಮಾಡಬೇಕು ಅನ್ನೋ ನಿರ್ಧಾರಕ್ಕೆ ಬಂದಳು ರುಕ್ಮಿಣಿ.

ಮಾರನೇ ದಿನ ನಿರ್ದೇಶಕರ ಕಚೇರಿಗೆ ಹೋಗಿ ಅವರ ಕಾರ್ಯದರ್ಶಿಯನ್ನು ಭೇಟಿಯಾಗಿ ಮಾತನಾಡಲು ಅಪ್ಪಣೆಗಾಗಿ ಕೋರಿದಳು. ಅವಳ ಪರಿಚಯ ಇದ್ದ ನಿರ್ದೇಶಕರು ನಗುತ್ತ ಬರಮಾಡಿಕೊಂಡು, "ಹೇಗಿದ್ದೀರಾ? ಏನು ವಿಷಯ? ನನ್ನನ್ನೇ ಭೇಟಿಯಾಗಬೇಕು ಅಂದರಂತೆ" ಅಂದಾಗ, ಸಿಇಟಿ ಪರೀಕ್ಷೆಯ ಸೀಟು ಹಂಚುವ ವಿಚಾರದಲ್ಲಿ ನಡೆಯುತ್ತಿರುವ ಅವ್ಯವಹಾರದ ಬಗ್ಗೆ ಯಾರನ್ನು ಹೆಸರಿಸದೆ ವಿವರಿಸಿದಳು.

"ಈ ರೀತಿ ಸುಳ್ಳು ದಾಖಲೆ ಕೊಟ್ಟವರ ಹೆಸರು, ವಿವರ ದೂರು ಬರೆದು ಕೊಡಮ್ಮ ತನಿಖೆ ಮಾಡೋಣ" ಅಂದರು ನಿರ್ದೇಶಕರು.

"ಯಾರನ್ನ ಹೆಸರಿಸಲಿ, ಕಣ್ಣಿಗೆ ಕಂಡವರು ಒಬ್ಬರಾದರೆ ಕಾಣದವರು ಎಷ್ಟು ಜನವೋ, ಇಲ್ಲಿನ ವ್ಯವಸ್ಥೆಯಲ್ಲೇ ಸಾಕಷ್ಟು ಜನ ತಪ್ಪಿತಸ್ಥರಿದ್ದಾರೆ ಸರ್. ಸುಲಭವಾಗಿ ವಂಚಿಸಲು ಅವಕಾಶಗಳಿದ್ದಾಗ ದುರುಪಯೋಗ ಖಂಡಿತ ಆಗುತ್ತೆ. ದಶಕಗಳಿಂದ ನಡೆಯುತ್ತಿರುವ ಅವ್ಯವಹಾರವನ್ನು ಕೈಗೆ ಸಿಕ್ಕ ಒಬ್ಬಿಬ್ಬರನ್ನು ಶಿಕ್ಷಿಸುವುದರಿಂದ ಸರಿಪಡಿಸಿದಂತೆ ಆಗುವುದಿಲ್ಲ. ಇಲ್ಲಿನ ಅರ್ಜಿಗಳ ತಪಾಸಣೆ ಬಿಗಿಗೊಳಿಸಬೇಕು, ಅರ್ಜಿಗಳ ನಮೂನೆ ಬದಲಾಗಬೇಕು, ಸೀಟಿಗಾಗಿ ಅಪ್ಪನನ್ನು ಹೆಸರಿಸದೆ, ಜಾತಿ ಮತ ಕುಲ ಬದಲಾಯಿಸಿ ಮೀಸಲಾತಿಯ ದುರುಪಯೋಗ ನಿಲ್ಲಿಸಬೇಕು. ತಂದೆ ಇಲ್ಲವೆನಿಸಿದರೆ ಅವರ ಇಲ್ಲದಿರುವಿಕೆ ದೃಢೀಕರಿಸಲು ಮರಣಪತ್ರದ ಅಥವಾ ಬೇರೆ ದಾಖಲೆಗಳಿಗೆ ಒತ್ತು ಕೊಡಬೇಕು .ನೀವು ಈ ವರುಷದಿಂದಾನೆ ಈ ನಿಟ್ಟಿನಲ್ಲಿ ಅರ್ಜಿಯನ್ನು ಬದಲಾಯಿಸಿದರೆ ಒಳ್ಳೇದು ಸರ್."

ಒಂದೇ ಉಸುರಿನಲ್ಲಿ ಮಾತಾಡುತ್ತಿದ್ದ ರುಕ್ಮಿಣಿಯನ್ನು ನೋಡಿ ಬಂಡಾರಿಯವರು "ಏನು ಮಾಡಬೇಕು ಹೇಳಮ್ಮ, ಮುಂದಿನ ವರುಷ ಈ ಬದಲಾವಣೆ ತರಲು ಪ್ರಯತ್ನ ಮಾಡೋಣ "ಅಂದರು.

"ಸರ್ ನನಗೆ ಸೂಕ್ತವೆನಿಸಿದ ಸಲಹೆಗಳನ್ನು ಬರೆದು ತಂದಿದ್ದೇನೆ, ಅರ್ಜಿಗಳ ಪರಿಶೀಲನೆಗೆ ದಕ್ಷ ಅಧಿಕಾರಿಗಳ ಅವಶ್ಯಕತೆ ಇದೆ." ಎಂದು ಹೇಳುತ್ತಾ, ತಾನು ಸಿದ್ಧಮಾಡಿದ ಪತ್ರ ಅವರ ಮುಂದಿಟ್ಟು "ನನ್ನ ಮಾತು ಕೇಳೋದಕ್ಕೆ ಸಮಯ ಕೊಟ್ಟಿದ್ದಕ್ಕೆ ಧನ್ಯವಾದಗಳು ಸರ್, ಈ ಕೆಲಸ ಬೇಗ ನಡೀಲಿ ಸರ್, ಬದಲಾದ ಅರ್ಜಿಯ ಕರಡು ಪ್ರತಿ ನನಗೂ ಕಳುಹಿಸಿದರೆ ಸಂತೋಷ" ಅನ್ನುತ್ತಾ ಕೈ ಮುಗಿದು ಎದ್ದಳು.

ಹೊರ ಬಂದಾಗ ತನ್ನ ಪ್ರಯತ್ನ ಮಾಡಿದ್ದಾಯ್ತು, ಮಿಕ್ಕಿದ್ದು ಮೇಲಿನವನ ಇಚ್ಛೆ ಅನ್ನಿಸಿತು. ಮತ್ತೆ ಆರೇಳು ತಿಂಗಳುಗಳ ನಂತರ ತಾನು ಸೂಚಿಸಿದ ಬದಲಾವಣೆ ಅಳವಡಿಸಿ ತಯಾರಿಸಿದ ಅರ್ಜಿಯ ನಮೂನೆ ಧನ್ಯವಾದದ ಪತ್ರದೊಡನೆ ನಿರ್ದೇಶಕರ ಕಚೇರಿಯಿಂದ ಬಂದಾಗ ಸಂತಸವಾಗಿತ್ತು, ತನ್ನ ಜವಾಬ್ಧಾರಿ ನಿಭಾಯಿಸಿದ ನೆಮ್ಮದಿ ಮನಸಿಗೆ.

ಮುಂದಿನ ದಿನಗಳಲ್ಲಿ ಮಧುಕರ ಮೈಸೂರು ವೈದ್ಯಕೀಯ ಕಾಲೇಜು ಸೇರಿದ್ದು, ಅವನ ಮದುವೆ ಬಗ್ಗೆ ಬರಿ ಸುದ್ಧಿ ಕೇಳಿದ್ದಷ್ಟೇ. ಸಂಪರ್ಕ ದೂರಾಗಿತ್ತು. ವರುಷಗಳ ನಂತರ ಅವನನ್ನು ಭೇಟಿಯಾದಾಗ ಅವನ ಮಾತು, ಸಾಧನೆ ನೋಡಿ ಅಂದು ತಾನು ತೆಗೆದುಕೊಂಡ ನಿರ್ಧಾರದ ಬಗ್ಗೆ ಸಮಾಧಾನವಾಯಿತು.

ವಾರ್ಡಿನೊಳಗೆ ಬಂದ ರುಕ್ಮಿಣಿಯ ಗಂಡ, ತನ್ನ ಹೆಂಡತಿ ಶಾಂತಭಾವದಲ್ಲಿ ಮಲಗಿರುವುದನ್ನುನೋಡಿ, "ಏನ್ರಿ ಮೇಡಂ, ಮನೆಗೆ ಬರೋಲ್ವ" ಅಂತ ರೇಗಿಸಿದ,

"ಕಾಯ್ತಾ ಇದ್ದೀನಿ ಸಾಹೇಬ್ರೆ, ನಡೀರಿ" ಅನ್ನುತ್ತಾ ಎದ್ದು ನಗುತ್ತ ತನ್ನಕೈ ಚೀಲ, ಕನ್ನಡಕ ಹಿಡಿದು ಅವನೊಡನೆ ಹೆಜ್ಜೆ ಹಾಕಿದಳು ರುಕ್ಮಿಣಿ.

****

ಕಿರು ನಾಟಕ

ಒಟಿಪಿ ಹಗರಣಗಳು

ರಚನೆ – ಗುರುರಾಜ ಶಾಸ್ತ್ರಿ

(ನಟನೆ – ಶಂಕರ ರಾವ್ ಮತ್ತು ಗುರುರಾಜ ಶಾಸ್ತ್ರಿ)

ಗುರುರಾಜ - ಅಬ್ಬಬ್ಬಾ, ಏನ್ ಕಿಲಾಡಿಗಳು ಅಂತೀರಾ, ಕಣ್ಮುಚ್ಚಿ ಕಣ್ತೆರಯೋಷ್ಟರಲ್ಲಿ ಬ್ಯಾಂಕ್ ಅಕೌಂಟಿನಲ್ಲಿರೋ ಹಣವೆಲ್ಲಾ ಮಂಗಮಾಯ.

ಶಂಕರ ರಾವ್ - ಆದರೆ ಹಣ ಕಳೆದುಕೊಂಡೋರ್ದು ಏನೂ ತಪ್ಪೇ ಇಲ್ವೇ, ಹಾಗೇ ಹಣ ಎತ್ಕೊಳೋಕೆ ಅದನ್ನೇನು ಅವರು ರಸ್ತೆ ಮೇಲ್ ಇಟ್ಟಿದ್ರಾ.

ಗುರುರಾಜ - ಹೂ ತಪ್ಪೇನಿಲ್ಲ ಅಂತಲ್ಲ, ತಮ್ಮ ಮೊಬೈಲ್‌ಗೆ ಬಂದ ಓ ಟಿ ಪಿ ಮೂರನೆಯವರ ಕಿವಿಗ್ ಹಾಕಿದ್ದೇ ಮಹಾಪರಾಧ ಆಯ್ತು

ಶಂಕರ ರಾವ್ - ಅಲ್ಲ, ನೀವು ಬ್ಯಾಂಕಲ್ಲಿ ಇದೇ ರೀತಿ ಹಣ ಕಳ್ಕೊಂಡಿರೋರ್ನ ತುಂಬಾ ನೋಡಿರಬೇಕಲ್ವೇ, ನಮಗೆ ಸ್ವಲ್ಪ ಈ ಹಣ ದೋಚೋರು ಉಪಯೋಗಿಸೋ ತಂತ್ರ ತಿಳಿಸ್ತೀರಾ.

ಗುರುರಾಜ - ನಿಮಗ್ ಯಾಕ್ ಸ್ವಾಮಿ ಆ ತಂತ್ರಗಳು, ದೇವ್ರು ಚೆನ್ನಾಗಿ ಕೊಟ್ಟಿದ್ದಾನೆಲ್ಲ ನಿಮಗೆ

ಶಂಕರ ರಾವ್ - ಛೇ ಹಾಗಲ್ಲ ನಾನು ಹೇಳಿದ್ದು, ಜನರಿಗೆ ಜಾಗೃತಿ ಮೂಡಿಸೋಕ್ಕೆ ಇದರಿಂದ ಉಪಯೋಗ ಆಗುತ್ತೇ ಅಂತ ಅಷ್ಟೇ. ಪಾಪ ಹಣ ಕಳಕೊಂಡೋರು ಅಮಾಯಕರು ಹಾಗೂ ಅವಿದ್ಯಾವಂತರೇ ಇರಬೇಕಲ್ವೇ

ಗುರುರಾಜ - ಅಲ್ಲೇ ನೋಡಿ ಕಥೇಲಿ ಟ್ವಿಸ್ಟ ಇರೋದು, ಹಣ ಕಳೆದುಕೊಳ್ಳೋ ಸಾಕಷ್ಟು ಜನರು ವಿದ್ಯಾವಂತರೇ, ಈ ರೀತಿ ಮೋಸದ ಎಷ್ಟೋ ಕಥೆಗಳನ್ನ ಕೇಳಿ ಮತ್ತೇ ತಾವೇ ಹಳ್ಳಕ್ ಬಿದ್ದಿರೋರೆ ಹೆಚ್ಚು

ಶಂಕರ ರಾವ್ - ಸರಿ ಹಾಗಾದ್ರೆ ಜನರಿಗೆ ಜಾಗೃತಿ ತರಲು ಹಾಗೂ ಮೋಸಗಾರರಿಂದ ವಂಚಿತರಾಗದೇ ಇರಲು ಉಪಯುಕ್ತ ಮಾಹಿತಿ ನೀಡೋಣ್ವೇ

ಗುರುರಾಜ - ಸರಿ, ಸರಿ, ನಿಮ್ಮ ಡೈಲಾಗ್ ಬರೆದುಕೊಡ್ತೇನೆ, ನಾಟಕದ ತರಹ ಮಾಡಿ ತೋರಿಸೋಣ

ದೃಶ್ಯ - ೧

ಶಂಕರ ರಾವ್ - ಓ ಮೊಬೈಲ್ ಹೊಡಕೊಳ್ತಾ ಇದೆ, ಹಲೋ ಯಾರು ಮಾತಡೋದು

ಗುರುರಾಜ - ಸಾರ್ ನಾನು ಕ್ರೆಡಿಟ್ ಕಾರ್ಡ್ ಕಂಪನಿಯಿಂದ,

ಶಂಕರ ರಾವ್ - ಏನ್ ವಿಷಯ

ಗುರುರಾಜ - ಸಾರ್ ನಿಮ್ಮ ಕ್ರೆಡಿಟ್ ಕಾರ್ಡ್‌ಗೆ ಕೆವೈಸಿ ಅಪಡೇಟ್ ಆಗಿಲ್ಲ, ನೀವು ತಕ್ಷಣ ಅಪಡೇಟ್ ಮಾಡ್ದೇ ಹೋದರೆ ದಿನಕ್ಕೆ 50 ರೂಪಾಯಿ ದಂಡ ಹಾಕ್ತಾರೆ

ಶಂಕರ ರಾವ್ - ಹೌದೇ, ನಾನೇನ್ ಮಾಡ್ಲಿ ಈಗ,

ಗುರುರಾಜ - ನಿಮ್ಮ ಕ್ರಡಿಟ್ ಕಾರ್ಡ್ ನಂಬರ್, ನಿಮ್ಮ ಆಧಾರ್ ನಂಬರ್ ಹೇಳಿ, ನಾನು ತಕ್ಷಣ ಲಿಂಕ್ ಮಾಡ್ತೀನಿ

ಶಂಕರ ರಾವ್ - ಓ, ಧನ್ಯವಾದಗಳು, ಇಗೋ ಆಧಾರ್ ಕಾರ್ಡ್ ತರುತ್ತೇನೆ

ಗುರುರಾಜ - ಮೊದಲು ಕಾರ್ಡ್ ನಂಬರ್ ಹೇಳಿ

ಶಂಕರ ರಾವ್ - 1234 5678 1234

ಗುರುರಾಜ - ಅಲ್ಲೇ ಹಿಂದೆ ಸಿ.ವಿ.ವಿ. ಅಂತ ೩ ಸಂಖ್ಯೆಗಳಿರೋ ನಂಬರ್ ಇದೆ, ಅದನ್ನೂ ತಿಳಿಸಿ.

ಶಂಕರ ರಾವ್ - ಓ ಅದೇ 123

ಗುರುರಾಜ - ಸಾರ್ ನಿಮ್ಮ ಆಧಾರ್ ನಂಬರ್ ಹೇಳಿ, ನಾನು ಲಿಂಕ್ ಮಾಡುತ್ತೇನೆ, ಐದು ಸೆಕೆಂಡ್ ಒಳಗೆ ನಿಮ್ಮ ಮೊಬೈಲ್‌ಗೆ ಬರೋ ಓಟಿಪಿ ನನಗೆ ತಿಳಿಸಿ. ಒಟಿಪಿ ಹೇಳೋದು ತಡ ಆದ್ರೆ ಮತ್ತೇ ಮೂರು ದಿನ ಲಿಂಕ್ ಮಾಡುಕ್ಕಾಗಲ್ಲ, ಸುಮ್ಮನೆ 150 ರೂಪಾಯಿ ದಂಡ ಬೀಳುತ್ತೇ

ಶಂಕರ ರಾವ್ - ಓ ಓಟಿಪಿ ಬಂತು, ಓಟಿಪಿ 1234

ಗುರುರಾಜ - ಧನ್ಯವಾದಗಳು

ಶಂಕರ ರಾವ್ - ಅಯ್ಯೋ ಇದೇನು ನನ್ನ ಕ್ರೆಡಿಟ್ ಕಾರ್ಡ್ ಇಂದ 30 ಸಾವಿರ ದುಡ್ಡು ಹೋಗಿದೆ ಅಂತ ಮೆಸೇಜ್ ಬಂತಲ್ಲ, ಹಲೋ ಹಲೋ ಹಲೋ

ಮತ್ತೇ ಅದೇ ನಂಬರ್ ಗೆ ಡಯಲ್ ಮಾಡ್ತೇನೆ, ಅಯ್ಯೋ ಸ್ವಚ್ ಆಫ್ ಆಗಿದೆ ಅಂತ ಮೆಸೇಜ್ ಬರ್ತಾ ಇದೆ.

ಅಯ್ಯೋ ಮೋಸ ಹೋದೆ, ಒಟಿಪಿ ಹೇಳ್ಳೂಡ್ದಾಗಿತ್ತಲ್ಲವಾ

ಎಲ್ಲಾ ಒಟ್ಟಿಗೆ - ಶ್ರೀಮದ್ ರಮಾರಮಣ ಗೋವಿಂದ ಗೋವಿಂದ

ಆದರೆ ಇದು ಹೀಗಾಗಿದ್ರೆ ಎಷ್ಟು ಚೆನ್ನಾಗಿರೋದು

ಶಂಕರ ರಾವ್ - ಓ ಮೊಬೈಲ್ ಹೊಡಕೊಳ್ತಾ ಇದೆ, ಹಲೋ ಯಾರು ಮಾತಡೋದು

ಗುರುರಾಜ - ಸಾರ್ ನಾನು ಕ್ರೆಡಿಟ್ ಕಾರ್ಡ್ ಕಂಪನಿಯಿಂದ,

ಶಂಕರ ರಾವ್ - ಏನ್ ವಿಷಯ

ಗುರುರಾಜ - ಸಾರ್ ನಿಮ್ಮ ಕ್ರೆಡಿಟ್ ಕಾರ್ಡ್‌ಗೆ ಕೆವೈಸಿ ಅಪಡೇಟ್ ಆಗಿಲ್ಲ, ನೀವು ತಕ್ಷಣ ಅಪಡೇಟ್ ಮಾಡ್ದೇ ಹೋದರೆ ದಿನಕ್ಕೆ 50 ರೂಪಾಯಿ ದಂಡ ಹಾಕ್ತಾರೆ

ಶಂಕರ ರಾವ್ - ಹೌದೇ, ನಾನೇನ್ ಮಾಡ್ಲಿ ಈಗ,

ಗುರುರಾಜ - ನಿಮ್ಮ ಕ್ರಡಿಟ್ ಕಾರ್ಡ್ ನಂಬರ್, ನಿಮ್ಮ ಆಧಾರ್ ನಂಬರ್ ಹೇಳಿ, ನಾನು ತಕ್ಷಣ ಲಿಂಕ್ ಮಾಡ್ತೀನಿ

ಶಂಕರ ರಾವ್ - ನನ್ನ ಹತ್ತಿರ ಬೇರೆ ಬೇರೆ ಬ್ಯಾಂಕಿನ ಕ್ರೆಡಿಟ್ ಕಾರ್ಡ್ ಇದೆ, ನೀವು ಯಾವ ಬ್ಯಾಂಕಿಂದ ಮಾತಾಡ್ತಾ ಇರೋದು

ಗುರುರಾಜ - ನಿಮ್ಮ ಹತ್ತಿರ ಯಾವ ಬ್ಯಾಂಕ ಕಾರ್ಡ್ ಇರೋದು ಹೇಳಿ ಮೊದಲು

ಶಂಕರ ರಾವ್ - ಇಲ್ಲ ನಿಮ್ಮದು ಯಾವ ಬ್ಯಾಂಕಂತ ಹೇಳಿ

ಗುರುರಾಜ -   ನಾವು ವಿಜಯಾ ಬ್ಯಾಂಕಿಂದ

ಶಂಕರ ರಾವ್ - ಇಲ್ಲ ಬಿಡಿ ನನ್ ಹತ್ತಿರ ಆ ಬ್ಯಾಂಕ್ ಕಾರ್ಡ್ ಇಲ್ಲ

ಗುರುರಾಜ -   ನಿಮ್ಮ ಹತ್ತಿರ ಇರೋ ಬೇರೆ ಬ್ಯಾಂಕಿನ ಕಾರ್ಡ್ ನಂಬರ್ ಹೇಳಿ

ಶಂಕರ ರಾವ್ - ಅದು ನಿಮಗ್ಯಾಕೆ ಬೇಕು

ಗುರುರಾಜ -   ಅಡ್ರಸ್ ಅಪ್ ಟೇಟ್ ಮಾಡೋಕೆ

ಶಂಕರ ರಾವ್ - ಬೇರೆ ಬ್ಯಾಂಕಿನದು ನೀವ್ ಹೇಗೆ ಅಪಡೇಟ್ ಮಾಡ್ತೀರ್ರೀ

ಗುರುರಾಜ -   ಸುಮ್ಮನೆ ಕ್ರೆಡಿಟ್ ಕಾರ್ಡ್ ನಂಬರ್ ಹೇಳ್ರೀ

ಶಂಕರ ರಾವ್ - ಲೇ ಈ ಮೊಬೈಲ್ ನಂಬರ್ ಬರೆದುಕೋ, ಸೈಬರ್ ಕ್ರೈಮ್ ಗೆ ಫೋನ್ ಮಾಡಿ ತಿಳಿಸೋಣ ಲೈನ್ ಕಟ್ ಮಾಡ್ದಾ.

ಶಂಕರ ರಾವ್ - ನೆನಪಿರಲಿ ಯಾವುದೇ ಬ್ಯಾಂಕಿನವರು ನಿಮಗೆ ವಿಳಾಸ ಅಪಡೇಟ್ ಮಾಡಬೇಕು, ಕೆವೈಸಿ ಅಪಡೇಟ್ ಮಾಡ್ಬೇಕು ಅಂತ ಫೋನ್ ಮಾಡೋಲ್ಲ

ಗುರುರಾಜ -   ಹಾಗೇನಾದ್ರು ಇದ್ರೆ ಅವರು ನಿಮಗೆ ಮೇಲೋ ಮೆಸೇಜೋ ಕಳಿಸ್ತಾರೆ ಮತ್ತು ಅವರ ಅಫಿಷಿಯಲ್ ವೆಬ್ ಸೈಟಿಗೆ ಹೋಗಿ ಡಾಕ್ಯುಮೆಂಟ್ಸ್ ಕಳಿಸಿ ಅಂತ ಹೇಳ್ತಾರೆ.

ಶಂಕರ ರಾವ್ - ಹಾ ಮೆಸೇಜು ಅಥವಾ ಮೇಲ್ ನಲ್ಲಿ ಬರೋ ಯಾವುದೇ ಲಿಂಕ್ ಕ್ಲಿಕ್ ಮಾಡಬೇಡಿ ಮತ್ತೆ

ಗುರುರಾಜ -   ಆ ಕ್ರಡಿಟ್ ಕಾರ್ಡ್ ಕಂಪನಿಯ ಅಫಿಷಿಯಲ್ ವೆಬ್ ಸೈಟಿಗೆ ಹೋಗಿ ಕೆವೈಸಿ ಅಪಡೇಟ್ ಮಾಡಿ

ಶಂಕರ ರಾವ್ - ಹಣ ಸಂಪಾದಿಸೋದಷ್ಟೇ ಅಲ್ಲ ಅದನ್ನ ಉಳಿಸಿಕೊಳ್ಳೋದು ನಮ್ಮ ಜವಾಬ್ದಾರಿ ಅಲ್ವಾ?

******

ದಂಡ ಪುರಾಣ

ದಾ.ಭೀ. ಪ್ರಾಣೇಶರಾವ್

“ದಂಡಂ ದಶಗುಣಂಭವೇತ್” - ಸಂಸ್ಕೃತದ ಸುಪ್ರಸಿದ್ಧ ನುಡಿಗಟ್ಟು. ಈ ಶ್ಲೋಕದ ಪೂರ್ಣ ರೂಪ ಹೀಗಿದೆ:

ವಿಶ್ವಾಮಿತ್ರಾಹಿ ಪಶ್ವಾದ್
ತಾಡನೇಪ್ಸುಚ ಕರ್ದಮೇ
ಅಂಧೇ ತಮಸಿ ವಾರ್ಧಕ್ಯೇ
ದಂಡಂ ದಶಗುಣಂಭವೇತ್'

ತಾತ್ಪರ್ಯ: ಕೋಲಿನಿಂದ ಪಡೆಯಬಹುದಾದ ಹತ್ತು ಉಪಯೋಗಗಳು. ದಂಡ ಪದಕ್ಕೆ ಕೋಲು ಎಂದು ಅರ್ಥೈಸಿ ಹಲವರು ಲಲಿತ ಪ್ರಬಂಧಗಳನ್ನು ರಚಿಸಿದ್ದಾರೆ. ದಂಡ ಪದಕ್ಕೆ ನಿಘಂಟಿನಲ್ಲಿ ವ್ಯರ್ಥ, ನಷ್ಟ, ಜುಲ್ಮಾನೆ, ಶಿಕ್ಷೆ, ನಮಸ್ಕಾರ, ಸೇನೆ, ಆಯುಧ ಮುಂತಾದ ಅರ್ಥಗಳೂ ಇವೆ .ಇವುಗಳನ್ನು ವಿಶ್ಲೇಷಿಸಿ ಈ ದಂಡ ಪುರಾಣ ಬರೆಯುವ ನನ್ನ ಪ್ರಯತ್ನವೇ ಈ ಪೀಠಿಕೆ.

ಪಟಾಕಿಗೆ ದುಡ್ಡು ಖರ್ಚು ಮಾಡುವುದು ದಂಡ, ಉಂಡಹಾಗಲ್ಲ, ಉಟ್ಟಹಾಗಲ್ಲ, ದುಡ್ಡೂ ಹಾಳು, ಪರಿಸರವೂ ಹಾಳು, ಮಕ್ಕಳಿಗೆ ಅಪಾಯ ಎಂಬ ಹೇಳಿಕೆಯಲ್ಲಿ ದಂಡ ಎಂದರೆ ವ್ಯರ್ಥ.

ಆ ಮೂರ್ಖನಿಗೆ ಬುದ್ಧಿ ಹೇಳುವುದೂ, ಬಂಡೆಗೆ ಹಣೆ ಚಚ್ಚಿಕೊಳ್ಳುವುದೂ ಒಂದೇ. ಸುಮ್ಮನೆ ಸಮಯ ದಂಡ ಎಂದು ಸರ್ವಜ್ಞ ವಚನ ಸೂಚನೆಯೂ ವ್ಯರ್ಥದ ಅರ್ಥವೇ. ತೂಕ, ಭವಿಷ್ಯ ಸೂಚಿಸುವ ಯಂತ್ರಗಳಿಗೆ ನಾಣ್ಯ ತೂರಿಸಿ, ಟಿಕೀಟೂ ಬರದೇ, ನಾಣ್ಯ ನುಂಗಿದ ಯಂತ್ರವನ್ನು ಶಪಿಸುತ್ತ ದುಡ್ಡು ದಂಡವಾಯಿತೆಂದು ಪರಿತಪಿಸುವುದು ವ್ಯರ್ಥವೇ. ಕುದುರೆ ಜೂಜು, ಇಸ್ಪೀಟು ವ್ಯಸನಗಳಲ್ಲಿ ಹಣ ಕಳೆಯುವುದೂ ದಂಡ.

ವ್ಯರ್ಥಕ್ಕೂ ನಷ್ಟಕ್ಕೂ ಹೆಚ್ಚು ವ್ಯತ್ಯಾಸ ಇಲ್ಲ. ಟೀವಿ, ಮೊಬೈಲುಗಳಲ್ಲಿ ಮಗ್ನರಾಗಿ ಮನೆಯ ಮೇಲಿನ ನೀರಿನ ಟ್ಯಾಂಕು ತುಂಬಿ ಹರಿಯುವುದೂ, ಒಲೆಯ ಮೇಲಿನ ಹಾಲು ಉಕ್ಕಿ ಸುರಿಯುವುದೂ, ಕಾವಲಿಯ ದೋಸೆ ಸೀದು ಕರಕಲು ಆದಾಗ, ಅಯ್ಯೋ! ಅನ್ಯಾಯ ಎಂಬ ಪೇಚಾಟ ನಷ್ಟದ ಸಂತಾಪ.

ಹಾಲು ಮೊಸರು, ಬೆಕ್ಕು ನಾಯಿಗಳ ಪಾಲಾದಾಗಲೂ, ಒಣಗಿ ಹಾಕಿದ ಹಪ್ಪಳ ಸಂಡಿಗೆ ಕಾಗೆಯ ಪಾಲಾದಾಗಲೂ ನಷ್ಟದ ಜತೆಗೆ ನಿಷ್ಪ್ರಯೋಜನವಾಯಿತೆಂಬ ಸಂಕಟವನ್ನು ದಂಡವಾಯಿತೆಂದು ಪೇಚಾಡುವುದು ಸಾಮಾನ್ಯ.

ಶುಭಮಂಗಳ ಸಿನಿಮಾದಲ್ಲಿ ಕೆ.ಎಸ್.ಅಶ್ವಥ್ ಅವರು ಉಂಡಾಡಿಗಳನ್ನು ಎಂ.ಡಿ.ಪಿ.ಎಸ್ (ಮನೆಯ ದಂಡ ಪಿಂಡ ಸರ್ವೀಸ್) ಎಂದು ಲೇವಡಿ ಮಾಡುವುದು ನೆನಪಾಗುತ್ತದೆ. ಉಂಡಾಡಿಗಳು, ಅನ್ನಕ್ಕೆ ದಂಡ, ಭೂಮಿಗೆ ಭಾರ, ಎನ್ನುವ ಬೈಗಳಿಗೆ ಗುರಿಯಾಗುವರು. ದಂಡ ಪಿಂಡಗಳು ಎಂಬ ಧಾರಾವಾಹಿಯೂ ಕಿರುತೆರೆಯಲ್ಲಿ ಪ್ರಸಾರವಾಯಿತು.

ಸಾಷ್ಟಾಂಗ ನಮಸ್ಕಾರಕ್ಕೆ ಪರ್ಯಾಯ ಪದ 'ದಂಡ ಪ್ರಣಾಮ'.

ಸಂಚಾರ ಕಾನೂನಿಗೆ ವಿರುದ್ಧವಾಗಿ ವರ್ತಿಸುವ ವಾಹನ ಚಾಲಕರಿಗೆ ವಿಧಿಸುವ ದಂಡ ಜುಲ್ಮಾನೆ. ಜುಲ್ಮಾನೆ ವಿಧಿಸಲು ಪೋಲೀಸರು ಉಪಯೋಗಿಸುವ ಅಸ್ತ್ರ ಐಪಿಸಿ ಕಾನೂನಿನ ನಿಯಮಗಳು. ಜುಲ್ಮಾನೆಯ ಮುಂದಿನ ಹಂತವೇ ಶಿಕ್ಷೆ. ಭಾರತೀಯ ದಂಡ ಸಂಹಿತೆಯ (ಐಪಿಸಿ) ಯಾವ ನಿಯಮದ ಉಲ್ಲಂಘನೆಯಿಂದ ಅಪರಾಧವಾಗಿದೆ ಎಂದು ನ್ಯಾಯಾಲಯದಲ್ಲಿ ದಾವೆ ಮಾಡಲು ಈ ದಂಡ ಸಂಹಿತೆ ನೆರವಾಗುವುದು. ಅಪರಾಧಕ್ಕೆ ತಕ್ಕ ಶಿಕ್ಷೆ ವಿಧಿಸಲು ದಂಡ ಸಂಹಿತೆಯೇ ಮಾನದಂಡ.

ರಾಜರುಗಳ ಕಾಲದಲ್ಲಿ ರಾಜನೀತಿ ಇತ್ತು. ಆಗ ವಿಧಿಸುತ್ತಿದ್ದ ಶಿಕ್ಷೆಯೇ ರಾಜದಂಡನೆ.

ರಾಜರುಗಳು ತಮ್ಮ ಸಾಮ್ರಾಜ್ಯ ವಿಸ್ತರಿಸಲು ಸೇನಾ ಸಮೇತ ದಂಡ ಯಾತ್ರೆ ಮಾಡುತ್ತಿದ್ದರು. ಸೇನಾಧಿಪತಿಗೆ ದಂಡನಾಯಕ ಎಂಬ ಹೆಸರು ಇತ್ತು.

ಪರೀಕ್ಷೆಗಳಲ್ಲಿ ಪದೇಪದೇ ಫೇಲಾಗಿ ಮತ್ತೆಮತ್ತೆ ಪರೀಕ್ಷೆಗಳಿಗೆ ಪ್ರವೇಶ ಮಾಡುತ್ತಿದ್ದ ಪ್ರಯತ್ನಗಳಿಗೂ ವ್ಯಂಗ್ಯವಾಗಿ ದಂಡಯಾತ್ರೆ ಎನ್ನುತ್ತಿದ್ದರು. ಈಗಿನ ವಿದ್ಯಾಭ್ಯಾಸದಲ್ಲಿ ಸೆಮಿಸ್ಟರ್ ಪದ್ಧತಿಯಿಂದ ವಿದ್ಯಾರ್ಥಿಗಳು ಈ ದಂಡಯಾತ್ರೆ ಯಿಂದ ಬಚಾವಾಗಿದ್ದಾರೆ.

ದಂಡ ಪದಕ್ಕೆ ಆಯುಧ ಅರ್ಥವೂ ಇದೆ. ಶ್ರೀ ರಾಮನು ಕೋದಂಡಪಾಣಿ. ಕಾರ್ತಿಕೇಯನು ದಂಡಪಾಣಿ, ದಂಡಾಯುಧಪಾಣಿ. ದಂಡಪಾಣಿ ದೇಶಿಕರು ಕರ್ನಾಟಕ ಸಂಗೀತದ ಪ್ರಸಿದ್ಧ ಹಾಡುಗಾರರು.

ಇಷ್ಟೆಲ್ಲಾ ಬರೆಯಲು ನನಗೆ ನೆರವಾದದ್ದು PEN is mightier than Sword ಎಂಬ ಆಯುಧವೇ.

ಇನ್ನು ನಿಮ್ಮ ಸಮಯ ಹೆಚ್ಚು ದಂಡ ಮಾಡದೆ ಈ ನನ್ನ ದಂಡ ಪುರಾಣಕ್ಕೆ ಮಂಗಳ ಹೇಳುವೆ.

******

ಈಗೇಕೆ ಆ ಯೋಚನೆ!

– ಹುವಾಶ್ರೀ

ಎಷ್ಟು ಸುಂದರ ಡಿ.ಪಿ..!
ಮನದಂಗಳದಲ್ಲಿ
ರಂಗವಲ್ಲಿ ಇಟ್ಟ ಹುಡುಗಿ
ಇದು ಅದೇ ಚಿತ್ರ
ನಲವತ್ತು ವರ್ಷ ಹಿಂದಿನದು!

ಆಹಾ! ಅದೆಂತಹ ಚೆಲುವು ನಿನ್ನದು
ಮೋಡಿ ಮಾಡಿದ್ದೆ
ದಿನ ದಿನವೂ ಹತ್ತಿರವಾಗಿದ್ದೆ
ನನ್ನ ಕವಿಯಾಗಿಸಿದ್ದೆ!

ಅದೊಂದು ದಿನ ತಾರಸಿಯಲಿ
ಗಗನದಲಿ ವಿಹರಿಸುವಂತೆ
ಕುಳಿತಿದ್ದೆವು ಏಕಾಂತದಲಿ.
ಎಂತಹ ಸೊಗಸಿತ್ತು ಅಪ್ಪುಗೆಯಲಿ.!
ಒಲವಿನ ಮುದ್ದು ಸುಕೋಮಲೆ!

ಶತಮಾನಗಳ ಗಾಢ ಬಂಧವೆನಿಸಿತ್ತು ಅದು
ಅಷ್ಟೇ..... ಮುಂದುವರಿಯಲಿಲ್ಲ...
ಅಪರಾಧವೆಂಬ ಭಯದಿಂದಲ್ಲ
ಅಷ್ಟೇ ಬೆಟ್ಟದಷ್ಟು ಖುಷಿ ಕೊಟ್ಟಿತ್ತಲ್ಲ.

ಈಗ ಅನಿಸುತ್ತದೆ.
ಎಂತಹ ಮೂರ್ಖರು ನಾವು.
ಹೊರಟ ವಾಹನವನೇರಿ ಇಳಿದಂತೆ.
ಅದ್ಭುತ.. ಸುಂದರ ಅವಕಾಶ
ವ್ಯರ್ಥ ಕಳೆದುಕೊಂಡೆವಲ್ಲ.
ಛೇ! ಈಗೇಕೆ ಆ ಯೋಚನೆ.

ಹೋ.. ನಿನ್ನ ಡಿ.ಪಿ
ಆಗಲೇ ಬದಲಾಗಿಬಿಟ್ಟಿತಲ್ಲ!

*****

ಆನಂದಮಯ

– ಹುವಾಶ್ರೀ

ಜಾತ್ರೆಯ ಬೆಡಗು..
ವರ್ಣಮಯ.. ಆನಂದಮಯ..
ಗುಂಪು ಗುಂಪಾಗಿ ಜನ
ಸುತ್ತೆಲ್ಲ ವೈಭವದ ಮೆರಗು
ಹರುಷ.. ನಗೆ..!

ಅಲ್ಲೊಂದು ಝಗಮಗಿಸುವ ವೇದಿಕೆ.
ವಾದ್ಯ ತಂಡದ ಮೋಡಿಗೆ
ಸುತ್ತ ಕುಣಿದು ಕುಪ್ಪಳಿಸುವ
ಯುವ ಪೀಳಿಗೆ!

ಬೆಡಗಿಯೊಬ್ಬಳ ಸುಮಧುರ ಗಾಯನ.
ಸೆಳೆದಿತ್ತು ವೇದಿಕೆಯತ್ತ ಜನರನ್ನ
ಹಾಡು ಮುಗಿದಿತ್ತು
ಚಪ್ಪಾಳೆ ಮೊಳಗಿತ್ತು.

ಆಕೆ ಮೆಲ್ಲ ಕೋಲ ಮೀಟುತ್ತ
ವೇದಿಕೆಯಿಂದಿಳಿದಳು.
ಮೊಗದಲ್ಲಿ ಮಂದ ನಗೆಯಿತ್ತು.

ಕ್ಷಣಕಾಲ ನನಗೆಲ್ಲ ವೈಭವ ಮರೆಯಾಯ್ತು

*****

ಶಾರದಾ ದಂಡಕ

– ರತ್ನ

ಜಯ ಜಯತು ಗೀರ್ವಾಣಿ ಜಯತು ಪನ್ನಗವೇಣಿ ಜಯತು ಮಂಜುಲವಾಣಿ ಜಯತು ವೀಣಾಪಾಣಿ, ಜಯತು ಮೌಕ್ತಿಕ ಶ್ರೋಣಿ, ಜಯ ಜಯತು ಸಿರಿಕಣ್ಮಣೀ ಜಯ ಜಯತು ಚಿಂತಾಮಣೀ, ಜಯ ಜಯತು ಕಲ್ಯಾಣೀ, ಚತುರಾನನ ರಮಣಿ, ಉಮಾರಮಾ ರೂಪಿಣೀ;

ಪುಣ್ಯತರ ನೆಲದ ಮುಕುಟದಲಿ ಮುದದಿಂದ ನೆಲಸಿರ್ಪ ತಾಯೇ, ಪರಮೇಷ್ಠಿ ಜಾಯೇ, ವಾಗ್ದೇವಿ ವಾಗ್ರೂಪಿಯೇ, ತ್ರೈಲೋಕ್ಯ ಸಂಚಾರಿ ಮುನಿಮಾತೆಯೇ, ಬಿಡದೆ ಜ್ಞಾನವನೀಯೆ, ನೀನೆಮ್ಮ ಕಾಯೆ, ಹರಿಸಮ್ಮ ಮಾಯೆ, ಹರಸೆಮ್ಮ ಗಾಯತ್ರಿಯೇ, ಹರಸು ನೀ ಸಾವಿತ್ರಿಯೇ, ಕಾಶ್ಮೀರಪುರನಿಲಯೇ, ವೀಣಾವರದಂಡಮಂಡಿತ ಕರೇ ಶಾರದೇ, ಭಗವತೀ ಶುಭದೇ, ಮಹಾಮಾತೆಯೇ, ಸರ್ವ ಕಲೆಗಳಧಿದೇವಿಯೇ; ಶರಣೆಂದು ಮಣಿವೆ, ಕಾಯೆಂದು ಮಣಿವೆ, ಮೌಢ್ಯಶೇಷವ ಬಿಡದೆ ಕಳೆಯೆಂದು ಮಣಿವೆ ತಾಯೇ, ಸುಜ್ಞಾನವನ್ನೀಯೆ ತಾಮಸ ಹಂತ್ರಿಯೇ ತಾಪಘ್ನಿಯೇ ಮಜ್ಜನನಿ ಶಿವಸೋದರೀ, ಸಿದ್ಧೇಶಿ ತಮಹಾರಿಣೀ;

ಪೂರ್ಣ ಶರದಿಂದು ಕಾಂತಿ ಸಂಕಾಶ ಶ್ವೇತ ವಸ್ತ್ರಾನ್ವಿತೇ, ಲೋಕ ಸಮ್ಮಾನಿತೇ, ವಿಷ್ಣು ಸಮ್ಮಾನಿತೇ, ಪರಮ ಮಹಿಮಾನ್ವಿತೇ, ರುದ್ರ ಸಮ್ಮಾನಿತೇ, ಬೃಂದಾರವೃಂದ ಸಮ್ಮಾನಿತೇ, ಬುಧಕೋಟಿ ಸಮ್ಮಾನಿತೇ, ವಿಮಲಮತಿ ದಾತೆ, ಧೃತಿದಾತೆ, ಕೀರ್ತಿಪ್ರದಾತೆ, ಲೋಕ ಸಂಪೂಜಿತೇ, ವಿಬುಧ ಸಂಪೂಜಿತೇ, ಆರ್ಯೆ ಆರ್ಯಾಂಬೆ ಸುತ ಶ್ರೀಶಂಕರಾಚಾರ್ಯ ಶ್ರೀದಕ್ಷಿಣಾಮ್ನಾಯ ಶೃಂಗೇರಿ ಪೀಠಸ್ಥಿತೇ, ಸುಮಭೂಷಣಾಭೂಷಿತೇ ವಿಧಿಯುವತೇ;

ವಂಗ ದೇಶೇಶ್ವರೀ ಹೃದಯ ಪೀಠೇಶ್ವರೀ ರಾಜರಾಜೇಶ್ವರೀ ವಾಕ್ಚಾತುರೀ ಸತ್ಯಲೋಕೇಶ್ವರೀ ಮಿಹಿರಾ ಮಾಹೇಶ್ವರೀ ವಾರಣಾಸೀಶ್ವರೀ ಗುಣಗಣಾಧೀಶ್ವರೀ, ಸಿದ್ಧವಿದ್ಯೇಶ್ವರೀ;

ಕಚ್ಛಪೀ ವಾದನಾ ಸಿದ್ಧಿಸಂಪ್ರಾಪ್ತೆ ಲೋಕ ಸಂಮೋಹಿತಾ ಭಾರತೀ ರಾಜಿತೇ ವಾಣಿ ಹಂಸಪೀಠಸ್ಥಿತೇ ಸುಸ್ಥಿತೇ ಅಪ್ಸರಾಂಗನಾ ಗಾನ ಸಮ್ಮಾನ ನೃತ್ಯ ಸೇವಾಸುಸಂಪ್ರೀತೆ ಮಂದಹಾಸೋಜ್ವಲಾನಂದ ವದನಾರವಿಂದ ಕುಂದರದನ, ಹಸಿತಮುಕುಲಿತ ಸುರುಚಿರಕಾಂತಿ ರಜನೀಕಾಂತ ಸಂಪೀಡಿತೇ ಸುಸ್ಮಿತೇ ಹಂಸ ವಾಹಸ್ಥಿತೇ;

ಅಮಿತಸಿರಿಯಿಂದೇನು, ಮತಿಯಿಲ್ಲದಿರಲಿನ್ನು ಕಪಿಗೀಯೆ ಮಾಣಿಕ್ಯ ಬೆಲೆಯರಿವುದೇನು, ಆರೊ ಕಳ್ದೊಯ್ಯರೇನು, ಬರಿದೆ ಬರಿದಾಗರೇನು, ಎನ್ನೊಳಗೆ ಎನಗಿದ್ದು, ಅರಸುವ ಮನವಿದ್ದು, ಅರಸಿಬಹ ಜಿಜ್ಞಾಸುಗಳಿಗೀವ ಮತಿಯಿತ್ತು ದ್ಯುತಿಯಿತ್ತು ಧೃತಿಯಿತ್ತು ಸಾಮರ್ಥ್ಯವಿತ್ತು;

ಕ್ಷಯಿಸದಿಹ ಜ್ಞಾನವನು ನಿನ್ನಲ್ಲಿ ದೈನ್ಯವನು ತವ ಪದದಿ ಭಕ್ತಿಯನು ವಾಙ್ಮಯದ ಶಕ್ತಿಯನು ಕಲೆಗಳಲಿ ರಕ್ತಿಯನು ವಾಕ್ಕಲಾ ಶಕ್ತಿಯನು ಯುಕ್ತಿಯನು ಜ್ಯೋತಿಯನು ನೀತಿಯನು ಭುಕ್ತಿಯನು ಮುಕ್ತಿಯನು ಕರುಣಿಸೌ ಸುಜ್ಞಾನ ವಿಜ್ಞಾನ ಪ್ರಜ್ಞಾನ ಆತ್ಮದಾ ಜ್ಞಾನವನು ಕಡೆವರೆಗೆ ನಿಲಿಸಿ ಉದ್ಧರಿಸೆನ್ನಾತ್ಮವನು ತಾಯೆ ಸಲಿಸು ಸಲಿಸೌ ಎನ್ನಿಚ್ಛೆಯಿದನೀಯೆ;

ಅಕ್ಷಮಾಲಾಹಸ್ತೆ ಶತಕೋಟಿಸುರಶ್ರೇಣಿಸ್ತುತೆ, ವಿಶ್ವಸಾಕ್ಷಿಣಿ ನೀನೆ, ಕರ್ಮಸಾಕ್ಷಿಣಿ ನೀನೆ, ಕಾಮರೂಪಿಣಿ ನೀನೆ, ವಿಶ್ವರೂಪಿಣಿ ನೀನೇ;

ಮದ ಕಳೆದು, ಅಘ ಕಳೆದು, ಎದೆಯ ತಿಮಿರವ ಕಳೆದು, ಕಂದನೆನ್ನುತ ತಿಳಿದು, ನಿನ್ನ ಕರುಣೆಯ ಹರಿಸು, ಜ್ಞಾನ ಸೂರ್ಯನ ನಿಲಿಸು ಹಂಸಾಸನೇ, ತ್ರಾಹಿಮಾಂ ದೇವಿ, ಪಾಹಿಮಾಂ ದೇವಿ, ನಮೋ ನಮೋ ದೇವೀ ನಮಸ್ತೇ ನಮಸ್ತೇ ತ್ರಿಪುರ ಸುಂದರಿ ನೀನೆ ಚೆನ್ನಕೇಶವನ ಸೊಸೆಯೆನಿಸಿ ಮನಗಳನು ಬೆಳಗುವವಳೇ ಅಜ್ಞಾನ ತಿಮಿರವನು ಕಳೆಯುವವಳೇ, ಕಾಯೌ ಕಾಯೌ ಕರುಣಾಕರೀ, ವಿದ್ಯಾ ಸಂಪತ್ಕರೀ, ಭಕುತಜನ ಹೃದಯೇಶ್ವರೀ ಸಾಷ್ಟಾಂಗ ನಮಿಪೆ ವಾಗೀಶ್ವರೀ.

*****

ಸರ್ವಭಾವಗಳಿಗೂ ಪ್ರೇಮವೇ ಪಿತಾಮಹನಲ್ಲವೇ?

- ಎಲ್. ಗಿರಿಜಾ ರಾಜ್

ವಿಜಯಕರ್ನಾಟಕ ದಿನಪತ್ರಿಕೆಯಲ್ಲಿ ಬಹು ದಿನಗಳ ಹಿಂದೆ ವ್ಯಾಲೆಂಟೈನ್ ಬಗ್ಗೆ ಪ್ರಕಟವಾಗಿದ್ದ ಒಂದು ಲೇಖನದ ತುಂಡು ಕಾಗದವನ್ನು ಬ್ಯಾಗಿನಲ್ಲಿಟ್ಟುಕೊಂಡು ಅದನ್ನು ತೆಗೆದಾಗಲೆಲ್ಲ ಪವಿತ್ರ ಪ್ರೇಮಕ್ಕಾಗಿ ಬಲಿದಾನ ಮಾಡಿದ ವ್ಯಾಲೆಂಟೈನ್ ನನ್ನು, ಅವನ ನೆನಪಲ್ಲಿ ಪೆಬ್ರವರಿ 14 ಪ್ರೇಮಿಗಳ ದಿನಾಚರಣೆಯಾಗುತ್ತಿರುವ ರೀತಿಯನ್ನು ಚಿಂತಿಸಿ ನಿಟ್ಟುಸಿರು ಬಿಡುತ್ತಿದ್ದೆ.

ಕ್ಲೋಡಿಯಸ್ ಎಂಬ ರೋಮನ್ ಚಕ್ರವರ್ತಿಯು ತನ್ನ ಸಾಮ್ರಾಜ್ಯದಲ್ಲಿ ಯಾರೂ ಮದುವೆಯಾಗಬಾರದೆಂದು ಕ್ರೂರ ಶಾಸನ ಮಾಡಿದಾಗ ವ್ಯಾಲೆಂಟೈನ್ ಮನನೊಂದು ವಿವಾಹವಾಗುವ ಅನೇಕ ಜೋಡಿಗಳ ಬಯಕೆಗೆ ಸ್ಪಂದಿಸಿದ. ವ್ಯಾಲೆಂಟೈನ್ ಕ್ರೈಸ್ತ ಧರ್ಮದ ಯೋಜಕ. ತನಗೆ ಚಕ್ರವರ್ತಿಯಿಂದ ಪ್ರಾಣಾಪಾಯವಿದೆ ಎಂದು ಗೊತ್ತಿದ್ದರೂ ಅನೇಕ ಪ್ರೇಮಿಗಳ ವಿವಾಹ ನೆರವೇರಿಸಿದ. ಒಂದು ರಹಸ್ಯ ಮದುವೆ ನೆರವೇರಿಸುವ ಸಂದರ್ಭದಲ್ಲಿ ಸೈನಿಕರಿಗೆ ಸಿಕ್ಕಿಬಿದ್ದ.

ಪವಿತ್ರ ಪ್ರೇಮದ ಹಿರಿಮೆಯನ್ನು ಎತ್ತಿ ಹಿಡಿಯುವುದಕ್ಕಾಗಿ ಜೀವನದ ಹಂಗು ತೊರೆದು ಯುವ ಜನಾಂಗಕ್ಕೆ ಸಹಾಯ ಮಾಡಿದ ವ್ಯಾಲೆಂಟೈನ್ ನನ್ನು ಫೆಬ್ರವರಿ 14 (269 ಎ.ಡಿ.) ರಂದು ಗಲ್ಲಿಗೇರಿಸಲಾಯಿತು. ವ್ಯಾಲೆಂಟೈನನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಅನೇಕರು ಆದರ,ಪ್ರೀತಿಯ ಕುರುಹಾಗಿ ಹೂವನ್ನೋ, ಏನಾದರೂ ಕಾಣಿಕೆಗಳನ್ನೋ ಜೈಲಿನ ಕಿಟಕಿಯ ಮೂಲಕ ನೀಡುತ್ತಿದ್ದರು. ಅವನು ನಡೆದುಕೊಂಡ ರೀತಿಯನ್ನು ಸಮರ್ಥನೆ ಮಾಡಿದ ಜೈಲರ್ ನ ಮಗಳು ಸೆರೆಮನೆಯಲ್ಲಿ ಅವನನ್ನು ಆಗಾಗ ಸಂದರ್ಶಿಸುತ್ತಿದ್ದಳು. ಪ್ರೀತಿ, ಮಾನವೀಯತೆಗಳನ್ನು ತೋರಿದ ಜೈಲರ್ನ ಮಗಳಿಗೆ ತನ್ನ ಸಾವಿನ ದಿನ ವ್ಯಾಲೆಂಟೈನ್, ಪ್ರೀತಿಯ ಒಕ್ಕಣೆಯೊಂದಿಗೆ ಒಂದು ಪತ್ರ ಬರೆದ "ಪ್ರೀತಿಪೂರ್ವಕ ನಿನ್ನ ವ್ಯಾಲೆಂಟೈನ್" ಎಂದು ಕೊನೆಯಾಗಿತ್ತು ಆ ಪತ್ರ. ಆ ದಿನವೇ ಸಾವಿನ ನಿರ್ದಯ ಬಾಹುಗಳಿಗೆ ತನ್ನನ್ನು ಒಪ್ಪಿಸಿಕೊಳ್ಳಬೇಕಾಗಿದ್ದ ವ್ಯಾಲೆಂಟೈನ್ನಂತಹ ಮಹಾತ್ಮನಿಗೆ ಸಂಕುಚಿತ ಮನೋಭಾವವಾಗಲೀ, ಕೀಳು ಬಯಕೆ ಯಾಗಲೀ ಇರಲಿಲ್ಲ. ಅದೊಂದು ಶುದ್ಧ ಮಾನವೀಯತೆ ಮತ್ತು ವಿಶಾಲ ಪ್ರೀತಿಯ ಪತ್ರವಾಗಿತ್ತು.

ವ್ಯಾಲೆಂಟೈನ್ ಬಲಿದಾನದ ಹಿನ್ನೆಲೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಇಂದಿನ ಯುವಜನರು. ಕಾಲೇಜು ವಿದ್ಯಾರ್ಥಿಗಳು ತಿಳುವಳಿಕೆಯಿಲ್ಲದೆ ಪ್ರಣಯದ ಅಮಲಿಗೆ ಜಾರುವುದನ್ನೇ ಕ್ಷಣಿಕವಾದ ಬಾಹ್ಯ ಆಕರ್ಷಣೆಯನ್ನೇ ಪ್ರೀತಿ ಎಂದು ತಿಳಿದು ಹಗರಣಗಳನ್ನು ಸೃಷ್ಟಿ ಮಾಡುತ್ತಿರುವುದು ವ್ಯಾಲೆಂಟೈನ್ ಆತ್ಮಕ್ಕೆ ನೋವುಂಟುಮಾಡುವ ಸಮಾಚಾರವಲ್ಲವೇ? ಪಾರ್ಟಿಗಳಲ್ಲಿ ಕುಡಿದು, ಮನಸೋ ಇಚ್ಛೆ ಕುಣಿದು ಮೋಜು ನಡೆಸುವುದು ಸರಿಯೇ? ಎಷ್ಟೋ ಸಲ ಪೊಲೀಸ್ ಬಂದೋಬಸ್ತಿನ ನಡುವೆ ಈ ದಿನವನ್ನು ಆಚರಿಸಬೇಕಾಗಿ ಬಂದಿರುವುದು ನಿಜಕ್ಕೂ ಶೋಚನೀಯ.

ಚಕ್ರವರ್ತಿ ಅಂತಹ ಕ್ರೂರ ಶಾಸನ ಯಾಕೆ ಹೊರಡಿಸಿದ? ಎಂಬುದರ ಹಿನ್ನೆಲೆಯಾದರೂ ತಿಳಿದುಕೊಳ್ಳೋಣ!! ಯುದ್ಧಕೋರನೂ ಕ್ರೂರಿಯೂ ಆದ ಕ್ಲೋಡಿಯಸ್ ತನ್ನ ಸೈನಿಕರನ್ನು ಸದಾ ಯುದ್ಧಕ್ಕೆ ತೆರಳಲು ಹಿಂಸಿಸುತ್ತಿದ್ದ.

ಯುದ್ಧದಿಂದ ಬೇಸತ್ತಿದ್ದ ಸೈನಿಕರು, ಹೆಂಡತಿ-ಮಕ್ಕಳನ್ನು ಬಿಟ್ಟು ತೆರಳಲು ಪ್ರತಿಭಟಿಸಿದಾಗ, "ಯಾರೂ ಮದುವೆ ಆಗಬಾರದು" ಎನ್ನುವ ವಿಚಿತ್ರವಾದ ನಿರ್ದಯವಾದ ಶಾಸನವನ್ನು ಜಾರಿಗೆ ತಂದ. "ಪ್ರೀತಿ" ಎನ್ನುವ ಪದ ಮಹತ್ತರ ವಾದುದು. ಈ ಜಗತ್ತಿನ ಸಮಸ್ತ ಭಾವಗಳು ಈ ವಿರಾಟ್ "ಪ್ರೀತಿ"ಯೊಳಗೆ ಸಮಾವೇಶವಾಗುತ್ತವೆ. ಸರ್ವ ಭಾವಗಳಿಗೂ ಪ್ರೇಮವೇ ಪಿತಾಮಹನಲ್ಲವೇ? ಈ ಸೃಷ್ಟಿಯಲ್ಲೂ ಪ್ರೀತಿ ಸರ್ವವ್ಯಾಪಿಯಾಗಿದೆ. ಈ ಪ್ರೀತಿ "ಸ್ಥಾಯೀ ಸ್ವರ "ವಿದ್ದಂತೆ. ಇದರ ನಡುವೆ ಬಂದು ಹೋಗುವ ಇತರ ಭಾವಗಳೆಲ್ಲ ಸಂಚಾರಿ ಸ್ವರಗಳ ಹಾಗೆ! ಕಾಮನಬಿಲ್ಲಿನ ಏಳು ಬಣ್ಣಗಳಿಗೂ ಮೂಲ ಬಿಳಿ ಬಣ್ಣ! ಪ್ರೇಮದ ವಿರಾಟ್ ಜಗತ್ತಿನಲ್ಲಿ "ಕಾಮ" ಒಂದು ಸಂಚಾರಿ ಭಾವ ಅಷ್ಟೇ!! ದಾಂಪತ್ಯದಲ್ಲಿ ಅನುಭವಿಸುವ ದೈಹಿಕ ಸುಖಕ್ಕೆ ಅದು ದಾರಿ ಮಾಡಿಕೊಡುವಂತೆ, ವಂಶದ ಬೆಳವಣಿಗೆಗೂ ಮಕ್ಕಳ ಮೂಲಕ ವಿವಾಹದ ಉದ್ದೇಶವನ್ನೂ ಈಡೇರಿಸುತ್ತದೆ, ಅದೇ ಪರಮಾರ್ಥವಲ್ಲ! ಪ್ರೀತಿಯಲ್ಲಿ ತ್ಯಾಗದ ಸುಗಂಧವೂ ಇರುತ್ತದೆ ಎಂಬುದನ್ನು ಮರೆಯುವ ಹಾಗಿಲ್ಲ

ಕಾಲೇಜಿನ ವಿದ್ಯಾರ್ಥಿಗಳು ಓದುವ ಸಮಯದಲ್ಲಿ ಚಂಚಲರಾಗಿ ತಪ್ಪು ಹಾದಿಯಲ್ಲಿ ಹೆಜ್ಜೆಯಿಟ್ಟು ಜೀವನದ ಮಹದರ್ಥವನ್ನು ಗಾಳಿಗೆ ತೂರಿಬಿಡಬಾರದು, ಸಮೃದ್ಧ ಭವಿಷ್ಯಕ್ಕೆ ಕುಂದು ತಂದುಕೊಳ್ಳಬಾರದು. ವ್ಯಾಲೆಂಟೈನ್ ಮದುವೆಯ ಪವಿತ್ರ ಬಂಧನದಲ್ಲಿ ಜೊತೆಯಾಗುವ ಜೋಡಿಗಳಿಗೆ ಸಹಾಯ ಮಾಡುತ್ತಿದ್ದನೇ ಹೊರತು ಪ್ರೇಮಿಗಳ ಸ್ವೇಚ್ಛಾಚಾರಕ್ಕಲ್ಲ. ಮದುವೆ ಪ್ರತಿಯೊಬ್ಬನ ಬದುಕಿನಲ್ಲಿ ಅನಿವಾರ್ಯವಾಗಿ ಬರುವ ಒಂದು ಘಟ್ಟ! ಬರುವಾಗ ಬರಲಿ, ಜೀವನದಲ್ಲಿ ನೆಲೆ ನಿಲ್ಲಲು, ನೆರವೀಯುವ ಶಿಕ್ಷಣದ ಪರಮ ಉದ್ದೇಶವನ್ನು ನಿರ್ಲಕ್ಷಿಸಿ, ಅಲ್ಪಕಾಲದ ಪರಸ್ಪರ ಆಕರ್ಷಣೆಗೆ ಒಳಗಾಗಬಾರದು. ವ್ಯಾಲೆಂಟೈನ್ ಮರಣ ಹೊಂದಿದ ದಿನದ ದ್ಯೋತಕವಾಗಿ ಆಚರಿಸಲ್ಪಡುವ "ಪ್ರೇಮಿಗಳ ದಿನ" ಶಾಂತಿಯುತವಾಗಿ ಆಚರಣೆಗೊಳ್ಳಲಿ. ಈ ಮಹಾತ್ಮನನ್ನು ನೆನೆದು ಶ್ರದ್ಧಾಂಜಲಿ ಅರ್ಪಿಸುವುದು ನಮ್ಮೆಲ್ಲರ ಕರ್ತವ್ಯವಲ್ಲವೇ? ಕಾಣಿಕೆಗಳನ್ನು ಗೆಳೆಯ-ಗೆಳತಿಯರಿಗೆ ಬಂಧುಬಾಂಧವರಿಗೆ ನೀಡುವುದು, ಪ್ರೀತಿಪಾತ್ರರಿಗೆ ಶುಭಾಶಯ ಹೇಳುವುದು ತಪ್ಪಲ್ಲ! ಸಲ್ಲದ ಮನರಂಜನೆಯ ಅತಿರೇಕದ ಚಟುವಟಿಕೆಗಳು ಸಮಾಜದ ಸ್ವಾಸ್ಥ್ಯವನ್ನು ಕೆಡಿಸದಂತೆ ಕಾಪಾಡುವ ಹೊಣೆ ಇಂದಿನ ಯುವ ಜನಾಂಗದ ಮೇಲಿದೆ.

*****

ನನ್ನ ಕವನ

- ಪಾರ್ವತಿ ವಿ.ಹೆಗಡೆ

ನನ್ನ ಕವನವಿದು।
ನನ್ನದೇ ಕವನ॥

ಪ್ರಾಚೀನ ಕವಿಗಳ ಆಧ್ಯಾತ್ಮವಿಲ್ಲಿಲ್ಲ,
ಕುವರ-ಲಕ್ಷ್ಮೀಶರಾ ಪಾವನತೆಯಿಲ್ಲ।
ಪಂಪ-ರನ್ನರ ಪರಮ ಶೌರ್ಯ ಸಾಹಸವಿಲ್ಲ,
ರಾಘವಾಂಕನ ಸತ್ಯವ್ರತವೂ ಇಲ್ಲ॥

ಚಾಮರಸ ಕವಿಯ ಪ್ರಭುಲೀಲೆಯು ಅಲ್ಲ,
ಬಸವ-ಅಲ್ಲಮ-ಅಕ್ಕ ವಚನವೂ ಅಲ್ಲ।
ಕಾಯತಾಪವ ಅಳಿಪ ಜನಪದದ ಸೊಗಡಲ್ಲ,
ಪರಮಾತ್ಮ ಪರತತ್ವ ಹರಿದಾಸ್ಯವಲ್ಲ॥

ವರಕವಿಯ ಕೃತಿಯ ಗಾರುಡಿಗತ್ವವೂ ಇಲ್ಲ,
ರಸಕವಿಯ ಆ ಮೇರು ಕಾವ್ಯತ್ವವಿಲ್ಲ।
ಸರಸ-ಸಲ್ಲಾಪಗಳ ರಸಕವಳವೂ ಇಲ್ಲ,
ಸೊಗಸಾದ ಸಾಂಗತ್ಯ ಸವಿ ಮೊದಲಿಗಿಲ್ಲ॥

ನವಕವಿಯ ನವ್ಯತೆಯ ಪ್ರಯೋಗವಿದು ಅಲ್ಲ,
ಭವದ ಬೆವರನು ಕಳೆವ, ಗಾಯನವು ಅಲ್ಲ।
ಬಡಿ-ಬಡಿದು ಎಬ್ಬಿಸುವ ಬಂಡಾಯವಿದು ಅಲ್ಲ,
ದಡ-ಬಡನೆ ನುಗ್ಗಿಸುವ ಪದ-ಪುಂಜವಲ್ಲ॥

ನಗಿಸುವ ಹಾಸ್ಯವೋ ಒಂದಿನಿತು ಇಲ್ಲಿಲ್ಲ,
ಮಿಗಿಲಾದ ಸಿಂಗರದ ಶೃಂಗಾರವಿಲ್ಲ।
ಬಿಸಿನೆತ್ತರುಕ್ಕಿಸುವ ಆವೇಶವಿಲ್ಲಿಲ್ಲ,
ಪರವಶದ ಭಕುತಿ- ಭಾವದ ಲೇಪವಿಲ್ಲ॥

ಛಂದ-ಅಲಂಕಾರದ ಸಂಬಂಧವಿದು ಅಲ್ಲ,
ಪಾದ-ಯತಿ-ಲಯಗಳಾ ಗಣನೆಯೇ ಅಲ್ಲ।
ಪದದ-ಲಾಲಿತ್ಯದ ಪ್ರಾಸಬದ್ಧತೆ ಅಲ್ಲ,
ಸ್ಫೋಟದಾ ಶಬ್ದದಾ ಧ್ವನಿಕಾವ್ಯವಲ್ಲ॥

ಬಾಲಿಶದ ಕಲ್ಪನೆಯ ಆ ಚಿತ್ತವೃತ್ತಿಗಳ,
ಒತ್ತೊತ್ತಿ ಬರುತಿರುವ ಎಳಸು ಭಾವಗಳ।
ಪರಿಶಾಂತಗೊಳಿಸುತಿಹ ಸರಳ ರಚನೆಯ ಕವನ,
ಆತ್ಮತೃಪ್ತಿಯ ಕವನ, ಈ ನನ್ನ ಕವನ॥

ನನ್ನ ಕವನವಿದು।
ನನ್ನದೇ ಕವನ॥

*****

೧೯೭೦ರ ಆಸುಪಾಸಿನ ಕಥೆ

ದೀಪಾವಳಿಯ ದರೋಡೆಕೋರರು

- ರಾಧಿಕಾ ವಿ ಗುಜ್ಜರ್

ಅಂದು ದೀಪಾವಳಿಯ ಅಮಾವಾಸ್ಯೆಯಿತ್ತು. ಸರದ ಪಟಾಕಿಯಂತೆ ಹೆಣೆದುಕೊಂಡ ಕೆಲಸಗಳು ಬೆಳಿಗ್ಗೆಯಿಂದಲೂ ಸಾಗುತ್ತಿದ್ದವು. ಬಾಗಿಲಿಗೆ ರಂಗೋಲಿ ಹಾಕುವುದರಿಂದ ಹಿಡಿದು ಅಡಿಗೆಯ ತನಕ ಜಾನಕಮ್ಮ ಒಬ್ಬರೇ ಎಲ್ಲ ಕೆಲಸ ಮಾಡಿಕೊಳ್ಳುತ್ತಿದ್ದರು. ಸಂಜೆ ಲಕ್ಷ್ಮಿ ಪೂಜೆಯ ನಿಮಿತ್ತ ಬರುವ ಮುತ್ತೈದೆಯರಿಗೆ ತಾಂಬೂಲವನ್ನು ಜೋಡಿಸಿಟ್ಟು, ಸೊಸೆಯನ್ನು ಕೂರಿಸಿಕೊಂಡು ಜಡೆಬಿಲ್ಲೆ ಹೆಣೆದು, ಬಿಳಿ ಸೇವಂತಿ ದಂಡೆ ಮುಡಿಸಿ ಎದ್ದವರೇ, ಹಿತ್ತಲಿನ ಓಣಿಯಲ್ಲಿಟ್ಟಿದ್ದ ದೊಡ್ಡ ಪರಾತ ತಂದರು. ಹಿಂದಿನ ದಿನ ಅದರಲ್ಲಿ ಜೋಡಿಸಿಟ್ಟಿದ್ದ ಪ್ರಣತಿಗಳ ಕುಡಿ ಚಿವುಟಿ, ಬಟ್ಟಲಿನಿಂದ ಚೂರು ಚೂರೇ ಎಣ್ಣೆ ತುಂಬಿ, ದೀಪಗಳ ಹೊತ್ತಿಸಿ ಮನೆಯ ಬಾಗಿಲು, ಕಾಂಪೌಂಡ್ ಗೋಡೆ ಹಾಗೂ ತುಳಸಿಗೆ ಇಟ್ಟು ಒಳಬಂದರು.



ಮೊಮ್ಮಕ್ಕಳಿಬ್ಬರೂ ಖಣದ ಲಂಗದಲ್ಲಿ ದಸರೆಯಿಂದಿಳಿದ ಗೊಂಬೆಗಳಂತೆ ಮುದ್ದಾಗಿ ಕಾಣುತ್ತಿದ್ದರು. ಸೊಸೆ ಶಾಂತಲಾ ತುಂಬು ಗರ್ಭಿಣಿಯಿದ್ದ ಕಾರಣ, ಅತ್ತೆಯ ಅಣತಿಯಂತೆ ಧಡಬಡ ಕೆಲಸ ಮಾಡದೆ, ಹುಷಾರಾಗಿ ಓಡಾಡುತ್ತಿದ್ದಳು. ಮಗ ವಿಶ್ವನಾಥ ಪೇಟೆಬೀದಿಯ ಗೆಳೆಯರ ಹಾಗೂ ಬಂಧುಗಳ ಅಂಗಡಿಗಳ ಪೂಜೆಗೆ ಹೋಗಿ, ಬೇಗ ವಾಪಸ್ಸಾಗುವುದಾಗಿ ತಿಳಿಸಿ ಸಂಜೆ 4 ಗಂಟೆಗೆ ಕಾಫಿ ಕುಡಿದು ಹೊರಹೋಗಿದ್ದ. ಮನೆಯ ಎಡಪಕ್ಕದ ಲಾರಿ ಗೋಡೌನಿಗೆ ರಜೆ ಇತ್ತು. ಬಲಪಕ್ಕದ ಮನೆಯವರು ತಮ್ಮ ಹೊಲದ ಮನೆಗೆ ಹಬ್ಬ ಆಚರಿಸಲು ಹೋಗಿದ್ದರು. ಎದುರಿಗೆ ಎತ್ತುಗಳಿಗೆ ಕಾಲಿನ ಲಾಳ ಹೊಡೆಯುವ ಖಾಲೀ ಮೈದಾನ ಹಾಸಿಬಿದ್ದಿತ್ತು.

ಸುಮಾರು ೭.೦೦-೭.೩೦ ಸಮಯವಾಗಿತ್ತೇನೋ. ಕುಂಕುಮಕ್ಕೆ ಬರುವ ಹೆಂಗಳೆಯರ ಓಡಾಟ ಮುಗಿದಿತ್ತು. ಹೊರಗಿಟ್ಟ ದೀಪಗಳೆಲ್ಲವೂ ಶಾಂತವಾಗಿದ್ದವು. ಮಕ್ಕಳಿಗೆ ಊಟ ಮಾಡಿಸಲು ಸೊಸೆಗೆ ಹೇಳಿದ್ದೆ, ಜಾನಕಮ್ಮ ದೀಪಗಳನ್ನು ಒಳತರಲು ಪರಾತ ಹಿಡಿದು ಹೊರಬಂದರು. ಅಷ್ಟೂ ದೀಪಗಳ ತುಂಬಿಸಿ ಮನೆಯ ಒಳಗೆ ಹೊರಟವರನ್ನು, ಬಾಗಿಲಿನಿಂದ ಒಳಗೆ ದಬ್ಬಿಕೊಂಡೇ ಇಬ್ಬರು ಧಡೂತಿ ಗಂಡಸರು ತಾವೂ ಒಳಗೆ ಬಂದು, ಮನೆಯ ಮುಖ್ಯ ಬಾಗಿಲು ಹಾಕಿಬಿಟ್ಟರು. ಕ್ಷಣಮಾತ್ರದಲ್ಲಿ ಜಾನಕಮ್ಮ, ಸೊಸೆ ಹಾಗೂ ಮೊಮ್ಮಕ್ಕಳು, ಇಬ್ಬರು ಅಪರಿಚಿತರಿಂದ ತಮ್ಮ ಮನೆಯಲ್ಲಿಯೇ ಕೂಡಿ ಹಾಕಲ್ಪಟ್ಟಿದ್ದರು.

ತೋಳಿಗೆ ಬಂದಿ, ಹರಳಿನ ಬಳೆ, ಸಾದಾ ಬಳೆ, ಜಡೆ ಬಿಲ್ಲೆ, ಒಡವೆ ಸೆಟ್ ಹಾಕಿದ್ದ ಸೊಸೆ, ಚೈನು ಪದಕ ಹಾಕಿಕೊಂಡಿದ್ದ ಮೊಮ್ಮಕ್ಕಳು, ಮೂರೆಳೆ ಅವಲಕ್ಕಿ ಸರ, ಆರು ಬಳೆ, ವಜ್ರದ ಓಲೆ ಧರಿಸಿದ್ದ ಜಾನಕಮ್ಮ, ಕುಂಕುಮಕ್ಕೆಂದು ಹರಡಿ

ಇಟ್ಟಿದ್ದ ಬೆಳ್ಳಿಯ ತಟ್ಟೆ, ಹೂವಿನ ಬುಟ್ಟಿ, ದೇವರ ಮನೆಯ ತುಂಬಾ ಬೆಳ್ಳಿ ಸಾಮಾನುಗಳು... ಇನ್ನೇನು..??!!! ಅತ್ತೆ ಸೊಸೆ ಅವಕ್ಕಾಗಿ, ಬುದ್ಧಿಗೆ ಮಿಂಚುಬಡಿದು ಮರಗಟ್ಟಿ ಹೋಗಿದ್ದರು. ಧೈರ್ಯವೆಂಬುದು ಈಗಷ್ಟೇ ಒಳತಂದ ದೀಪಗಳಂತೆ ಆರಿಹೋಗಿತ್ತು.

ಕೈಯಲ್ಲಿದ್ದ ಪರಾತ ಇಡಲು ಧಾಂಡಿಗನೊಬ್ಬ ಜಾನಕಮ್ಮನವರಿಗೆ ಆಜ್ಞೆ ಮಾಡಿದ. ದರೋಡೆಕೋರರಿಬ್ಬರ ಮುಖಗಳೂ, ತೆಳು ಟವಲ್ಲಿನಿಂದ ಸಂಪೂರ್ಣ ಸುತ್ತಲ್ಪಟ್ಟಿದ್ದವು. ಕಣ್ಣು ಮಾತ್ರ ಬಿಟ್ಟಿದ್ದರು. ಇಬ್ಬರ ಕೈಯಲ್ಲೂ ಆಳೆತ್ತರದ ಬುರುಡೆ ಬಿಚ್ಚ ಬಲ್ಲ ದೊಣ್ಣೆಗಳಿದ್ದವು. ಹೆಂಡದ ವಾಸನೆ ರಾಚಿ ಬಡಿಯುತ್ತಿತ್ತು. ಜೊತೆಗೆ ನಿಲುವಿನ ಕಣಕಣದಲ್ಲೂ ಪಶುತ್ವ ತುಂಬಿತ್ತು.

ಜಾನಕಮ್ಮ ಪರಾತ ಇಡಲು ಹಿತ್ತಲಿಗೆ ಹೊರಟರು. "ಏಯ್... ಎಲ್ಲಿ?" ಎಂದ ಒಬ್ಬ. "ಓಣಿಯಲ್ಲಿ ಇಟ್ಟು ಬರ್ತೀನಿ" ಎಂದು ತನಗೇ ಕೇಳಿಸದಷ್ಟು ಸಣ್ಣ ದನಿಯಲ್ಲಿ ಹೇಳಿದ್ದರು ಜಾನಕಮ್ಮ. ಶಾಂತಲಾ ಕೂತಲ್ಲೇ ಬೆವರುತ್ತಿದ್ದಳು. "ಅತ್ತೆ ನನ್ನ ಹತ್ತಿರ ಬನ್ನಿ" ಎಂದು, ಅನ್ನದ ಕೈಯಲ್ಲೇ ಮಕ್ಕಳನ್ನು ಅವುಚಿ ಹಿಡಿದು ಅಳುತ್ತಿದ್ದಳು.

ಉದ್ದನೆಯ ಓಣಿಗುಂಟ ನಡೆದು ಹೊರಟ ಜಾನಕಮ್ಮ, ಹಾಗೇ ಹಿತ್ತಿಲ ಓಣಿಯ ಬಾಗಿಲು ತೆರೆದು, ಪಕ್ಕದ ಲಾರಿ ಆಫೀಸ್ ಗೋಡೌನ್ ನ ಹಮಾಲಿ ಮೈಲಾನನ್ನು ಕರೆದರು. ಅಲ್ಲೇ ಹಿತ್ತಲಲ್ಲಿ ಕಲ್ಲಿನ ಒಲೆಗೆ ಪುಳ್ಳೆ ಹೊತ್ತಿಸಿ ಗಮ್ಮತ್ತಾಗಿ ಹಬ್ಬದ ಕೋಳಿ ಸಾರು ತಯಾರಿಸುತ್ತಿದ್ದ ಮೈಲಾ ಹಾಗೂ ಪಂಚ ಏನೆಂದು ಬಾಗಿಲ ಬಳಿ ಬರಲು, ಜಾನಕಮ್ಮ ವಿಷಯ ಹೇಳಿ, ಅವಸರವಸರವಾಗಿ ಮನೆಯ ಒಳಗೆ ಹೊರಟರು. ಪಂಚ ಗೋಡೌನಿನಿಂದ, ದೊಡ್ಡ ಹಾರೆ, ಪಲ್ಲದ ಚೀಲಗಳನ್ನು ಹಿಡಿಯುವ ಕಬ್ಬಿಣದ ಚೂಪು ಕೊಕ್ಕೆ ಹಾಗೂ ಲಾಂಗ್ ತರಲು ಓಡಿದ.

ಮೈಲಾ, ಸುತ್ತಿದ್ದ ಲುಂಗಿ ಬಿಚ್ಚಿದವನೇ, ಒಳಗೆ ಹಾಕಿದ್ದ ದಪ್ಪ ನಿಕ್ಕರ್ ಮೇಲೆ ಜಾನಕಮ್ಮನವರನ್ನು ನೆರಳಂತೆ ಬಗ್ಗಿ ಹಿಂಬಾಲಿಸಿ ಮನೆಯೊಳಗೆ ಬಂದುಬಿಟ್ಟ. ಇಬ್ಬರಲ್ಲಿ ಒಬ್ಬ ಧಡಿಯ ಆಗಲೇ ದೇವರ ಕೋಣೆಯಲ್ಲಿದ್ದ ಬೆಳ್ಳಿ ಸಾಮಾನು ಗಳನ್ನು ಬಾಚುತ್ತಿದ್ದ. ಮೈಲಾ ತಕ್ಷಣ ದೇವರಕೋಣೆಯ ಬಾಗಿಲನ್ನು ಮುಚ್ಚಿ ಹೊರಗಿನಿಂದ ಚಿಲಕ ಹಾಕಿಬಿಟ್ಟ. ಅಲ್ಲಿಗೆ ಒಬ್ಬ ಕಳ್ಳನ ಕಥೆ ಮುಗಿದಿತ್ತು. ಬಾಗಿಲು ಹಾಕಿದ ಕೂಡಲೇ ಒಳಗಿದ್ದ ದರೋಡೆಕೋರ ಬಾಗಿಲು ಬಡಿದು ಕೂಗಾಡತೊಡಗಿದ. ಎಚ್ಚೆತ್ತ ಇನ್ನೊಬ್ಬ ಮಕ್ಕಳನ್ನು ಹಿಡಿಯಲು ಹಾರಿಬಿಟ್ಟ. ಅದೇನೆಣಿಸಿದಳೋ, ಸೊಸೆ ಶಾಂತಲಾ ಮಕ್ಕಳಿಗೆ ಊಟ ಮಾಡಿಸುತ್ತಿದ್ದ ತಟ್ಟೆಯನ್ನೆತ್ತಿ ಆತನ ಮುಖಕ್ಕೆ ರಾಚಿ ಎಸೆದುಬಿಟ್ಟಳು. ಕಲೆಸಿದ ಸಾರು-ಅನ್ನ ಮುಖಕ್ಕೆ, ಕಣ್ಣಿಗೆ ಬಿದ್ದು, ಆತ ಕಕ್ಕಾಬಿಕ್ಕಿಯಾಗಿ ದೊಪ್ಪನೆ ಕೆಳಗೆ ಬಿದ್ದುಬಿಟ್ಟಿದ್ದ. ತಕ್ಷಣ ಮೈಲಾ ಬಿದ್ದವನ ಬೆನ್ನಮೇಲೆ ದೊಪ್ಪನೆ ಕುಳಿತು, ಆತನನ್ನು ಅಲ್ಲೇ ಇದ್ದ ಟೇಬಲ್ ಕ್ಲಾತ್ ಸೆಳೆದಿದ್ದೇ ಕೈ ಹಿಂದಕ್ಕೆಳೆದು ಕಟ್ಟಿಹಾಕಿದ್ದ. ಹಿಂದೆಯೇ ಬಂದ ಪಂಚ ಓಡಿಹೋಗಿ ಹಿತ್ತಲಲ್ಲಿ ಒಣಗಲು ಹಾಕಿದ್ದ ಸೀರೆಯೊಂದನ್ನು ಎಳೆದು ತಂದುಕೊಡಲು, ಮೈಲಾ ಕಳ್ಳನ ಕೈಕಾಲೆಲ್ಲ ಸೇರಿಸಿ, ಮಡಿಸಿ, ತೂರಿಸಿ ಮೂಟೆಯಂತೆ ಹೆಡಮುರಿಗೆ ಕಟ್ಟಿಟ್ಟಿದ್ದ. ಜಾನಕಮ್ಮ ಬಾಗಿಲು ತೆರೆದು ಪಂಚನನ್ನು ಪೇಟೆ ಕಡೆ ಓಡಿಹೋಗಿ ನಾಲ್ಕಾರು ಜನರನ್ನು ಕೂಗಿ ಕರೆತರಲು ಹೇಳಿದರು.

ಅಂತೂ ದೀಪಾವಳಿಯಂದು ತಲೆಮೇಲೆ ಬಿದ್ದ ದರೋಡೆಕೋರರೆಂಬ, (ನರಕಾಸುರದ್ವಯರು ಅಂತಲೇ ಅಂದುಕೊಳ್ಳಿ) ಎರಡು ದೊಡ್ಡ ಆಟಂಬಾಂಬ್ ಠುಸ್... ತ್ಠುಸ್ ... ಫುಸ್ ಸ್ ಸ್ ಆಗಿದ್ದವು

*****

ಅರೇಬಿಯನ್ ನೈಟ್ಸ್

- ವಿಠ್ಠಲ್. ಇಜೇರಿ

ಹಿಂದಿನ ದಾಸೋಹಗಳಲ್ಲಿ ಕಥಾ ಪ್ರಪಂಚದ ವಿವಿಧ ಆಯಾಮಗಳು ಅಂದರೆ ಪ್ರಾಚೀನ ಕಥಾ ಸಂಕಲನಗಳಾದ 1.ವಡ್ಡರಾಧನೆ ಕಥೆಗಳು, 2.ಕಥಾ ಸರಿತ್ಸಾಗರ, 3.ಬುದ್ಧನ ಜಾತಕ ಕಥೆಗಳು, 4.ಪಂಚತಂತ್ರ ಕಥೆಗಳು, 5.ಈಸೋಪನ ನೀತಿ ಕಥೆಗಳು - ಇವುಗಳ ಬಗ್ಗೆ ನನ್ನ ಪ್ರಸ್ತುತಿಗಳನ್ನು ಮಂಡಿಸಿರುತ್ತೇನೆ. ಇಂದು ಇನ್ನೊಂದು ರಮ್ಯ ಕಥೆಗಳ ಸಂಗ್ರಹ 'ಅರೇಬಿಯನ್ ನೈಟ್ಸ್' ಕಥೆಗಳ ಬಗ್ಗೆ ಪ್ರಸ್ತುತಪಡಿಸುತ್ತಿದ್ದೇನೆ.

ಏಶಿಯನ್ ದೇಶಗಳಲ್ಲಿ ಕಿತಾಬ್ ಅಲ್ ಫ ಲೈಲಾಹ್ ವಾ - ಲೈಲಾಹ್ ಎಂಬ ಹೆಸರಿನ ಕಥೆಗಳ ಸಂಕಲನವನ್ನು 1707 ರಲ್ಲಿ ಆಂಗ್ಲ ಭಾಷೆಯಲ್ಲಿ ಅರೇಬಿಯನ್ ನೈಟ್ಸ್ ಹೆಸರಿನಲ್ಲಿ ಪ್ರಕಟಣೆ ಮಾಡಲಾಯಿತು. ಈ ಕಥೆಗಳಲ್ಲಿ ಅರೇಬಿಯಾ, ಪರ್ಷಿಯ, ಈಜಿಪ್ತ್ ಹಾಗೂ ಮೆಸೋಪೋಟೋಮಿಯಾ ಮುಂತಾದ ದೇಶಗಳ ಜಾನಪದ ಕಥೆಗಳಿವೆ. ಈ ಕಥಾ ಸಂಕಲನಕ್ಕೂ ಒಂದು ಕಥೆ ಇದೆ.

ಒಂದು ಊರಿನಲ್ಲಿ ಷಾಯರ್ ಎಂಬ ರಾಜನಿದ್ದ, ಅವನ ಮದುವೆಯಾದ ವಧು ಬೇರೆಯವನನ್ನು ಪ್ರೀತಿಸುತ್ತ ರಾಜನಿಗೆ ನಿಷ್ಠೆ ಇಲ್ಲದವಳಾಗಿದ್ದಳು. ಆದುದರಿಂದ ಅವನು ಆಕೆಯನ್ನು ಗಲ್ಲಿಗೇರಿಸಿದ. ಅನಂತರ ಅವನಿಗೆ ಸ್ತ್ರೀ ಜಾತಿಯ ಮೇಲೆ ಬೇಸರ ಬಂತು. ಅಂದಿನಿಂದ ಒಬ್ಬ ಕನ್ನೆಯನ್ನು ಮದುವೆಯಾಗುತ್ತಿದ್ದ ಹಾಗೂ ಮರುದಿನ ಬೆಳಿಗ್ಗೆ ಆಕೆಯನ್ನು ಗಲ್ಲಿಗೇರಿಸುತ್ತಿದ್ದ. ಅಲ್ಲಿಯ ಮಂತ್ರಿಗೆ ರಾಜನಿಗಾಗಿ ಕನ್ನೆಯರನ್ನು ಹುಡುಕುವ ಜವಾಬ್ದಾರಿ ಇತ್ತು. ಅವನು ದಿನಾಲು ಕನ್ನೆಯರನ್ನು ಹುಡುಕುವುದು ಕಷ್ಟವಾಯಿತು. ಆಗ ಮಂತ್ರಿಯ ಮಗಳು ರಾಜನನ್ನು ಮದುವೆಯಾದಳು. ಆಕೆ ಗಲ್ಲು ಶಿಕ್ಷೆ ತಪ್ಪಿಸಿಕೊಳ್ಳಲು ರಾಜನಿಗೆ ಸರಣಿಯಲ್ಲಿ ಒಂದರ ನಂತರ ಇನ್ನೊಂದು ಸ್ವಾರಸ್ಯಪೂರ್ಣ ಕತೆ ಹೇಳುತ್ತ ಹೋಗುತ್ತಾಳೆ. ಮತ್ತು ಬೆಳಿಗ್ಗೆ ಕತೆ ಪೂರ್ತಿ ಮುಗಿಸುವುದಿಲ್ಲ. ಕತೆ ಕೇಳುವುದರಲ್ಲಿ ಆಸಕ್ತನಾದ ರಾಜ ಗಲ್ಲು ಶಿಕ್ಷೆ ವಿಧಿಸುವುದನ್ನೇ ಮರೆತುಬಿಡುತ್ತಾನೆ. ಮಂತ್ರಿಯ ಮಗಳು ಹೇಳುವ ಈ ಕಥೆಗಳೇ ಅರೇಬಿಯನ್ ನೈಟ್ಸ್ ಕಥೆಗಳು. ಅವುಗಳಲ್ಲಿ ಮುಖ್ಯವಾದ ಕಥೆಗಳು-

1. ಅಲಿಬಾಬಾ 40 ಮಂದಿ ಕಳ್ಳರು.
2.. ಅಲ್ಲಾವುದ್ದಿನ್ ಮಾಯಾ ದೀಪ
3. ಸಿಂದಬಾದ್ ಏಳು ಸಾಗರ ಯಾತ್ರೆಗಳು
4. ಪುಟ್ಟ ಗಲಿವರ್ ಯಾತ್ರೆ ... ಇತ್ಯಾದಿ.

ಇಲ್ಲಿಯ ಪಾತ್ರಗಳಲ್ಲಿ ಅಣ್ಣ ತಮ್ಮಂದಿರಿದ್ದಾರೆ, ಅಪ್ಪ ಮಕ್ಕಳಿದ್ದಾರೆ. ಗಂಡ ಹೆಂಡತಿ ಇದ್ದಾರೆ. ಸಂಬಂಧಗಳಿವೆ, ಮಾಟ ಮಂತ್ರಗಳಿವೆ. ಪ್ರಾಣಿಗಳಿವೆ. ಒಬ್ಬ ವ್ಯಾಪಾರಿ ಮರದ ಅಡಿಗೆ ಕುಳಿತವನು ಸುಮ್ಮನೆ ಕಲ್ಲು ಎಸೆದಾಗ ಒಬ್ಬ ರಾಕ್ಷಸ

ಬಂದು ನೀನು ನನ್ನ ಮಗನನ್ನು ಕಲ್ಲು ಎಸೆದು ಕೊಂದಿರುವಿ, ನಾನು ನಿನ್ನನ್ನು ಕೊಲ್ಲುವೆ ಎಂದು ಖಡ್ಗ ಝಳಪಿಸಿದಾಗ ಆ ವ್ಯಾಪಾರಿಗೆ ಹೇಗಾಗಬೇಡ.

ಕತೆಯಲ್ಲಿ ಹಾಗಾಗುವದಿಲ್ಲ ಇನ್ನೂ ಮೂರು ಜನ ವ್ಯಾಪಾರಿಗಳು ಆ ರಸ್ತೆಯಲ್ಲಿ ಬಂದು ರಾಕ್ಷಸನನ್ನು ಪ್ರಶ್ನಿಸುತ್ತಾರೆ. ಉದಾಹರಣೆಗೆ ಕತೆ ಹೇಳುತ್ತಾರೆ. ಕತೆ ಕೇಳುತ್ತ ರಾಕ್ಷಸ ಖಡ್ಗ ಝಳಪಿಸುವುದನ್ನು ಮರೆಯುತ್ತಾನೆ. ಕಥೆಯೊಳಗೊಂದು ಕಥೆ. ಹಾಗೆಯೇ ಮಂತ್ರಿಯ ಮಗಳು 1001 ರಾತ್ರಿಗಳನ್ನು ಕತೆ ಹೇಳುತ್ತ ಕಾಲ ತಳ್ಳುವುದು ಮಾತ್ರವಲ್ಲ, ರಾಜನಿಗೆ ಮೂರು ಮಕ್ಕಳನ್ನು ಹಡೆದು ಕೊಡುತ್ತಾಳೆ.

ಹೀಗೆ ಒಂದಕ್ಕಿಂತ ಒಂದು ರೋಚಕ ಕತೆಗಳು ಮತ್ತು ಮಜವಾದ ಘಟನೆಗಳು. ಒಂದು ಕತೆಯನ್ನು ನೋಡೋಣ:-

ಹಿಂದೆ ಹರಾನ್ ಪಟ್ಟಣವನ್ನು ರಾಜನೊಬ್ಬ ಆಳುತ್ತಿದ್ದ. ಅವನಿಗೆ 50 ಜನ ಹೆಂಡಿರು. ಆದರೆ ಅವರಿಗೆ ಯಾರಿಗೂ ಮಕ್ಕಳಾಗಿರಲಿಲ್ಲ. ರಾಜ ಸಹಿತ ಎಲ್ಲರೂ ವ್ರತ, ನಿಯಮ ಆಚರಿಸಿದಾಗ ಅಂದು ರಾತ್ರಿ ಕನಸಿನಲ್ಲಿ ದೇವರು ಬಂದು 'ನಾಳೆ ಬೆಳಿಗ್ಗೆ ತೋಟದಲ್ಲಿ ಒಂದು ದಾಳಿಂಬೆ ತಿನ್ನು, ಸಂತಾನ ಪ್ರಾಪ್ತಿಯಗುವುದು' ಎಂದು ಹೇಳಿದರು. ರಾಜ ದಾಳಿಂಬೆ ತಿಂದ, 49 ಹೆಂಡಿರು ಗರ್ಭಿಣಿಯಾದುದು ತಿಳಿಯಿತು, ಫಿರೋಜ್ ಎಂಬಾಕೆಯ ಹೊಟ್ಟೆಯಲ್ಲಿ ಮಗು ಇದ್ದಂತೆ ಕಾಣಲಿಲ್ಲ. ರಾಜ ಆಕೆಯನ್ನು ರಾಜ್ಯದಿಂದ ಹೊರಹಾಕಿದ. ಆಕೆ ಪಕ್ಕದ ಸಮೇರಿಯಾ ರಾಜ್ಯಕ್ಕೆ ಹೋದಳು. ಅಲ್ಲಿಯ ರಾಜ ಒಳ್ಳೆಯವನು. ಆಕೆಯನ್ನು ತಾಯಿಯಂತೆ ಕಾಪಾಡಿದ ಆಕೆಯೂ ಗರ್ಭಿಣಿಯಾಗಿದ್ದಳು. ಆದರೆ ರಾಜನ ಅರಿವಿಗೆ ಬಂದಿರಲಿಲ್ಲ. ಫಿರೋಜ್ ಸಮೇರಿಯಾದಲ್ಲಿ ಗಂಡು ಮಗುವಿಗೆ ಜನ್ಮವಿತ್ತು ಅದನ್ನು ಆಕೆಯ ಪತಿಗೆ ತಿಳಿಸಿದಾಗ ಆ ಮಗುವಿಗೆ ಕದಾದನೆಂದು ಹೆಸರಿಡಲು ತಿಳಿಸಿ, "ಅವನು ಸಮೇರಿಯಾದಲ್ಲಿಯೇ ಬೆಳೆಯಲಿ" ಎಂದು ಹೇಳಿದ. ಕದಾದ ಅಲ್ಲಿ ಶೂರ ವೀರನಾಗಿ, ಸುಂದರ ಯುವಕನಾಗಿ ತನ್ನ ತಂದೆಯ ರಾಜ್ಯಕ್ಕೆ ಹೋಗಿ ಸೈನ್ಯಕ್ಕೆ ಸೇರಿದ. ಅವನ ಶೌರ್ಯ ಕಂಡು ರಾಜ ತನ್ನ 49 ಮಕ್ಕಳ ಮೇಲ್ವಿಚಾರಣೆಗೆ ಒಪ್ಪಿಸಿದ. ಆದರೆ ಆ 49 ಮಕ್ಕಳು ಸಾಧಾರಣ ಸೈನಿಕನ ಕೆಳಗೆ ಇರಲು ಇಷ್ಟಪಡದೆ ಕಾಡಿಗೆ ಹೋದರು. ರಾಜ ಅವರೆಲ್ಲರನ್ನೂ ಹುಡುಕಿ ತರಲು ಕದಾದನನ್ನು ಕಳಿಸಿದ. ಕಾಡಿನಲ್ಲಿ ಒಳಗೆ ದೊಡ್ಡ ಬಯಲಲ್ಲಿ ಸುಂದರ ಮಹಲು, ಅಲ್ಲಿ ಕಿಟಕಿಯಲ್ಲೊಬ್ಬ ಸುಂದರ ತರುಣಿ, ಆಕೆ ಕದಾದನಿಗೆ "ಇಲ್ಲಿಂದ ಓಡು, ಇಲ್ಲೊಬ್ಬ ರಾಕ್ಷಸನಿದ್ದಾನೆ" ಅಂದಳು. ಅಷ್ಟರಲ್ಲಿ ನೆಲ ಅದುರತೊಡಗಿತು. ಕದಾದ ಒಂದು ಕತ್ತಲು ಮೂಲೆ ಸೇರಿದ. ರಾಕ್ಷಸ ಬಂದು ಯುವತಿಗೆ "ನಿನ್ನನ್ನು ಕಾಪಾಡಲು ಇಲ್ಲಿಗೆ ಬರಲಾರರು ನನ್ನ ವಶಳಾಗು" ಎಂದು ಆಕೆಯತ್ತ ಸಾಗಿದಾಗ ಹಿಂದಿನಿಂದ ಬಂದ ಕದಾದು ರಾಕ್ಷಸನನ್ನು ಕೊಂದು ಯುವತಿಯ ಪ್ರಾಣ ಕಾಪಾಡಿದ. ಆಕೆ ಅವನನ್ನು ಪ್ರೀತಿಸಿದಳು. ರಾಕ್ಷಸನ ಒಳಮನೆಯಲ್ಲಿ ಆ 49 ರಾಜಕುಮಾರರಿದ್ದರು. ಅವರನ್ನು ಬಂಧಮುಕ್ತಗೊಳಿಸಿದನು. ಕದಾದ ಯುವತಿಗೆ "ನೀನಾರು" ಎಂದು ಕೇಳಿದ. ಆಕೆ "ನಾನು ದಯಾಬಾರ ರಾಜನ ಮಗಳು", ಇದು ಮತ್ತೊಂದು ಮುಂದಿನ ಕತೆ. . . .

******

ಮರಾಠವಾಡಾದ ಸಾಂಸ್ಕೃತಿಕ ಕೇಂದ್ರ - ಅಂಬಾಜೋಗಾಯಿ

- ಹೇಮಚಂದ್ರ

ಈ ಹಿಂದೆ ಹೈದರಾಬಾದಿನ ನಿಜಾಮರ ಆಡಳಿತದಲ್ಲಿದ್ದ, ಈಗ ಮಹಾರಾಷ್ಟ್ರ ರಾಜ್ಯದಲ್ಲಿರುವ ಮರಾಠಿ ಭಾಷಿಕ ಪ್ರದೇಶವನ್ನು 'ಮರಾಠವಾಡ' ಎಂದು ಗುರುತಿಸಲಾಗುತ್ತದೆ. ಅಂಬಾಜೋಗಾಯಿಯು ಮರಾಠವಾಡದ ಬೀಡ್ ಜಿಲ್ಲೆಯ ಒಂದು ತಾಲೂಕು ಕೇಂದ್ರ. ಇಲ್ಲಿರುವ ಯೋಗೇಶ್ವರಿ ದೇವಸ್ಥಾನದಿಂದಾಗಿ ಈ ಊರಿಗೆ ಅಂಬಾ ಜೋಗಾಯಿ ಹೆಸರಿದೆ. ಈ ಊರು ಸೊಲ್ಲಾಪುರದಿಂದ ೧೫೦ ಕಿ.ಮೀ, ಕಲಬುರ್ಗಿಯಿಂದ ೨೦೦ ಕಿ.ಮೀ, ಬೀದರ್ ನಿಂದ ೧೮೫ ಕಿ.ಮೀ ದೂರದಲ್ಲಿದೆ. ಹತ್ತಿರದ ರೈಲು ನಿಲ್ದಾಣ- ಪರಳಿ ೨೫ ಕಿ.ಮೀ ದೂರದಲ್ಲಿದೆ.

ಒಂದು ಲಕ್ಷ ಇಪ್ಪತ್ತು ಸಾವಿರ ಜನಸಂಖ್ಯೆಯ ಅಂಬಾಜೋಗಾಯಿಯು ಜಯವಂತಿ ನದಿಯ ದಡದಲ್ಲಿದೆ.ಜಯವಂತಿಪುರ ಎಂದು ಹೆಸರಾಗಿದ್ದ ಈ ಊರು ನಿಜಾಮರ ಕಾಲದಲ್ಲಿ ೧೯೦೩ರಲ್ಲಿ ಮೋಮಿನಾಬಾದ್ ಆಗಿ ೧೯೬೨ರಲ್ಲಿ ಅಂಬಾಜೋಗಾಯಿ ಹೆಸರನ್ನು ಪಡೆಯಿತು.

ಇಲ್ಲಿ ರಾಷ್ಟ್ರಕೂಟರ ಕಾಲದ, ಹೇಮಾಡಿಪಂಥ ಶೈಲಿಯಲ್ಲಿ ಕಟ್ಟಿರುವ ದೇವಸ್ಥಾನಗಳಿವೆ. ಅದರಲ್ಲಿ ಪ್ರಮುಖವಾಗಿರುವದು ಖೋಲೇಶ್ವರ ದೇವಸ್ಥಾನ. ಈ ಪ್ರದೇಶವನ್ನು ಪರಮಾರರು, ರಾಷ್ಟ್ರಕೂಟರು, ದೇವಗಿರಿ ಯಾದವರು ನಂತರ ಬಹಮನಿ ಸುಲ್ತಾನರು ಆಳಿದರು. ನಿಜಾಮರ ಕಾಲದಲ್ಲಿ ಇದು ಅಶ್ವಪಡೆಯ ಒಂದು ಕೇಂದ್ರವಾಗಿತ್ತು.

ಇಲ್ಲಿನ ಯೋಗೇಶ್ವರಿ ದೇವಸ್ಥಾನವು ಮಹಾರಾಷ್ಟ್ರದ ಪ್ರಮುಖ ಶಕ್ತಿ ಪೀಠವಾಗಿದೆ. ದೇವಗಿರಿ ಯಾದವರ ಕುಲದೇವತೆಯಾಗಿದ್ದ ಯೋಗೇಶ್ವರಿ ದೇವಿಗೆ ಇಂದಿಗೂ ಕೊಂಕಣದ ಚಿತ್ಪಾವನ ಹಾಗೂ ಕರ್ಹಾಡೆ ಬ್ರಾಹ್ಮಣರು ನಡೆದು ಕೊಳ್ಳುತ್ತಾರೆ. ಊರಿಗೆ ಹೊಂದಿಕೊಂಡಂತೆ ಇರುವ ಚಿಕ್ಕ ಬೆಟ್ಟದಲ್ಲಿ ಬಾದಾಮಿಯಲ್ಲಿರುವಂತೆ ಗುಹೆಗಳನ್ನು ಕೊರೆದಿದ್ದಾರೆ. ಇದರ ಕಾಲವನ್ನು ಕ್ರಿ.ಶ. ೧೦೬೦ರಿಂದ ೧೦೮೭ ಎಂದು ಅಂದಾಜಿಸಲಾಗಿದೆ. ಒಂದು ದೊಡ್ಡದಾದ ಗುಹೆಯಲ್ಲಿ ಸಪ್ತಮಾತೃಕೆಯರ, ಶಿವನ ಹಾಗೂ ಗಣೇಶ ಮೂರ್ತಿಗಳ ಕೆತ್ತನೆಯನ್ನು ಕಾಣಬಹುದು. ಗುಹೆಯ ಮುಂಭಾಗದಲ್ಲಿ ಕಲ್ಲಿನಲ್ಲಿ ಕೆತ್ತಿದ ಆನೆಗಳಿವೆ. ಈ ಕಾರಣಕ್ಕೆ ಈ ಗುಹೆಗಳು ಹಾಥಿ ಖಾನಾ ಎಂದೇ ಪ್ರಸಿದ್ಧವಾಗಿವೆ. ಸಧ್ಯ ಈ ಗುಹೆಗಳು ಮಹಾರಾಷ್ಟ್ರದ ಪ್ರಾಚ್ಯವಸ್ತು ಇಲಾಖೆಯ ಸುಪರ್ದಿಯಲ್ಲಿವೆ.

ಸಾಹಿತ್ಯಿಕ ಹಾಗೂ ಶೈಕ್ಷಣಿಕ ಕೇಂದ್ರವಾಗಿ ಅಂಬಾಜೋಗಾಯಿ ಮಹತ್ವವನ್ನು ಪಡೆದಿದೆ. ಮರಾಠಿ ಸಾಹಿತ್ಯದ ಆದ್ಯ ಕವಿಯಾದ, ೧೨ನೇ ಶತಮಾನದ ಕವಿ ಮುಕುಂದ ರಾಜರ ಸಮಾಧಿ ಇಲ್ಲಿದೆ. ನಾಥ ಪಂಥದ ಈ ಕವಿ ರಚಿಸಿದ ವಿವೇಕ ಸಿಂಧು, ಪರಮಾಮೃತ ಗ್ರಂಥಗಳು ಮರಾಠಿ ಸಾಹಿತ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆ. ಇಲ್ಲಿನ ಇನ್ನೊಂದು ಪ್ರೇಕ್ಷಣೀಯ

ಸ್ಥಳವೆಂದರೆ-ದಾಸೋಪಂತರ ಸಮಾಧಿ ಸ್ಥಳ. ಕ್ರಿ.ಶ.೧೫೫೧ರಿಂದ ೧೬೧೫ರವರೆಗೆ ಬಾಳಿದ ದಾಸೋಪಂತರು ಸಂತ ಏಕನಾಥರ ಸಮಕಾಲೀನರು ಹಾಗೂ ದತ್ತ ಸಂಪ್ರದಾಯದವರು. ಮರಾಠಿಯಲ್ಲಿ ಗೀತಾಬೋಧ ಚಂದ್ರಿಕಾ ಹಾಗೂ ಗ್ರಂಥರಾಜ ಎಂಬ ಗ್ರಂಥಗಳನ್ನು ಬರೆದಿದ್ದಾರೆ.

ದಾಸೋಪಂತರ ವಿಶೇಷತೆಯೆಂದರೆ ಅವರು ೪೦ ಅಡಿ ಉದ್ದ ಮತ್ತು ೪ ಅಡಿ ಅಗಲದ ಬಟ್ಟೆಯ ಮೇಲೆ ದಾಸಪಂಥದ ತತ್ವಗಳನ್ನು ಪದ್ಯ ರೂಪದಲ್ಲಿ ಬರೆದು ಅದಕ್ಕೆ 'ಪಂಚೀಕರಣ' ಎಂದು ಶೀರ್ಷಿಕೆ ನೀಡಿದ್ದಾರೆ. ಇದು ದತ್ತೋಪಂತ ಪಾಸೋಡಿ ಎಂದೇ ಪ್ರಸಿದ್ಧವಾಗಿದೆ. ಕಾಲಕ್ರಮೇಣ ಈ ಬಟ್ಟೆಯು ಜೀರ್ಣಾವಸ್ಥೆಗೆ ಬಂದಾಗ ಅದರ ತದ್ರೂಪವನ್ನು ತಯಾರಿಸಲಾಗಿದೆ ಹಾಗೂ ಅದು ಈಗ ದತ್ತೊಪಂತರ ವಂಶಜರಲ್ಲಿದೆ.

ಇದಲ್ಲದೇ ಈ ಊರಿನಲ್ಲಿ ಸುಮಾರು ೯೦೦ ವರುಷಗಳಷ್ಟು ಹಳೆಯದಾದ ವಿರಶೈವರ ಶಂಭುಲಿಂಗ ಸ್ವಾಮಿ ಮಠವಿದೆ. ಈ ಮಠದಲ್ಲಿ ಕೆಲವರು ಕನ್ನಡ ಮಾತನಾಡಬಲ್ಲವರಿದ್ದಾರೆ. ಹಿಂದಿನಿಂದಲೂ ಅಂಬಾಜೊಗಾಯಿಯು ಗುಣಮಟ್ಟದ ಶಿಕ್ಷಣಕ್ಕೆ ಹೆಸರಾಗಿದೆ. ಕರ್ನಾಟಕದ ಸಿಂಧಗಿ ಮೂಲದ ಸ್ವಾತಂತ್ರ್ಯ ಸೇನಾನಿ ಸಂತ ರಮಾನಂದ ತೀರ್ಥರು ಇಲ್ಲಿ ಅನೇಕ ಶಾಲೆ, ಕಾಲೇಜುಗಳ ಸ್ಥಾಪನೆಗೆ ಪ್ರೇರಣೆ ನೀಡಿದರು. ಏಶಿಯಾ ಖಂಡದಲ್ಲೇ ಪ್ರಥಮ ಎಂದು ದಾಖಲಾಗಿರುವ ಸಂತ ರಮಾನಂದ ತೀರ್ಥ ವೈದ್ಯಕೀಯ ಕಾಲೇಜು ಇಲ್ಲಿ ೧೯೭೪ರಲ್ಲಿ ಪ್ರಾರಂಭವಾಯಿತು. ಇಂದು ಮಹಾರಾಷ್ಟ್ರದ ಪ್ರಮುಖ ವೈದ್ಯಕೀಯ ಕಾಲೇಜುಗಳಲ್ಲಿ ಒಂದಾಗಿದೆ.

ಇಲ್ಲಿನ ಜನ ಕಲೋಪಾಸಕರು. ಊರಲ್ಲಿ ನಿತ್ಯ ಒಂದಿಲ್ಲೊಂದು ಕಡೆ ಹಿಂದುಸ್ಥಾನಿ ಸಂಗೀತ ಕಾರ್ಯಕ್ರಮ, ನಾಟಕ ಇಲ್ಲವೆ ತಮಾಷಾ ಪ್ರದರ್ಶನಗಳು ನಡೆಯುತ್ತಿರುತ್ತವೆ. ಅಂಬಾಜೋಗಾಯಿಯನ್ನು ಮರಾಠವಾಡದ ಪುಣೆ ಎಂದೂ ಕರೆಯುತ್ತಾರೆ.

ಒಂದು ದಿನದ ಪ್ರವಾಸಕ್ಕೆ ತಕ್ಕುದಾದ ಪ್ರದೇಶ. ಬನ್ನಿ, ಮುಕುಂದ ರಾಜರ ಹಾಗೂ ದಾಸೋಪಂತರ ಸಮಾಧಿ ದರ್ಶನ, ಗುಹಾ ವೀಕ್ಷಣೆ ಮಾಡಿ ಯೋಗೇಶ್ವರಿ ಹಾಗೂ ಖೋಲೇಶ್ವರ ದೇವಾಲಯಗಳ ಶಿಲ್ಪಕಲೆಯನ್ನು ಆಸ್ವಾದಿಸೋಣ.

*****

ಸಂಶೋಧನಾ ವಿದ್ಯಾರ್ಥಿನಿ ನಿಖಿಯಾ ಶಂಷೀರ್

- ಎನ್. ವಿ. ರಘುರಾಂ

"ಸಣ್ಣವರು ಇರುವಾಗ ಹೊಸದಾಗಿ ಏನನ್ನಾದರೂ ಮನೆಯಲ್ಲಿ ತಂದು ಕೊಟ್ಟರೆ ಅದನ್ನು ಶಾಲೆಯಲ್ಲಿ ಸ್ನೇಹಿತರ ಹತ್ತಿರ ತೋರಿಸುವ ತನಕ ಸಮಾಧಾನ ಇರುವುದಿಲ್ಲ ಅಲ್ಲವೇ? ಅದು ಸ್ಕೂಲ್ ಬ್ಯಾಗ್ ಆಗಿರಬಹುದು, ಹೊಸ ಹೇರ್ ಬ್ಯಾಂಡ್ ಆಗಿರಬಹುದು. ಅದನ್ನು ಸ್ಕೂಲಿಗೆ ತೆಗೆದುಕೊಂಡು ಹೋಗಿ ಎಲ್ಲರಿಗೂ ತೋರಿಸಿದ ಮೇಲೆಯೇ ಸಮಾಧಾನ, ಸಣ್ಣ ಮಕ್ಕಳಿಗೆ. ನಾನೂ ಇದಕ್ಕೆ ಹೊರತಾಗಿರಲಿಲ್ಲ! ಈ ದಿನದಿಂದ ಮತ್ತೆ ಶಾಲೆ ಪ್ರಾರಂಭ. ಅಪ್ಪ ನನಗೆ ಹೊಸ ಬ್ಯಾಗ್ ತಂದುಕೊಟ್ಟಿದ್ದರು. ನನ್ನ ಹಳೆಯ ಬ್ಯಾಗನ್ನು ನಮ್ಮ ಮನೆಯ ಕೆಲಸದವಳ ಮಗಳಿಗೆ ಕೊಟ್ಟೆ. ಆ ಬ್ಯಾಗ್ ಅಪ್ಪಿಕೊಂಡು ಮಗು ಬಹಳ ಸಂತೋಷಪಟ್ಟಿತು. ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಒಂದು ಹಳೆಯ ಬ್ಯಾಗು ಒಂದು ಮಗುವಿಗೆ ಇಷ್ಟೊಂದು ಸಂತೋಷಕೊಟ್ಟಿದ್ದು ನನ್ನ ಕಣ್ಣು ತೆರೆಯಿಸಿತು. ಆ ಮಗುವಿನ ಮುಖದಲ್ಲಿ ಸಂತೋಷ ಮತ್ತು ಕಣ್ಣಿನಲ್ಲಿ ಒಂದು ಹೊಸ ಭರವಸೆ ನೋಡಿದೆ. ಆ ದಿನದಿಂದ ನನ್ನ ಕೈಲಾದ ಮಟ್ಟಿಗೆ ಆಶಕ್ತ ಮಕ್ಕಳಿಗೆ ಸಹಾಯ ಮಾಡಲು ಪ್ರಾರಂಭ ಮಾಡಿದೆ"

- ಈ ಮಾತುಗಳನ್ನು ಹೇಳಿದವರು ಯಾರು? ಬಹುಶಃ ಯಾರೋ ಹಿರಿತಲೆ ಇರಬೇಕು ಅಂದುಕೊಳ್ಳಬಹುದು. ಅದು ಸಹಜ ಕೂಡ. ಆದರೆ ಈ ಮಾತನ್ನು ಹೇಳಿರುವುದು ಸುಮಾರು 18 ವರ್ಷದ "ನಿಖಿಯಾ ಶಂಷೀರ್" ಎನ್ನುವ ಸಣ್ಣ ಹುಡುಗಿ. ಬೆಂಗಳೂರಿನ ಗ್ರೀನ್ ವುಡ್ ಹೈ ಇಂಟರ್ ನ್ಯಾಷನಲ್ ಸ್ಕೂಲಿನಲ್ಲಿ ಓದಿರುವ ಈ ಹುಡುಗಿ ಸಣ್ಣವಳಿದ್ದಾಗ ನಡೆದ ಬ್ಯಾಗಿನ ಘಟನೆಯಿಂದ ಪ್ರೇರೇಪಿತಳಾಗಿ ತನ್ನ ಸ್ನೇಹಿತರು, ನೆಂಟರು ಎಲ್ಲರಿಂದ ಬ್ಯಾಗ್, ಪುಸ್ತಕ, ಪೆನ್ನು, ಶೂ, ಹೀಗೆ ಸ್ಕೂಲಿಗೆ ಬೇಕಾದ ವಸ್ತುಗಳನ್ನು ಸಂಗ್ರಹಿಸಿ ಸರಕಾರಿ ಶಾಲೆಗಳಲ್ಲಿ ವಿತರಣೆ ಮಾಡಲು ಪ್ರಾರಂಭ ಮಾಡಿದಳು. 2015ರಲ್ಲಿ 1200 ವಿಧ್ಯಾರ್ಥಿಗಳಿಗೆ ಇದನ್ನು ಕೊಡಲಾಯಿತು. ಇದು ವರ್ಷದಿಂದ ವರ್ಷಕ್ಕೆ ಹೆಚ್ಚಾಗಿ 2018ರಲ್ಲಿ 3825 ವಿಧ್ಯಾರ್ಥಿಗಳಿಗೆ ಕೊಡಲಾಯಿತು. ಅದನ್ನು ಪ್ರಾರಂಭ ಮಾಡಿದ ಮೇಲೆಯೇ ಆಕೆಗೆ ಗೊತ್ತಾದದ್ದು, ಅದು ಎಷ್ಟು ಆಗಾಧವಾದ ಕಾರ್ಯ ಎಂದು.

ಎಷ್ಟೋ ಶಾಲೆಗಳಲ್ಲಿ ವಿಜ್ಞಾನದ ಲ್ಯಾಬೋರೇಟರಿ ಇರಲಿಲ್ಲ. ಪುಸ್ತಕ, ಯೂನಿಫಾರ್ಮ್, ತಿಳುವಳಿಕೆ ಇರಲಿಲ್ಲ. ಹೀಗೆ ಪ್ರತಿಯೊಂದು ವಿಷಯದಲ್ಲೂ ಕೊರತೆ ಇತ್ತು. ಬದಲಾವಣೆ ತರಲು ಹೊರಟಾಗ ಕೆಲವರು ಹಣ ಕೊಟ್ಟರು. ಕೆಲವರು ವಸ್ತುಗಳನ್ನು ಕೊಟ್ಟರು. ಕೆಲವರು ಆ ಮಕ್ಕಳಿಗೆ ಪಾಠ ಮಾಡಲು ಮುಂದೆ ಬಂದರು. ಆ ಬಂದ ಹಣದಿಂದ "ಯ್ಯಾರ್ನ ಟು ಲರ್ನ್ ಲ್ಯಾಬ್ಸ್" ಸಂಸ್ಥೆ ಪ್ರಾರಂಭಮಾಡಿ ಅದರ ಮೂಲಕ ಸರಕಾರಿ ಶಾಲೆಗಳಿಗೆ ಜೀವಶಾಸ್ತ್ರ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ ವಿಷಯಗಳಲ್ಲಿ ಪ್ರಯೋಗಶಾಲೆ ಉಪಕರಣ ಕೊಡಲು ಪ್ರಾರಂಭ ಮಾಡಿದಳು. ಮೂರು ವರ್ಷಗಳಲ್ಲಿ 30 ಶಾಲೆಗಳಲ್ಲಿ 120 ವಿಜ್ಞಾನದ ಪ್ರಯೋಗಶಾಲೆಗಳನ್ನು ತೆರೆಯಲಾಗಿದೆ. ಇದು ಸುಮಾರು 15000 ವಿದ್ಯಾರ್ಥಿಗಳಿಗೆ ಸಹಾಯಕವಾಗಿದೆ. ಇದು ಆ ಮಕ್ಕಳ ಕಲಿಕೆಯಲ್ಲಿ ಅತಿ ದೊಡ್ಡ ಬದಲಾವಣೆ ತಂದಿದೆ. ಅವರು ಈಗ ಕಲಿಯುವದರ ಜೊತೆಗೆ "ವಿಜ್ಞಾನದ ಮಾಡೆಲ್"ಗಳನ್ನು ಮಾಡುತ್ತಿದ್ದಾರೆ. ಈ ವಿದ್ಯಾರ್ಥಿಗಳು ಈಗ ಅಂತರ ಶಾಲೆ

ವಿಜ್ಞಾನದ ಸ್ಪರ್ಧೆಗೆ ಹೋಗುತ್ತಾರೆ. ರಾಷ್ಟ್ರೀಯ ಒಲಂಪಿಯಾಡ್ ನಲ್ಲಿ ಭಾಗವಹಿಸುತ್ತಾರೆ. ಬಹಳಷ್ಟು ವಿದ್ಯಾರ್ಥಿಗಳು ಒಳ್ಳೆಯ ಶ್ರೇಣಿ ಪಡೆದಿರುತ್ತಾರೆ. ಆದರೆ ಇದು ಎಲ್ಲರ ಡೋನೇಶನ್ ನಿಂದ ಬರುವ ದುಡ್ಡಿನಿಂದ ಸಾಕಾಗುತ್ತಿರಲಿಲ್ಲ. ಹಾಗಾಗಿ 2017ರಲ್ಲಿ ಇ-ಕಾರ್ಮಸ್ ವೆಬ್ಸೈಟ್ Knicnacs.com ಪ್ರಾರಂಭ ಮಾಡಿದಳು. ಅಲ್ಲಿ ಖುಷಿ ಕೊಡುವ ಮತ್ತು ಉಡುಗೊರೆಗಳನ್ನು ಕೊಡುವ ವಸ್ತುಗಳನ್ನು ಮಾರಾಟ ಮಾಡಿ ಅದರಲ್ಲಿ ಬರುವ ಎಲ್ಲಾ ಹಣವನ್ನು ಸರಕಾರಿ ಶಾಲೆಯ ಮಕ್ಕಳ ವಿಧ್ಯಾಭ್ಯಾಸಕ್ಕೆ ಉಪಯೋಗಿಸಲಾಗುತ್ತಿದೆ.

ಈಕೆ ಮಾನ್ಯ ರಾಷ್ಟ್ರಪತಿ ಶ್ರೀ ರಾಮಾನಾಥ್ ಕೋವಿಂದ್ ಅವರಿಂದ ಆಸಾಧಾರಣ ಸಾಧನೆ ಮಾಡುವ ಮಕ್ಕಳಿಗೆ ಕೊಡುವ ರಾಷ್ಟ್ರೀಯ ಬಹುಮಾನ ಬೆಳ್ಳಿ ಪದಕ -2017 ಪಡೆದುಕೊಂಡಿದ್ದಾರೆ.

ಸಮಾಜಮುಖಿಯಾಗಿ ಕೆಲಸಮಾಡುವುದರ ಜೊತೆಗೆ ಅವರು ಈಗ ವೈದ್ಯಕೀಯ ಸಂಶೋಧನೆ ಕ್ಷೇತ್ರದಲ್ಲಿ ಓದನ್ನು ಮುಂದುವರೆಸಿದ್ದಾರೆ. ಒಂದು ವರ್ಷ ಬೆಂಗಳೂರಿನ ಐ.ಐ.ಎಸ್.ಸಿ ಯಲ್ಲಿ ಸಂಶೋಧನಾ ವಿದ್ಯಾರ್ಥಿನಿಯಾಗಿ ಸೇರಿ 18 ವರ್ಷ ಇರುವಾಗಲೇ ಬಾಯಲ್ಲಿ ಆಗುವ ಅರ್ಬುದ ರೋಗವನ್ನು (ಓರಲ್ ಕ್ಯಾನ್ಸರ್) ಪ್ರಾರಂಭ ಸ್ಥಿತಿಯಲ್ಲಿ ಪತ್ತೆಹಚ್ಚುವ ವಿಧಾನದ ಬಗ್ಗೆ ಪ್ರೌಢ ಲೇಖನ ಬರೆದು ಅದನ್ನು ಪ್ರತಿಷ್ಠಿತ ವೈದ್ಯಕೀಯ ಪತ್ರಿಕೆಗಳಲ್ಲಿ (ಜರ್ನಲ್) ಪ್ರಕಟಿಸಿದ್ದಾರೆ. ಈಗ ಹೆಚ್ಚಿನ ಸಂಶೋಧನೆ ಮಾಡಲು ಅಮೇರಿಕಾದ ಸ್ಟಾನ್ ಫೋರ್ಡ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿಯಾಗಿ ಸೇರಿದ್ದಾರೆ. ಅಲ್ಲಿ ಇವರು ಮಾಡುತ್ತಿರುವ ಅರ್ಬುದ ರೋಗದ ಸಂಶೋಧನೆಗೆ ಭಾರತ ಸರ್ಕಾರದ ಶಿಷ್ಯವೇತನ ಸಿಕ್ಕಿರುತ್ತದೆ.

ಬದಲಾವಣೆ ತರಲು ಎಲ್ಲರಿಗೂ ಮನಸ್ಸಿದೆ. ಜೊತೆ ಸೇರಿ ಮಾಡಿದರೆ ಬದಲಾವಣೆ ಬೇಗ ಬರಲು ಸಾಧ್ಯ.

ಈ ತರಹ ಹದಿನೆಂಟು ವರ್ಷದ ಹುಡುಗಿಯೊಬ್ಬಳು ಸಮಾಜಮುಖಿಯಾಗಿ ಹೊಸ "ಆದರ್ಶ ಮಹಿಳೆ" ಆಗಿರುವುದು ನಮ್ಮ ಕರ್ನಾಟಕದ ಹೆಮ್ಮೆ ಕೂಡ.

******

ಕರ್ಮದ ಮೂಟೆ

- ನಾಗಮಂಗಲ ಶಾಂತಾ

ತಮ್ಮ ಎಲೆಯಲ್ಲಿ ದನ ಸತ್ತು ಬಿದ್ದಿದ್ದರೂ ಪರವಾಗಿಲ್ಲ, ಪಕ್ಕದೋರ ಎಲೇಲಿ ಬಿದ್ದಿರೋ ನೊಣದ ಕಡೆಗೇ ಇವರ ಗಮನ. ಛೇ! ಏನು ಬಂದಿದೆಯೋ ಇವರಿಗೆ? ತಮ್ಮ ಪಾಡಿಗೆ ತಾವಿರೋಕ್ಕೇನು ಧಾಡಿ? - ಮಗಳು ರಾಗಿಣಿ ಕಾರಿಂದಿಳಿದು ಮನೆಯೊಳಕ್ಕೆ ಬರ್ತಾನೆ ಉರಿಸಿಂಗಿಯ ಹಾಗೆ ಉರೀತಾ ಬಂದಾಗ, ಏನಾಯ್ತುಪ್ಪಾ? ನೆನ್ನೆ ಮಧುಗಿರಿಗೆ ಅವರ ಅತ್ತೆ ಅಣ್ಣನ ಮಗಳ ಮಗುವಿನ ನಾಮಕರಣಕ್ಕೆ ಹೋಗೋವಾಗ ಸರಿಯಾಗೇ ಇದ್ದಲ್ಲಾ? ನಾಳೆ ಬರೋದಿತ್ತು ಅಳಿಯ, ಇವಳ ಅತ್ತೆ ಎಲ್ಲರೂ ಒಟ್ಟಿಗೆ ಇವಳ್ಯಾಕೆ ಬೇಗ ಬಂದ್ಲೂ? ನೂರು ಪ್ರಶ್ನೆಗಳು ಶಿವಾನಿಯ ತಲೆಯಲ್ಲಿ ಗುಂಯ್ ಗುಡಲು ಶುರುವಾದವು. ಅಲ್ಲೇ ವೆರಾಂಡದಲ್ಲಿ ಪೇಪರಲ್ಲಿ ತಲೆ ಹುದುಗಿಸಿ ಕೂತಿದ್ದ ಗಂಡ ಮಹೇಶನ ಕಡೆ ನೋಡಿದಳು. ಮಹರಾಯರಿಗೆ ಇತ್ತ ಕಡೆ ಗಮನವೇ ಇಲ್ಲ. ಸರಿ. ಮಾತಾಡಿಸೋಣ ಅಗ್ನಿಪರ್ವತವನ್ನು ಅಂತಾ ಎದ್ದು ರೂಮಿಗೆ ಹೋದಳು. ರಾಗಿಣಿ ಕಾಣಲಿಲ್ಲ. ಬಹುಶಃ ಫ್ರೆಶ್ ಅಪ್ ಆಗಲು ಹೋಗಿರಬಹುದು ಎಂದುಕೊಂಡು ಅಲ್ಲೇ ಮಂಚದ ಮೇಲೆ ಕುಳಿತಳು. ಏನಾಗಿರಬಹುದು? ಮತ್ತೆ ಯಾರಾದರೂ ಇವಳಿಗೆ ಇನ್ನೂ ಯಾಕೆ ಮಕ್ಕಳಾಗಿಲ್ಲ ಅಂತಾ ಕೇಳಿರಬೇಕು. ಹೋಗಿದ್ದು ನಾಮಕರಣಕ್ಕೆ ಬೇರೆ. ಖಂಡಿತಾ ಎದ್ದಿರತ್ತೆ ಪ್ರಶ್ನೆ. ವಸ್ತುಸ್ಥಿತಿ ಅದೇ ಆಗಿರುವಾಗ ಪ್ರಶ್ನೆ ಕೇಳೋದೇ ಸರಿ ಇಲ್ಲ ಎನ್ನಕ್ಕಾಗತ್ಯೆ? ಗಾದೇನೇ ಇದೆಯಲ್ಲಾ "ಒಲೆ ಬಾಯಿ ಮುಚ್ಚಬೋದು, ಊರ ಬಾಯಿ ಮುಚ್ಚಕಾಗಲ್ಲ" ಅಂತಾ.

ಯಾಕೆ ಇವಳಿಗೆ ಈ ತಿವಿತಗಳನ್ನು ಎದುರಿಸೋ ನೋವು? ರಾಗಿಣಿಗೂ ರಾಗಿಣಿ ಗಂಡ ವಿನಯ್ ಇಬ್ಬರಿಗೂ ಏನೂ ದೋಷವಿಲ್ಲ. ಎಲ್ಲಾ ಸರಿಯಾಗೇ ಇದೆ. ಹಾಗಿದ್ರೂ ಸಮೃದ್ಧವಾಗಿ ಹೂ ಬಿಟ್ಟು ಫಲ ಕಚ್ಚದೇ ಉದುರಿ ಹೋಗೋ ಗಿಡದಂತೆ ಯಾಕೆ ಹೀಗೆ ಖುತುನಷ್ಟದ ನೋವು ಇವಳಿಗೆ, ನಮಗೂ ನೋವೇ. ಏನೋ ಮೊದಲೆರಡು ವರ್ಷಗಳು ಎಲ್ಲರಂತೆ ಹೊಂದಾಣಿಕೆಗೆ ಸಮಯ ಕೊಟ್ಟಿದ್ರೂ ಅನ್ಸತ್ತೆ. ಮಗಳೇ ಆದ್ರೂ ಎಲ್ಲಾ ಕೇಳೋದಾದ್ರೂ ಹೇಗೆ? ಸಂಕೋಚವಾಗತ್ತಲ್ಲ. ಇಷ್ಟು ಓದಿ, ದೇಶ ವಿದೇಶಗಳಲ್ಲಿ ಕೆಲಸ ಮಾಡಿ ನಮಗಿಂತ ಹೆಚ್ಚು ಪ್ರಪಂಚ ನೋಡಿರೋ ಈ ಕಾಲದವರು. ಎಲ್ಲಾ ಅವರೇ ಪ್ಲಾನ್ ಮಾಡ್ಕೊಂಡಿರ್ತಾರೆ ಅಂತ ಶಿವಾನಿ ಮತ್ತು ರಾಗಿಣಿ ಅತ್ತೆ ಇಬ್ಬರೂ ಕಾದದ್ದೇ ಬಂತು ಎಂಟು ವರ್ಷಗಳಿಂದ.

ಫ್ಲಶ್ ಮಾಡಿದ ಸದ್ದು, ಪಟ್ ಅಂತಾ ಚಿಲಕ ತೆಗೆದ ಸದ್ದು. " ಏನಮ್ಮ ನನ್ನ ಹಿಂದೇ ಬಂದ್ಯಾ - ಏನು ಅಂತಾ ವಿಚಾರ್ಸಕ್ಕೆ? - ರಾಗಿಣಿಯ ದನಿ ಶಿವಾನಿಯ ಯೋಚನೆಗಳನ್ನು ತುಂಡು ಮಾಡ್ತು. " ಹೂ ಕಣೆ, ನೀನು ಹಾಗೆ ಉರೀತಾ ಬಂದರೆ ಬೇಜಾರು ಭಯ ಎರಡೂ ಆಗತ್ತಮ್ಮ ನಂಗೆ. ಸರಿ ಯಾಕೆ ನೀನೊಬ್ಬಳೇ ಬಂದೆ? ವಿನಯ್ ನಿಮ್ಮತ್ತೆ ಬರ್ಲಿಲ್ಲವಾ? ಏನಾಯ್ತು? ಪ್ರಶ್ನೆಯೇ ಮುಗಿದಿಲ್ಲ ಫಟ್ ಅಂತಾ ಬಂತು ಉತ್ತರ -"ಇನ್ನೇನಾಗತ್ತೆ? ಎಲ್ಲರಿಗೂ ಇನ್ನೊಬ್ಬರ ಸಂಸಾರದ ಹುಳುಕಿನ ಮೇಲೇ ಕಣ್ಣು. ಆ ಪಮ್ಮಿ ಅತ್ತೆ, ಬೇಕೂ ಅಂತಾಲೇ ನನ್ನ ಪಕ್ಕಾನೆ ಬರೋದು, ಇನ್ನು ಎಷ್ಟು ದಿನ ಪ್ಲಾನೂ, ಬೇಗೊಂದು ಆಗ ಬಾರದೇನೆ? ನೋಡು ಈ ನಯನಂಗೆ ಮೂರು ವರ್ಷದಲ್ಲೇ ಎರಡನೇ ಮಗು, ಅದಪ್ಪಾ ಚಂದ ಅಂದ್ರೆ . ತಲೆ ಚಿಟ್ಟು ಹಿಡಿಸಿಬಿಟ್ಟರು. ನಾನೇನು ಬೇಡ ಅಂದಿದ್ನಾ ಆಗಿದ್ರೆ. ಪಮ್ಮಿ ಅತ್ತೆಯ ಚಿಕ್ಕ ಮಗಳಿಗೆ

ಏನೋ ವ್ಯತ್ಯಾಸ ಆಗಿ ಗರ್ಭಕೋಶವೇ ಇಲ್ಲವಂತೆ, ಅದೆಲ್ಲಾ ಅವರಿಗೆ ಲೆಕ್ಕಕ್ಕೇ ಇಲ್ಲ. ನನ್ನನ್ನು ಎಲ್ಲಾರೆದುರಿಗೂ ಕೆದಕಿ ರಂಪ ಮಾಡಾಕೆ ಬರ್ತಾರೆ. ಎಲ್ಲಾ ಸರಿಯಾಗಿದ್ದೂ, ಯಾಕಮ್ಮ ನಂಗೀ ಶಿಕ್ಷೆ? ಕಂಡಕಂಡವರ ಪ್ರಶ್ನೆಗಳನ್ನು ಎದುರಿಸೋ ಕರ್ಮ? ಆಫೀಸಲ್ಲಿ ಎಂಥೆಂಥಾ ಇಂಟರ್ವ್ಯೂ ಗಳಲ್ಲಿ ತಡಬಡಾಯಿಸದೇ ಉತ್ತರ ಕೊಟ್ಟು ಭೇಷ್ ಅನ್ನಿಸ್ಕೋಳ್ಳೋ ನಂಗೆ, ಇಂಥೋರ ಬಾಯಿಗೆ ಬೀಳೋ ಸಂಕಟ - ಹೇಳಮ್ಮ. ನಾನೇನಾದ್ರೂ ಇವರ ಸಂಸಾರದ ಹುಳಕನ್ನು ಕೆದಕೋಕೆ ಹೋಗ್ತೀನಾ? ಥೂ, ಇನ್ನೊಬ್ಬರ ಪ್ರೈವೇಟ್ ವಿಷಯದಲ್ಲಿ ತುಂಬಾ ತಲೆ ತೂರಸ್ತಾರಪ್ಪಾ. ಮಗಳಿಗೆ ತಕ್ಷಣಕ್ಕೆ ಏನೋ ತೋರಿದ ಸಮಾಧಾನ ಹೇಳಿ ಶಿವಾನಿ ಎದ್ದು ಅಡುಗೆ ಮನೆಗೆ ಬಂದಳು.

ಆದರೆ ಮಗಳ ಪ್ರಶ್ನೆ "ಯಾಕಮ್ಮ ನಂಗೀ ಶಿಕ್ಷೆ? ನಂಗ್ಯಾಕಮ್ಮ ಈ ಕರ್ಮ? - ಪ್ರಶ್ನೆಗಳು ಅವಳನ್ನು ಕೂತಲ್ಲಿ ನಿಂತಲ್ಲಿ ಕಾಡತೊಡಗಿತು. ಅವಳ ಮಾತುಗಳನ್ನು ಕೇಳುವಾಗ ಕರುಳು ಕಿತ್ತು ಬರುತ್ತಿತ್ತು. ಸುಮಾರು ಮೂವತ್ತು ವರ್ಷಗಳ ಹಿಂದೆ ತಾನು ಮಾಡಿದ ಪಾಪವೇ ಇವಳಿಗೆ ಸುತ್ತಿಕೊಂಡು ಹೊಡೆಯುತ್ತಿದೆಯಾ? ಇವಳನ್ನು ದಂಡಿಸುತ್ತಿದೆಯಾ? ಅಂದು ಅದು ಪಾಪ ಎಂದು ತೋರಲಲೇ ಇಲ್ಲವಲ್ಲ. ಅವತ್ತು ಅದು ಸರಿಯಾದ ನಡೆಯೇ ಎನಿಸಿತ್ತಲ್ಲ.. ಒಂದೇ ಸಮನೆ ಮಿದುಳಿನಲ್ಲಿ ಪ್ರಶ್ನೆಗಳ ಸರಮಾಲೆ.

ರಾಗಿಣಿಗೆ ಮದುವೆ ಆಗಿ ಮೂರು ನಾಲ್ಕು ವರ್ಷಗಳಾಗಿ, ಮೊಮ್ಮಗು ಬರೋ ಏನೊಂದು ಸೂಚನೇನು ಇಲ್ಲ, ಈಗೆಲ್ಲಾ ಓದು, ಉದ್ಯೋಗ, ಉದ್ಯೋಗದಲ್ಲಿ ಸೆಟ್ಲ್ ಆಗಬೇಕು ಅದು ಇದೂ ಅಂತಾ ನೂರೆಂಟು ಕೊಕ್ಕೆಗಳನ್ನು ಹಾಕ್ತಾ ಮದುವೇಗೆ ೨೫ ವರ್ಷಕ್ಕೆ ಕಡಿಮೆ ಹೂಂ ಅನ್ನದೇ ಸತಾಯ್ಸೋದು. ಆಮೇಲೆ ಒಂದೆರಡು ವರ್ಷ ಫ್ರೀಯಾಗಿರಬೇಕು ಅಂತಾ ಹಾರಾಡೋದು. ಆ ಮೇಲೆ ದೇವರು ಕಣ್ಬಿಟ್ಟು ಎಲ್ಲಾ ನೇರ್ಪಾದರೆ ಸರಿ. ಇಲ್ಲಾಂದರೆ ತಾನೇ ಬರೋದು ಕಷ್ಟ. ಎಲ್ಲರ ಹಾಗೆ ಶಿವಾನಿ ಹಾಗೂ ರಾಗಿಣಿ ಅತ್ತೆ ಇಬ್ಬರೂ ಒಂದ್ಸಲ ಡಾಕ್ಟ್ರಿಗೆ ತೋರಿಸೋ ಸಲಹೆ ಕೊಟ್ಟರು. ಹೋಗಿಯೂ ಬಂದ್ರು. ಸದ್ಯ ಇಬ್ಬರಿಗೂ ಏನೂ ಗಂಭೀರವಾದ ಸಮಸ್ಯೆ ಇಲ್ಲ ಅಂತಾ ನಿರಾಳ ಆದ್ರೂ, ಎಲ್ಲೋ ಒಂದು ಕಡೆ ಆತಂಕವೂ ಆಗ್ತಿತ್ತು, ಹಾಗಿದ್ರೆ, ಎಲ್ಲಾ ಸರಿಯಿದ್ರೆ ಇಲ್ಲಿವರೆಗೆ ಯಾಕೆ ಆಗಲಿಲ್ಲ? ಏನು ಕಾರಣ? ಈ ಯೋಚನೆ ಮನವನ್ನು ಕುಟುಕುತ್ತಲೇ ಇತ್ತು. ಸಮಸ್ಯೆ ಇದೆ ಅಂದರೆ ನಿವಾರಿಸೋ ಉಪಾಯಾನಾದ್ರೂ ನೆಚ್ಚಿಕೊಂಢಿರಬಹುದು. ಆಸೆಗೆ, ನಿರೀಕ್ಷೆಗೆ ಒಂದು ಕಾರಣವಿರುತ್ತೆ. ಆದರೆ ಸಮಸ್ಯೆನೇ ಇಲ್ಲಾ ಅಂದ ಮೇಲೆ ಸಹಜವಾಗಿ ಆಗಬೇಕಾದ್ದು ಯಾಕೆ ಆಗ್ತಾ ಇಲ್ಲ, ಎನ್ನುವ ಚಿಂತೆ. ದೇವರು ದಿಂಡರು, ವ್ರತ ಕಥೆ - ಈ ಯಾವುದನ್ನು ಮಾಡೋಕೂ ರಾಗಿಣಿಗೆ ಮನಸ್ಸಿಲ್ಲ. ಏನಾದ್ರೂ ಹೇಳಿದರೆ- "ಯಾಕೆ ದೇವರಿಗೆ ಗೊತ್ತಾಗಲ್ಲವಾ? ನಾವು ಅಪ್ಲಿಕೇಶನ್ ಹಾಕಿದ್ರೇನಾ ಅವನು ಸ್ಯಾಂಕ್ಷನ್ ಮಾಡೋದು? ನಮ್ಮನ್ನು ಸರಿಯಾಗೇ ಪ್ರೊಡ್ಯೂಸ್ ಮಾಡಿ ಭೂಮಿಗೆ ಕಳಿಸಿದ್ದಾನೆ ತಾನೇ? - ಅವಳ ಪ್ರಶ್ನೆಗಳು ಪಟಾಕಿ ಸರದಂತೆ ಸಿಡಿಯೋಕೆ ಶುರು ಆಗ್ತಿದ್ದವು. ಅವಳಿಗೆ ಕೃತಕ ರೀತಿಯ ಚಿಕಿತ್ಸೆಗೆ ಹೋಗೋದು ಇಷ್ಟವಿಲ್ಲ. ಇಂಟರ್ನೆಟ್ ಲ್ಲಿ ಸಿಗೋ ರಾಶಿ ರಾಶಿ ಮಾಹಿತಿಗಳನ್ನು ಓದಿ ಒಂದು ತೆರನಾದ ಭಯವೂ ಸೇರಿಕೊಂಡಿತ್ತೋ ಏನೋ, ಏನಾದರೂ ಹೇಳಿದರೆ ಕೇಳಿದರೆ ಹೀಗೆ ಒರಟೊರಟಾಗಿ, ವಿತಂಡವಾದ ಹೂಡಿ ಬಾಯಿ ಮುಚ್ಚಿಸುವ ಉಪಾಯ ಕಂಡು ಕೊಂಡಿದ್ಲು ಅವಳು. ಅದನ್ನು ಕಂಡಾಗ ಶಿವಾನಿಗೆ ಕರಳು ಚುರ್ ಎನ್ನುತ್ತಿತ್ತು. ಯಾರಲ್ಲೂ ಹೇಳಿಕೊಳ್ಳಲಾಗದ ಉಮ್ಮಳ. ಅವಳು ಗಂಡನ ಜೊತೆ ಮಾತಾಡಿದರೆ ಪ್ರಯೋಜನವೇನೂ ಆಗ್ತಾ ಇರಲಿಲ್ಲ. ಅವರದ್ದು ಒಂದೇ ಉತ್ತರ - ನ್ಯಾಚುರಲ್

ಆಗಿ ಆಗ್ಲಿಲ್ಲ ಅಂದ್ರೆ, ಇಷ್ಟೊಂದು ವೈದ್ಯ ವಿಜ್ಞಾನ ಮುಂದುವರೆದಿದೆಯಲ್ಲಾ, ಸಹಾಯ ತೆಗೋಬೇಕು. ಅವರೇನು ತಿಳಿದೇ ಇರೋರೇ? ಅಂತಾ ಹೇಳ್ತಾರೆ ಅಂತಾ ಗೊತ್ತು. ಯಾವುದಕ್ಕೂ ತಲೆಕೆಡಿಸಿಕೊಳ್ಳದೇ ಇರೋದೆ ಅವರ ಜಾಯಮಾನ. ಮಕ್ಕಳಾಗದ ವಿಷಯ ಹೆಣ್ಣನ್ನು ತೀವ್ರವಾಗಿ ಕಾಡೋ ಅಷ್ಟು ಗಂಡಸರನ್ನು ಕಾಡೋಲ್ಲವೋ ಏನೋ.

ಈಗೀಗ ಪಾಪ, ರಾಗಿಣಿಗೂ ಬೇಜಾರು. ನನ್ನ ಜೊತೆ ಮದುವೆಯಾದವರಿಗೆಲ್ಲಾ, ಅಷ್ಟು ಸುಲಭವಾಗಿ ಸಹಜವಾಗಿ ನಡೀತಿರೋದು ನನ್ನ ಜೀವನದಲ್ಲಿ ಆಗ್ತಾ ಇಲ್ಲವಲ್ಲ ಅಂತಾ. ಇಲ್ಲಿ ನಮ್ಮನೆಗೆ ಬಂದಾಗ, ರಾಗಿಣಿ ನ್ಯೂಸ್ ಪೇಪರಲ್ಲಿ ಸುತ್ತಿ ಕಸದ ಬುಟ್ಟಿಗೆ ಪ್ಯಾಡ್ ಗಳನ್ನು ಎಸೆಯುವಾಗ ಎಷ್ಟೋ ಬಾರಿ ಶಿವಾನಿಗೆ ಇದು ತನ್ನ ಪಾಪ ಕರ್ಮದ ಫಲವೇ ಋತುನಷ್ಟದ ರೂಪದಲ್ಲಿ ಇವಳನ್ನು ಕಾಡುತ್ತಿದೆ ಅನ್ನಿಸುತ್ತಿತ್ತು. ಮನಸ್ಸು ತಡೆಯಲಾರದೆ ಪತಿ ಮಹೇಶನೊಟ್ಟಿಗೆ ಹೇಳಿಕೊಂಡು ಅತ್ತರೆ ಅವನು “ನಿನಗೆಲ್ಲೋ ಹುಚ್ಚು. ಯಾವುದಕ್ಕೆ ಯಾವುದನ್ನು ತಾಳೆ ಹಾಕ್ತಿಯಾ? ಸುಮ್ಮನಿರು“ ಎಂದುಬಿಡುತ್ತಿದ್ದರು. ಆಗ ಹೌದೇನೋ, ನಾನೇ ಸುಮ್ಮನೆ ತಲೆಕೆಡಿಸಿಕೊಳ್ತಾ ಇದ್ದೀನೇನೋ ಎನಿಸಿ ಸುಮ್ಮನಾಗುತ್ತಿದ್ದಳು ಶಿವಾನಿ. ಇಂದು ರಾಗಿಣಿ ಕೇಳಿದ “ಯಾಕೆ ನನಗೆ ಶಿಕ್ಷೆ? ಯಾವ ಕರ್ಮ? - ಪ್ರಶ್ನೆಗಳು ಅವಳ ಒಳಗನ್ನು ಅಲುಗಾಡಿಸಿ ಮತ್ತೆ ಹಳೆಯದನ್ನೆಲ್ಲಾ ಮೇಲಕ್ಕೆತ್ತಿ..... ತಲೆ ಸಿಡಿತ. ಎಲ್ಲೆಲ್ಲೋ ಓದಿದ್ದ ಧರ್ಮಶಾಸ್ತ್ರದ ವಿಷಯಗಳು, ಕೇಳಿದ ಪ್ರವಚನಗಳಲ್ಲಿ ಬಂದ ಸಂಗತಿ ಎಲ್ಲವೂ ಈಗ ಇದರೊಂದಿಗೆ ತಳುಕು ಹಾಕಿಕೊಂಡು, ಹೌದು ಅದೇ ಸತ್ಯ, ಅದೇ ಕಾರಣ ಹೀಗೆ ಏನೊಂದೂ ದೋಷವಿರದ ತನ್ನ ಮಗಳಿಗೆ ಆಗುತ್ತಿರುವುದಕ್ಕೆ. ಏನೇನೇ ಸಾಧನೆ ಮಾಡಿದ್ದರೂ ಹೆಣ್ತನ ತಾಯ್ತನವನ್ನು ಕಂಡಾಗಲೇ, ಜೀವವೊಂದು ಗರ್ಭದಲ್ಲಿ ಮಿಡಿದು ಬೆಳೆಯುವ ಅನುಭವವಾದಾಗಲೇ ಅದಕ್ಕೆ ಸಾರ್ಥಕ್ಯ. ಮಾನವ ತಾನು ಅಮರನಾಗುವ ಉಪಾಯವೇ ಸಂತಾನ. ಈ ಸುಖದಿಂದ ರಾಗಿಣಿ ವಂಚಿತಳಾಗುತ್ತಿರುವುದಕ್ಕೆ ತಾನೇ, ತಾನೇ ಕಾರಣ. ಗುಂಯ್ ಗುಡುವ ವಿಚಾರಗಳು ಶಿವಾನಿಯ ತಲೆತಿರುಗುವಂತಾಗುತ್ತಿತ್ತು.

“ಅಮ್ಮಾ, ಏನಮ್ಮಾ ಹುಳಿ ತಳಹಿಡಿದ ವಾಸನೆ ಬರ್ತಾ ಇದೆ. ಏನ್ ಯೋಚನೆ ಮಾಡ್ತಾ ಇದ್ದೀಯಾ” - ಮಗಳು ಓಡಿ ಬಂದು ಗ್ಯಾಸ್ ಆರಿಸಿದಾಗಲೇ ಇತ್ತಕಡೆ ಗಮನ. ಸರಸರನೆ ಮೇಲುಮೇಲಿನ ಹುಳಿಯನ್ನು ಬೇರೊಂದು ಪಾತ್ರೆಗೆ ತೋಡಿ, ತಳ ಸೀದ ಪಾತ್ರೆಯನ್ನು ತೊಳೆಯಲು ಸಿಂಕಿಗೆ ಹಾಕಿದಳು. ಒಗ್ಗರಣೆ ಹಾಕುವ ಹೊತ್ತಿಗೆ ಬೆಳಗಿನ ತಿಂಡಿ ತಿಂದು ಒಂದು ರೌಂಡ್ ಹೋಗಿದ್ದ ಯಜಮಾನರು ಬಂದರು. ರಾಗಿಣಿನೂ ಕರೆದೆ. ಊಟ ಮಾಡ್ತಿರೋವಾಗ ಯಜಮಾನರು “ಏನಿದು, ಇವತ್ತು ಮತ್ತೆ ಸೀದ ವಾಸನೆ ಬರ್ತಿದೆ ಹುಳಿ. ನಿಮ್ಮಮ್ಮಂಗೆ ಈ ನಡುವೆ ಮನಸ್ಸೆಲ್ಲೋ ಇರತ್ತೆ. ಅದೇನು ಯೋಚನೆನೋ ಕಾಣೆ. ಒಗ್ಗರಣೆ ಸೀಸೋದು, ರೊಟ್ಟಿ ತಟ್ಟಿ ಮರೆಯೋದು, ಉಪ್ಪೇ ಹಾಕ್ದೇ ಇರೋದು, ಎಲ್ಲಾ ಜಾಸ್ತಿಯಾಗ್ತಾ ಇದೆ. ಅಂತಾ ಸ್ವಲ್ಪ ಕಿಚಾಯಿಸೋ ಹಾಗೆ ಮಾತಾಡ್ತಾ ಊಟ ಮುಗಿಸಿದರು. ಮಧ್ಯೆ ರಾಗಿಣಿ ಹತ್ತಿರಾನೂ ಅವರ ಮನೆ ಫಂಕ್ಷನ್ ಬಗ್ಗೆ ವಿಚಾರಿಸ್ತಾ ಊಟ ಸಾಗಿತ್ತು. ಅಷ್ಟು ಹೊತ್ತಿಗೆ ರಾಗಿಣಿಯ ಮನಸ್ಸೂ ಸ್ವಲ್ಪ ತಹಬಂದಿಗೆ ಬಂದಿತ್ತು. ಅವರಪ್ಪನ ಮಾತಿಗೆ ಎಗರಾಡದೇ ಸಮಾಧಾನವಾಗಿಯೇ ಉತ್ತರಿಸಿದಳು. ಜೊತೆಗೆ “ಅಮ್ಮಾ, ವಿನಯ್ ಮೆಸೇಜ್ ಮಾಡಿದ್ದಾರೆ. ಅವರೆಲ್ಲಾ ಹೊರಟಿದ್ದಾರಂತೆ. ಸಂಜೆ ಹೊತ್ತಿಗೆ ಇಲ್ಲಿಗೆ ಬರ್ತಾರಂತೆ. ನನ್ನ ಕರೆದುಕೊಂಡು ಹೋಗೋಕೆ. ಸೋ, ಸಾಯಂಕಾಲ ನಾನು ಹೊರಡ್ತೀನಿ. ಅಪ್ಪಂಗೆ ಸರಿಯಾಗಿ ಅಡುಗೆ ಮಾಡಿ ಹಾಕು ಆಯ್ತಾ? ಇವತ್ತು ನಾನು ಇಲ್ಲದೆ ಹೋಗಿದ್ದರೆ ಹುಳಿ ಹಲ್ವಾ ಆಗಿರ್ತಿತ್ತು”. ಎಂದು ನಕ್ಕಳು. ಒಂದು ಕ್ಷಣ ಇವಳೇನಾ ಬೆಳಗ್ಗೆ

ಉರಿಸಿಂಗಿಯಾಗಿ ಬಂದವಳು ಎನಿಸಿತು. ಇಂಥಾ ಜೋವಿಯಲ್ ಹುಡುಗಿಗೆ ದೇವರು ಯಾಕೆ ಅನ್ಯಾಯ ಮಾಡ್ತಿದ್ದಾನೆ? 'ನೀನೇ ಅದಕ್ಕೆ ಕಾರಣ' ಎಂಬ ಉತ್ತರವನ್ನು ಯಾರೋ ಕೊಟ್ಟಂತಾಗಿ, ಪೆಟ್ಟು ಬಿದ್ದಂತೆ ಬೆಚ್ಚಿ ತಿರುಗಿ ನೋಡಿದರೆ- ಅಯ್ಯೋ ಅದು ತನ್ನದೇ ಒಳಮನಸ್ಸಿನದೇ ದನಿ. ತಲೆ ಕೊಡವಿ ವಾಸ್ತವಕ್ಕೆ ಬಂದಳು. " ರಾಗಿಣಿ, ನಿಮ್ಮ ಅತ್ತೆ ನಿಮ್ಮೆಜಮಾನರು ಎಲ್ಲಾ ಇಲ್ಲೇ ಊಟ ಮಾಡಿಕೊಂಡು ಮನೆಗೆ ಹೋಗಿ. ಇನ್ನು ರಾತ್ರಿಗೆ ಅಲ್ಲಿ ಹೋಗಿ ಏನು ಮಾಡ್ತಾರೆ ನಿಮ್ಮತ್ತೆ. ಚಪಾತಿ ಹಿಟ್ಟು ಕಲಸ್ತೀನಿ, ಒಂದು ಪಲ್ಯ ಮಾಡಿದ್ರಾಯ್ತು " ಎಂದೆ. "ಸರಿ ಹಾಗೇ ಮೆಸೇಜ್ ಕಳಿಸ್ತೀನಿ ಬಿಡು. ತರಕಾರಿ ಏನಿದೆ? ಕೊಡು ಹೆಚ್ಚಿ ಕೊಡ್ತೀನಿ" ಅಂತಾ ಮೊಬೈಲ್ನಲ್ಲಿ ಪಟಪಟ ಅಂತಾ ಸಂದೇಶ ಕಳಿಸ್ತಾನೇ ಒಳಕ್ಕೆ ಬಂದ್ಲು. ಹೇಳಿದಂತೆ ಅವರೆಲ್ಲಾ ಬಂದು ಊಟಮಾಡಿ ಮನೆಗೆ ಹೋದ ಮೇಲೆ ಅಡುಗೆ ಮನೆ ಕ್ಲೀನ್ ಮಾಡಿ ಮಲಗಿದಳು ಶಿವಾನಿ. ನಿದ್ದೆ ಮಾರು ದೂರ. ಮತ್ತೆ ಸುತ್ತುವ ಯೋಚನಾ ತರಂಗಗಳು.

ಕಣ್ಣು ತಾಕುವಂತ ಜೋಡಿ ರಾಗಿಣಿ-ವಿನಯರದು. ಮದುವೆಯಾದಾಗ ಎಷ್ಟು ಆಸೆಯಾಗಿದ್ದರು ಎಲ್ಲರೂ, ಇವರಿಬ್ಬರಿಗೆ ಹುಟ್ಟೋ ಮಗು ಎಷ್ಟು ಮುದ್ದಾಗಿರತ್ತೆ ಅಂತಾ. ಆದ್ರೆ ಆಗುತ್ತಿರುವುದೇನು? ತಾನು ಮಾಡಿದ ಪಾಪ ತನ್ನ ಮಗಳ ಮೂಲಕ ಅನುಭವಿಸುವಂತೆ ಮಾಡುತ್ತಿದೆಯೇ? ಮುತ್ತಜ್ಜಿ ಹೇಳುತ್ತಿದ್ದರಲ್ಲಾ, "ಇದು ಕಲಿಯುಗ. ಮಾಡಿದ ಪಾಪವೆಲ್ಲಾ ದೋಸೆ ತಿರುವಿಹಾಕಿದಂತೆ, ಇಲ್ಲೇ ಕಾಡತ್ತೆ" - ಅಂತಾ ಅದು ಸತ್ಯವಾಗ್ತಿದೆಯೇ? ತಾನು ಮಾಡಿದ್ದು ಪಾಪವೇ? ಆದರೆ ಅವತ್ತು ಯಾಕೆ ಪಾಪ ಅನ್ನಿಸಲಿಲ್ಲ? ಪರಿಸ್ಥಿತಿ ನಿಭಾಯಿಸಲಾಗದಂತದಾಗಿತ್ತೇ? ಈಗ ನೋಡಿದರೆ ಸುಮ್ಮನಿರ ಬಹುದಿತ್ತು ಎನಿಸುತ್ತಿದೆ, ಗರ್ಭ ತೆಗೆಸಬಾರದಿತ್ತು, ತಪ್ಪು ಮಾಡಿದೆ. ಪಾಪ ಮಾಡಿದೆ. ಅದೇ ಪಾಪವೇ ಇವತ್ತು ರಾಗಿಣಿಯ ಬದುಕಿನಲ್ಲಿ ಶಿಕ್ಷೆಯಾಗಿದೆಯೋ ಏನೋ.

ಇದೇ ಈ ರಾಗಿಣಿ ಆರು ತಿಂಗಳ ಮಗು. ಹಿಂದೆಯೇ ಮತ್ತೊಂದು ಬಾರಿ ಬಸರಿ ಎಂದು ಗೊತ್ತಾದಾಗ ಆಕಾಶವೇ ತಲೆ ಮೇಲೆ ಬಿದ್ದಂತಾಗಿತ್ತು ಶಿವಾನಿಗೆ. ಇಷ್ಟು ಬೇಗ ಎರಡನೇ ಮಗುವೇ? ಸುಧಾರಿಸೋದು ಹೇಗೆ? ಬಾಣಂತನ ಮುಗಿಸಿ ಅಮ್ಮ ಅಪ್ಪ ಕರಕೊಂಡು ಬಂದು ಬಿಟ್ಟು ಹೋದ ಮೇಲೆ ಒಬ್ಬಳೇ ಮಗು, ಮನೆಕೆಲಸ, ಸ್ವಲ್ಪ ಮುಂಗೋಪಿ ಗಂಡ - ಎಲ್ಲವನ್ನೂ ಸುಧಾರಿಸೋದರಲ್ಲಿ ಹೈರಾಣಾಗಿದ್ದಳು. ಜೊತೆಗೆ ಹಾಲೂಡಿಸೋವಾಗಿರೋ ಸಹಜವಾದ ವೀಕ್ ನೆಸ್, ಬಳಲಿಕೆಗಳು ಬೇರೆ. ಮಗುವನ್ನು ನೋಡಿಕೊಳ್ಳೋದು ಅಂದ್ರೆ, ಓದಿ ಓದಿ ಡಿಗ್ರಿ ಗಳಿಸಿದಷ್ಟು ಸುಲಭವಲ್ಲ ಅನ್ನೋದು ಅನುಭವಕ್ಕೆ ಬಂದಿತ್ತಲ್ಲಾ. ಹೀಗಿರಬೇಕಾದರೆ ಇಷ್ಟು ಬೇಗ ಇನ್ನೊಂದು ಮಗು ಖಂಡಿತಾ, ಖಂಡಿತಾ ಬೇಕಿರಲಿಲ್ಲ. ಅಬ್ಬಾ! ಸಾಧ್ಯವೇ ಇಲ್ಲ ಎನಿಸಿತ್ತು ಆಗವಳಿಗೆ. ತನ್ನ ಸುಖಕ್ಕೆ ಸ್ವಲ್ಪ ಅಡ್ಡಿಯೇ ಆಗುವಂತ ಅದು ಅವಳ ಗಂಡನಿಗೂ ಹಿತವಲ್ಲದ ಸುದ್ದಿಯೇ ಆಗಿತ್ತು. ಹೇಳೋಕೆ ಕೇಳೋಕೆ ಮನೇಲಿ ದೊಡ್ಡೋರು ಅಂತಾ ಯಾರೂ ಇರಲಿಲ್ಲ. ಸರಿ ಅವರವರದೇ ನಿರ್ಧಾರ.   ತೆಗೆಸಿ ಬಿಡೋಣ. ಮುಂದೆ ಬೇಕು ಅಂದರೆ ನೋಡೋಣ ಅಂತಾ ಹೋಗಿ ತೆಗೆಸಿ ಬಂದರು. ಆ ಹೊತ್ತಿನ ಸಮಸ್ಯೆಯೇನೋ ಪರಿಹಾರವಾಯ್ತು.

ಶಿವಾನಿಯ ಮನಸ್ಸೇನೋ ಸ್ವಲ್ಪ ದಿನ ಕೈಕಾಲು ಮೂಡಿ ಹೊರ ಬರಬೇಕಾದ ಜೀವಂತ ಗೊಂಬೆಯೊಂದನ್ನು ಕೊಂದೆನಲ್ಲಾ ಎಂದು ನೋಯ್ತಾ ಇತ್ತು, ಅದರಲ್ಲೂ ಮುದ್ದು ಮುದ್ದಾದ ರಾಗಿಣಿಯ ಆಟ ಪಾಟವನ್ನು ಕಂಡಾಗಂತೂ

ಅಸ್ಪಷ್ಟವಾದ ಆಕಾರದ ಒಂದು ಮಾಂಸದ ಮುದ್ದೆಯೇ ಕಣ್ಮುಂದೆ ಬಂದಂತಾಗ್ತಾ ಇತ್ತು. ಕ್ರಮೇಣ ಸಂಸಾರದ ಜವಾಬ್ದಾರಿಗಳು ಹೆಚ್ಚಿ ಆ ಕಡೆ ಗಮನ ಕಡಿಮೆಯಾಯ್ತು. ಕಾಲನೆಂಬ ವೈದ್ಯ ಹೆಚ್ಚೂ ಕಡಿಮೆ ಮೂರು ದಶಕಗಳ ಹಿಂದಿನ ಘಟನೆಯನ್ನು ಪೂರ್ತಿಯಾಗಿ ಸ್ಮೃತಿಪಟಲದಿಂದ ಒರೆಸಿಯೇ ಹಾಕಿದ್ದ ಎನ್ನಬಹುದು.

ಅಳಿಸಿಯೇ ಹೋಗಿತ್ತು ಎಂದುಕೊಂಡದ್ದು, ಶಿವಾನಿ ಎಷ್ಟೋ ವರ್ಷಗಳ ಬಳಿಕ ಗೆಳತಿಯ ಬಲವಂತದಿಂದ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಗೆ ಸೇರಿ, ಪಠ್ಯವಾಗಿ ಓದಿದ ಸ್ಮೃತಿ ಗ್ರಂಥವು ಭ್ರೂಣಹತ್ಯೆಯನ್ನು ಮಹಾ ಪಾಪ ಎಂದು ಹೇಳಿರುವುದನ್ನು ಕಂಡು ಅವಳು ನಡುಗಿ ಬಿಟ್ಟಿದ್ದಳು. ಇದನ್ನು ಓದುವವರೆಗೂ ಅವಳಿಗೆ ತಾನು ಮಾಡಿದ್ದ ಕೆಲಸದ ಪಾಪ ಪುಣ್ಯಗಳ ಬಗೆಗೆ ಯೋಚನೆಯನ್ನೇ ಮಾಡಿರಲಿಲ್ಲ. ಆಗ ಭ್ರೂಣವನ್ನು ತೆಗೆಸಿದಾಗ, ಸ್ವಲ್ಪ ದಿನ ಮನಸ್ಸಿಗೆ ಬೇಜಾರಾಗಿತ್ತು. ಅದು ತಾಯಿಯೊಬ್ಬಳಿಗೆ, ಹೆಣ್ಣೊಬ್ಬಳಿಗೆ ಮಗುವನ್ನು ಕಳೆದುಕೊಂಡಾಗ ಆಗುವ ನೋವಷ್ಟೇ. ಆದರೆ ನಮ್ಮ ಧರ್ಮಶಾಸ್ತ್ರಗಳು ಇದನ್ನು ಪಂಚಮಹಾಪಾತಕಗಳು ಎಂದಿರುವುದನ್ನು ಓದಿ, ತಿಳಿದವರೊಡನೆ ಚರ್ಚಿಸಿದಳು. ರಾಮಾಯಣ, ಮಹಾಭಾರತಗಳನ್ನೆಲ್ಲಾ ತಿರುವಿ ಹಾಕಿದಳು. ಎಲ್ಲಾ ಕಡೆಯೂ ಇದನ್ನೇ ಹೇಳಿರುವುದು ನೋಡಿ ಪಾಪಪ್ರಜ್ಞೆ ಕಾಡತೊಡಗಿ, ಮನಸ್ಸು ವಿಲವಿಲ ಒದ್ದಾಡತೊಡಗಿತು. ಜೊತೆಗೆ ತಂದೆ ತಾಯಿಯರ ಪಾಪಕರ್ಮಗಳು ಮಕ್ಕಳನ್ನು ಕಾಡುತ್ತವೆ ಎಂಬ ವಿಷಯ ತಿಳಿದ ಮೇಲಂತೂ ಇನ್ನೂ ಮದುವೆಯಾಗಿರದಿದ್ದ ಮಗಳು ರಾಗಿಣಿಗೆ ಈ ಯಾವ ಪಾಪವೂ ತಟ್ಟದಿರಲಿ ಅಂತಾ ದಿನವೂ ಬೇಡದ ದೇವರಿಲ್ಲ. ಆದರೆ ಅವಳ ಬೇಡಿಕೆಯನ್ನು ದೇವರು ಕೇಳಿಸಿ ಕೊಂಡಿರಲಿಲ್ಲ. ಇಲ್ಲದಿದ್ದರೆ ರಾಗಿಣಿಗೆ ಈ ಶಿಕ್ಷೆ ಯಾಕೆ? ಎಂದೋ ಘಟಿಸಿದ ಪಾಪಕ್ಕೆ ಏನು ಪರಿಹಾರ? ಏನಾದರೊಂದು ಪರಿಹಾರವಿರಲೇ ಬೇಕಲ್ಲವೇ? ತಿಳಿದೋ ತಿಳಿಯದೆಯೋ ಮನುಷ್ಯ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಅಂತಾ ಧರ್ಮಶಾಸ್ತ್ರಗಳು ಹೇಳಿವೆ ಅಂತಾರಲ್ಲ? ಹಾಗಿದ್ದರೆ ಇದಕ್ಕೂ ಇರಲೇ ಬೇಕಲ್ಲವೇ? ದಶರಥ ಮಹಾರಾಜನಿಗೆ ಮಕ್ಕಳಾಗದಂತೆ ಇದ್ದ ಯಾವುದೋ ತಡೆ ದೋಷವನ್ನು ಕಳೆಯಲೆಂದೇ ತಾನೇ ಮೊದಲು ಅಶ್ವಮೇಧ ಮಾಡಿಸಿದ್ದು ವಸಿಷ್ಠರು? ಆಮೇಲೆ ತಾನೇ ಪುತ್ರಕಾಮೇಷ್ಟಿ ನಡೆದದ್ದು. ಪರಿಹಾರ ಅಂತ ಇದ್ದರೆ ಎಷ್ಟೇ ಕಷ್ಟವಾಗಲಿ ಅದನ್ನು ತಾನು ಮಾಡಿ ಪಾಪ ಕಳಕೋಳ್ತೀನಿ.

ನಾಳೆ ಮನೆ ಪುರೋಹಿತರು ಸುಬ್ರಹ್ಮಣ್ಯ ಶಾಸ್ತ್ರಿಗಳನ್ನಾದರೂ ಹೋಗಿ ಕೇಳಿ ಬರ್ತೀನಿ. ಕಾಲದಿಂದಲೂ ನಮ್ಮನೆ ಪುರೋಹಿತ್ರು ಸುಬ್ರಹ್ಮಣ್ಯ ಶಾಸ್ತ್ರಿಗಳು, ಬರೀ ದುಡ್ಡಿನಾಸೆಗೆ ಪೌರೊಹಿತ್ಯ ಮಾಡ್ತೋರಲ್ಲ. ಸಂಸ್ಕೃತ ಓದ್ಕೊಂಡೋರು, ಅವರನ್ನೇ ಕೇಳೋದು, ಏನು ಪ್ರಾಯಶ್ಚಿತ್ತ ಬೇಕಾದರೂ ಮಾಡ್ಕೋಳ್ಳೋಕ್ಕೂ ತಯಾರು. ನನ್ನ ಮಗಳಿಗೆ ಈ ಪಾಪ ತಟ್ಟೋದು ಬೇಡ. ನನ್ನ ಕರ್ಮದ ಮೂಟೆಯನ್ನು ಅವಳು ಹೊರೋದು ಬೇಡ . . ಒಂದು ನಿರ್ಧಾರಕ್ಕೆ ಬಂದ ಶಿವಾನಿ ಬೆಳಕು ಹರಿಯುವುದನ್ನೇ ಕಾಯುತ್ತಾ ಮಲಗಿದಳು.

******

ಪರಮಾತ್ಮನ ಪಟಕ್ಕೊಂದು ಜಾಗ

ಟಿ.ಎಸ್. ಶ್ರವಣಕುಮಾರಿ

ವೆಂಕಮ್ಮ ದೊಡ್ಡಮ್ಮನ ವೈಕುಂಠ ಸಮಾರಾಧನೆಯಲ್ಲಿ ಅಲ್ಲಲ್ಲಿ ಗುಂಪುಗೂಡಿ ಮಾತಾಡುತ್ತಿದ್ದವರ ನಡುವೆ ನಮ್ಮ ಭಾಗ್ಯ ಚಿಕ್ಕಮ್ಮ ಬಂದ ತಕ್ಷಣ ಇನ್ನೊಬ್ಬ ದೊಡ್ಡಮ್ಮನ ಇಬ್ಬರು ಹೆಣ್ಣುಮಕ್ಕಳು ಪೂರ್ಣಿಮಾ, ಪ್ರಶಾಂತಿ ಅಲ್ಲಿಂದ ಜಾಗ ಖಾಲಿ ಮಾಡಿ ಇನ್ನೊಂದು ಗುಂಪಿಗೆ ಸೇರಿಕೊಳ್ಳುತ್ತಿದ್ದದ್ದನ್ನು ಅದು ಹೇಗೋ ಗಮನಿಸಿಬಿಟ್ಟೆ. ಚಿಕ್ಕಮ್ಮನೆಂದರೆ ಅವರಿಬ್ಬರಿಗೂ ಪ್ರೀತಿಯೇ. ಯಾವಾಗಲೂ ನಗುನಗುತ್ತಾ ಅವಳೊಂದಿಗೆ ಹರಟುತ್ತಿದ್ದವರು ಈಗೇಕೆ ಅವಳನ್ನು ತಪ್ಪಿಸಿ ಓಡುತ್ತಿದ್ದಾರೆ, ಏನು ಕೋಪ ಎಂದು ಅರ್ಥವಾಗದೆ ಕೇಳಿಯೇಬಿಟ್ಟೆ. ತಕ್ಷಣ ಜೋರಾಗಿ ನಕ್ಕವರು "ಇನ್ನೇನೂ ಇಲ್ಲ; ಮೊನ್ನೆ ಮಂತ್ರಾಲಯದಿಂದ ಬಂದಳಂತೆ. ಭಕ್ತಿಯಿಂದ ರಾಯರ ಒಂದಷ್ಟು ಮೂರ್ತಿಗಳನ್ನು, ಫೋಟೋಗಳನ್ನು ಎಲ್ಲರಿಗೂ ಕೊಡೋಣ ಅಂತ ತಂದಿದಾಳೆ. ಪರಿಮಳ ಪ್ರಸಾದವಾಗಿದ್ದರೆ ಕಣ್ಣಿಗೊತ್ಕೊಂಡು ಬಾಯಿಗೆ ಹಾಕ್ಕೊಂಡು ಕೈ ಮುಗಿದು ಬಿಡಬಹುದಿತ್ತು. ಅವಳು ಫೋಟೋನೋ, ವಿಗ್ರಹಾನೋ ಕೊಟ್ಟುಬಿಟ್ರೆ ಬೇಡ ಅನ್ನೋದ್ಹೇಗೆ; ಇರೋ ಪುಟ್ಟ ದೇವರ ಗೂಡಲ್ಲಿ ಜಾಗ ಮಾಡೋದ್ಹೇಗೆ ಹೇಳು. ಹೇಳೀಕೇಳೀ ರಾಯರು ಬೇರೆ. ನಮ್ಮಮ್ಮನ ಪರಮಾಪ್ತ ಪರಮಾತ್ಮ. ಅದಕ್ಕೇ ಅವಳು ತಂದಿರೋ ಸರಕೆಲ್ಲಾ ಖಾಲಿಯಾದ್ಮೇಲೆ ಮಾತಾಡ್ಸೋಣಾಂತ" ಎಂದಾಗ ನಾನೂ ನಗುತ್ತಿರುವಾಗಲೇ ಚಿಕ್ಕಮ್ಮ ಇತ್ತಕಡೆಯೇ ಬರುತ್ತಿದ್ದದ್ದನ್ನು ಕಂಡವರು ಮೆಲ್ಲನೆ ಯಾರೋ ಬಂದವರನ್ನು ಎದುರುಗೊಂಡು ಮಾತನಾಡಿಸುವ ನೆಪದಲ್ಲೆದ್ದು ಹೊರಟರು.

"ಏ! ಅವ್ರಿಬ್ರೂ ಎಲ್ಹೋದ್ರು? ಅವ್ರಮ್ಮ ರಾಯರ ದೊಡ್ಡ ಭಕ್ತೆ. ಅದಕ್ಕೇ ಇಬ್ರಿಗೂ ಕೊಡೋಣಾಂತ ಮಂತ್ರಾಲಯದಿಂದ ತಂದಿದ್ದ ಎರಡು ಮೂರ್ತಿಗಳನ್ನ ಎತ್ತಿಟ್ಕೊಂಡಿದೀನಿ. ಆಗ್ಲಿಂದ್ಲೂ ಕೈಗೇ ಸಿಗ್ತಿಲ್ಲ. ಹೋಗೋಷ್ಟರಲ್ಲಿ ಹೇಗಾದ್ರೂ ಹಿಡಿದ್ ಕೊಡ್ತೀನಿ" ಎಂದಾಗ ನಗು ಬಂದರೂ ತಡೆದುಕೊಂಡೆ. ಅದೂ ಇದೂ ಮಾತಾಡುತ್ತಾ ಪಕ್ಕದಲ್ಲೇ ಕುಳಿತವಳು, ಸ್ವಲ್ಪ ಹೊತ್ತಿನಲ್ಲೇ ತನ್ನ ಚೀಲದಲ್ಲಿ ಕೈಹಾಕಿ ಹುಡುಕಿ "ತೊಗೋ ನಿಂಗೂ ಒಂದು ಕೊಡ್ತಿದೀನಿ. ನಿನ್ ಪುಣ್ಯ, ಹೇಗೋ ಇನ್ನೊಂದು ಉಳ್ಕೊಂಡಿದೆ. ರಾಯರ ಅನುಗ್ರಹ ನಿನ್ನ ಮೇಲಿದೆ. ಪ್ರತಿ ಗುರುವಾರ ಇದ್ರ ತಲೆ ಮೇಲೊಂದು ಹೂವಿಟ್ಬಿಡು ಸಾಕು" ಎನ್ನುತ್ತಾ ಮೂರ್ತಿಯನ್ನು ಕಣ್ಣಿಗೊತ್ತಿಕೊಂಡು ನನ್ನ ಕೈಮೇಲಿಟ್ಟು ಹೊರಟಾಗ ಅವರಿಬ್ಬರ ಮಾತಿನ ಮಥಿತಾರ್ಥ ನನ್ನ ತಲೆಗೆ ಹೊಳೆದು ಕುಸಿದು ಕುಳಿತೆ. ಮನಸ್ಸಿನಲ್ಲೇ ನನ್ನ ಪುಟ್ಟ ದೇವರಗೂಡನ್ನೊಮ್ಮೆ ಅವಲೋಕಿಸಿ ವಿಗ್ರಹ ಪ್ರತಿಷ್ಠಾಪನೆಗೆ ಯಾವ್ಯಾವ ದೇವರನ್ನು ಎಲ್ಲೆಲ್ಲಿಗೆ ಸರಿಸಿ ಜಾಗ ಮಾಡಿಕೊಳ್ಳಬೇಕು ಎಂದು ನನಗೂ ಚಿಂತೆ ಯಾಗತೊಡಗಿದ್ದು ನಿಜ.

ಮೊದಲ ಪಂಕ್ತಿಯಲ್ಲೇ ಊಟ ಮಾಡಿ ಕೈತೊಳೆದುಕೊಂಡು 'ಸಧ್ಯ ಇನ್ನು ತಪ್ಪಿಸಿಕೊಂಡೆವು' ಎಂದು ಹೊರಟಿದ್ದ ಪೂರ್ಣಿಮಾ, ಪ್ರಶಾಂತಿಯರನ್ನು ಎಲೆ ಅಡಿಕೆ ತಟ್ಟೆಯಿಂದ ಒಂದಿಷ್ಟು ಅಡಿಕೆಯನ್ನು ಬಾಯಿಗೆಸೆದುಕೊಂಡು ಎಲೆಗೆ ಸುಣ್ಣ ಹಚ್ಚುತ್ತಿರುವಾಗ ಭಾಗ್ಯ ಚಿಕ್ಕಮ್ಮ ಹಿಡಿದುಬಿಡಬೇಕೆ?! "ಅಬ್ಬಾ, ಅಂತೂ ಈಗ ಕೈಗೆ ಸಿಕ್ರಲ್ಲ. ಅದೇನಷ್ಟವಸರ ಮನೆಗೆ ಓಡಕ್ಕೆ. ಬಂದಾಗ್ನಿಂದ ನಿಮ್ಮನ್ನ ಅಟ್ಟಿಸ್ಕೊಂಡು ಓಡಾಡ್ತಿದೀನಿ. ಕಣ್ಣಾಮುಚ್ಚಾಲೆ ಆಡ್ತಿರೋ ಹಾಗಿದೆ. ಕೂತ್ಕೋ ಬನ್ನಿ

ಇಲ್ಲಿ; ನಿಮ್ಗೇಂತ ಏನ್ ತಂದಿದೀನಿ ನೋಡಿ” ಎನ್ನುತ್ತಾ ಅಂತೂ ಅವರಿಬ್ಬರ ಕೈಯಲ್ಲೂ ರಾಯರ ವಿಗ್ರಹವನ್ನು ಕಣ್ಣಿಗೊತ್ತಿಕೊಂಡು ಇಟ್ಟು “ನಿಮ್ಮಂಮ್ಮಂಗೇ ಕೊಟ್ಟಷ್ಟು ಸಮಾಧಾನವಾಯ್ತು ನೋಡೀಗ” ಎನ್ನುತ್ತಾ, ತಂತಾನೆ ಖುಷಿಯನ್ನೂ ಪಟ್ಟುಕೊಂಡಳು ಭಾಗ್ಯ ಚಿಕ್ಕಮ್ಮ. ಅವಳೇನೋ ಧನ್ಯಳಾದಳು. ಇವರಿಬ್ಬರೂ ಇಂಗು ತಿಂದ ಮಂಗ ನಂತಾದರೂ ತೋರಗೊಡದೆ “ಮಕ್ಳು ಸ್ಕೂಲಿಂದ ಬಂದಿರ್ತಾರೆ ಅಂತ ಬೇಗ ಹೊರಟ್ವಿ ಚಿಕ್ಕಮ್ಮ. ಇಷ್ಟು ಅಭಿಮಾನ ದಿಂದ ನಮ್ಮನ್ನ ಜ್ಞಾಪಿಸ್ಕೊಂಡು ತಂದ್ಕೊಟ್ಟಿದೀಯಲ್ಲ. ತುಂಬಾ ಖುಷಿಯಾಯ್ತು” ಎನ್ನುತ್ತಾ ಬಲವಂತದ ನಗೆಯೊಂದಿಗೆ ಅವಳೊಡನೆ ಮಾತನಾಡುತ್ತಾ ಕೂತರು, ಇನ್ನೇನು ತಪ್ಪಿಸಿಕೊಂಡು ಹೋಗುವ ಕಾರಣವಿರಲಿಲ್ಲವಲ್ಲ...

ನಮ್ಮಮ್ಮನಿಗೆ ಹೀಗೆ ಯಾರಾದರೂ ಯಾತ್ರೆ ಹೋದವರು ಪ್ರಸಾದ, ಫೋಟೋ, ವಿಗ್ರಹ... ಇಂಥವೇನನ್ನಾದರೂ ತಂದುಕೊಟ್ಟರೆ ದೇವರೇ ಮನೆಗೆ ನಡೆದು ಬಂದಷ್ಟು ಖುಷಿಯಿಂದ ಕಣ್ಣಿಗೊತ್ತಿಕೊಂಡು ತೆಗೆದುಕೊಂಡು, ಮರುದಿನ ಸ್ನಾನ ಮಾಡಿದ ನಂತರ ಮಡಿಯುಟ್ಟು ಮನೆಯ ದೊಡ್ಡ ದೇವರ ಕೋಣೆಯಲ್ಲಿ ಒಂದು ಜಾಗ ಮಾಡಿ ಅದನ್ನು ಪ್ರತಿಷ್ಠಾಪನೆ ಮಾಡಿ ಅವರು ಕೊಟ್ಟಿದ್ದ ಪ್ರಸಾದವನ್ನೂ ದೇವರ ಮುಂದಿಟ್ಟು ಅಂದಿನ ಪೂಜೆಯ ನಂತರ ನಮ್ಮೆಲ್ಲರಿಗೂ ಭಕ್ತಿಯಿಂದ ವಿತರಣೆ ಮಾಡಿ ಧನ್ಯರಾಗುತ್ತಿದ್ದರು. ತಿರುಪತಿ ಲಡ್ಡುವೋ, ಪಳನಿಯ ಪಂಚಾಮೃತವೋ ಬಂದಿದ್ದರೆ ನಾವೂ ಆ ವಿತರಣೆಗೆ ಕಾಯುತ್ತಿದ್ದೆವೆನ್ನಿ. ಆ ಕಾಲಕ್ಕೆ ಯಾತ್ರೆ ಹೋಗುತ್ತಿದ್ದವರೇ ಬೆರಳೆಣಿಕೆಯಷ್ಟು ಜನ; ಅಷ್ಟು ಕಷ್ಟವಿತ್ತು. ಹಾಗಾಗಿ ತಮ್ಮ ಯಾತ್ರಾ ವೈಭವವನ್ನು ವರ್ಣಿಸಿ ಕೊಟ್ಟ ದೇವರ ಪಟಗಳಿಗೆ, ಪ್ರಸಾದಗಳಿಗೆ ಬಲು ಮೌಲ್ಯವಿತ್ತು. ಈಗ ಏನೂ ಪ್ರಯಾಸವಿಲ್ಲದೆ, ಕುಡಿದ ನೀರಲುಗದಂತೆ ಯಾತ್ರೆ ಮಾಡಿ ಬರುವುದು ಸಾಧ್ಯವಿರುವಾಗ, ಎಲ್ಲರ ಮನೆಗಳಲ್ಲೂ ದೇವರ ಕೋಣೆಗಳು ಮಾಯವಾಗಿ ಮಲಗುವ ಕೋಣೆಗಳು ಹೆಚ್ಚುತ್ತಿರುವಾಗ ಯಾತ್ರೆಗಳಲ್ಲಿ ಹಿರಿಮೆಯಿಲ್ಲ; ತಂದುಕೊಡುವ ಪ್ರಸಾದ ಇತ್ಯಾದಿಗಳಿಗೆ ಅಂದಿನ ಮೌಲ್ಯವಿಲ್ಲ.

ದುರ್ಗದಲ್ಲಿದ್ದ ನಮ್ಮಮ್ಮನ ಹಿರಿಯಕ್ಕ ಚಂದ್ರಮ್ಮ ದೊಡ್ಡ ದೈವಭಕ್ತೆ. ಆಕೆಯ ಭಕ್ತಿಭಾವಕ್ಕೆ ತಲೆಬಾಗಿ ನಮ್ಮ ಸಂಬಂಧಿಕರಲ್ಲಿ ಯಾರು ಯಾವುದೇ ಯಾತ್ರೆಗೆ ಹೋದರೂ ಮರೆಯದೆ ಆಕೆಗೊಂದು ಫೋಟೋವನ್ನೋ, ವಿಗ್ರಹವನ್ನೋ ಪ್ರಸಾದದೊಂದಿಗೆ ಕಡ್ಡಾಯವಾಗಿ ತಂದುಕೊಡುತ್ತಿದ್ದರು. ನಮ್ಮ ದೊಡ್ಡಮ್ಮನೂ ಸಾಕಷ್ಟು ದೊಡ್ಡದಿದ್ದ ದೇವರ ಕೋಣೆಯಲ್ಲಿದ್ದ ದೊಡ್ಡ ಮಂಟಪದ ತುಂಬಾ ಕಾಶಿಯ ಅನ್ನಪೂರ್ಣೇಶ್ವರಿಯಿಂದ ರಾಮೇಶ್ವರದ ಶಿವನವರೆಗೆ ಎಲ್ಲಾ ವಿಗ್ರಹಗಳನ್ನೂ ಹಾಗೆಯೇ ಬಂಗಾಳದ ಕಾಳಿಯಿಂದ ಮಥುರಾದ ಕೃಷ್ಣನವರೆಗೂ ಎಲ್ಲರ ಪಟಗಳನ್ನೂ ದೇವರ ಕಟ್ಟೆಯ ತುಂಬಾ, ಇನ್ನೂ ಉಳಿದ ದೊಡ್ಡದೊಡ್ಡ ಫೋಟೋಗಳನ್ನು ನಡುಮನೆಯ, ಪಡಸಾಲೆಯ ಗೋಡೆಯಲ್ಲಿ, ಇನ್ನೂ ಸಾಧ್ಯವಾದ ಕಡೆಯಲ್ಲೆಲ್ಲಾ ತೂಗು ಹಾಕಿ ದಿನವೂ ಎಲ್ಲಾ ಫೋಟೋಗಳ ಮೇಲೂ ಒಂದೊಂದು ಹೂವಿಡುವುದಕ್ಕೇ ಅವರಿಗೆ ಕನಿಷ್ಠ ಒಂದು ಘಂಟೆ ಕಾಲ ಬೇಕಾಗುತ್ತಿತ್ತು. ನಮ್ಮಮ್ಮ ಅವರ ತಂಗಿ; ಹೇಳಬೇಕಾದ್ದೇನಿಲ್ಲ. ನಮ್ಮಲ್ಲೂ ಹೀಗೇ ಇಡೀ ಮನೆಯೆಲ್ಲಾ ದೇವರ ಫೋಟೋಗಳು ತುಂಬಿಕೊಂಡು ನಮ್ಮಮ್ಮನೂ ಅವರ ಅಕ್ಕನನ್ನು ಅನುಸರಿಸುತ್ತಿದ್ದದ್ದು ಸಹಜವೇ ಬಿಡಿ. ನಮ್ಮ ಆ ದೊಡ್ಡಮ್ಮನ ಮಗ ಶೇಷಣ್ಣನೂ ಪರಮ ದೈವಭಕ್ತನೇ; ಆದರೆ ಅದರ ಜೊತೆಗೆ ಸಮಯಾಚಾರವನ್ನರಿತವನು. ದೊಡ್ಡಮ್ಮ ಹೋದ ಮೇಲೆ ಅಷ್ಟು ಪಟಗಳ ಮೇಲೂ ಹೂವನ್ನಿಟ್ಟು ಪೂಜೆ ಮುಗಿಸಿ ಕಚೇರಿಗೆ ಹೋಗುವ ವೇಳೆಗೆ ಊಟದ ವಿರಾಮದ ಸಮಯವಾಗಿಬಿಡುತ್ತದೆ ಎನ್ನುವುದನ್ನು ಕಂಡುಕೊಂಡ. ವೈಕುಂಠ

ಸಮಾರಾಧನೆಯ ಮರುದಿನ ಸಂತೃಪ್ತಿಯಾಗಿ ಅಕ್ಕತಂಗಿಯರು ಮಾಡಿದ ಹೋಳಿಗೆಯ ಊಟ ಮಾಡಿದ ಮೇಲೆ, ಅಮ್ಮನ ರೇಶ್ಮೆ ಸೀರೆಗಳನ್ನೆಲ್ಲಾ ತಂದು ಎಲ್ಲ ಅಕ್ಕತಂಗಿಯರ ಮುಂದಿಟ್ಟು, 'ಒಬ್ಬಬ್ಬರೂ ಅಮ್ಮನ ಎರಡೆರೆಡು ಸೀರೆಗಳನ್ನು ತೆಗೆದುಕೊಳ್ಳಿ, ಜೊತೆಗೆ ಅಮ್ಮ ಪೂಜೆ ಮಾಡುತ್ತಿದ್ದ ನಾಲ್ಕು ನಾಲ್ಕು ಫೋಟೋಗಳನ್ನೂ ಭಕ್ತಿಪೂರ್ವಕವಾಗಿ ಕೊಡುತ್ತಿದ್ದೇನೆ' ಎಂದು ಹೇಳಿ ಹತ್ತಿರತ್ತಿರ ಮೂವತ್ತು ಪಟಗಳನ್ನು ಸೀರೆಯ ಮೇಲೆ ಬಾಗಿನವಾಗಿ ಕೊಟ್ಟು, ದಿನವೂ ಬೆಳಗ್ಗೆ ಹೂವಿಡುವ ಹೊರೆಯನ್ನು ಒಂದು ಗಂಟೆ ಕಡಿಮೆ ಮಾಡಿಕೊಂಡ. ಅಮ್ಮ ಪೂಜೆ ಮಾಡುತ್ತಿದ್ದ ನಾಲ್ಕು ಪಟಗಳ ಮೇಲೆ ನಾಲ್ಕು ಹೂವಿಡಲು ಹೆಣ್ಣುಮಕ್ಕಳಿಗೆ ಕಷ್ಟವೇ? ಖುಷಿಯಿಂದಲೇ ತೆಗೆದುಕೊಂಡರು ಎನ್ನಿ. ನಮ್ಮಮ್ಮ ಇಂತಹ ಪ್ರಸಂಗವೇ ಬೇಡವೆಂದು ಅಣ್ಣನಿಗೆ ವರ್ಗಾವಣೆಯಾಗಿ ಊರು ಬಿಡುವಾಗ ಆಗ ತಾನೇ ಹೊಸತಾಗಿ ಕಟ್ಟಿದ್ದ ದೇವಸ್ಥಾನವೊಂದಕ್ಕೆ ಎಲ್ಲಾ ದೊಡ್ಡ ದೊಡ್ಡ ಪಟಗಳನ್ನೂ ಕೊಟ್ಟು ಅಣ್ಣನ ಹೊರೆಯನ್ನು ಕಡಿಮೆ ಮಾಡಿದ್ದರು.

ಇದೇ ಶೇಷಣ್ಣ ಬೆಂಗಳೂರಿನಲ್ಲಿ ಸಮಾರಂಭವೊಂದರಲ್ಲಿ ಸಿಕ್ಕಿದ್ದಾಗ "ನಿನ್ನ ಎಲ್ಲಾ ಅಕ್ಕ ತಂಗೀರು, ತಮ್ಮ, ಮಗಳು ಎಲ್ರೂ ಬೆಂಗ್ಳೂರಲ್ಲೇ ಇದಾರೆ ನೀನೊಬ್ಬ ಯಾಕೆ ದುರ್ಗದಲ್ಲಿದೀಯ. ಇಲ್ಲೇ ಬಂದು ಸೆಟ್ಲ್ ಆಗೋತ್ತಾನೆ" ಅಂದೆ. "ನಾನು ಮಾತ್ರಾ ಬೆಂಗ್ಳೂರಿಗೆ ಬರಲ್ಲ. ಇಲ್ಲಿ ಬಂದ್ರೆ ಸಮಾರಂಭಗಳಲ್ಲಿ ಉಡುಗೊರೆ ಕೊಟ್ಟು ಕೊಟ್ಟೇ ಸುಸ್ತಾಗ್ತೀನಿ. ಬಂದ ಹದ್ನೈದು ದಿನದಲ್ಲಿ ಇದು ನಾಲ್ಕನೇ ಊಟ. ತಿಂಗ್ಳಿಗೆ ಸಾವ್ರ, ಎರಡ್ಸಾವ್ರ ಉಡುಗೊರೆ ಕೊಡಕ್ಕೇ ಬೇಕು. ಹತ್ತಿರದವ್ರದ್ದಾದ್ರೆ ಇನ್ನೂ ಜಾಸ್ತಿ ಖರ್ಚು. ಇಷ್ಟಾಗಿ ಅದು ಸರಿ ಇಲ್ಲ, ಇದು ಚೆನ್ನಾಗಿಲ್ಲ, ಇದ್ರ ಬೆಲೆ ಇಷ್ಟೇ ಅಂತ ಆಕ್ಷೇಪಣೆ ಬೇರೆ. ಅದಕ್ಕೇ ಒಂದುಪಾಯ ಕಂಡ್ಕೊಂಡಿದೀನಿ. ಎಲ್ರ ಮನೆಗೂ ಒಂದು ನಾನ್ ಕಾಂಟ್ರವರ್ಷಿಯಲ್ ದೇವ್ರು - ಗಣಪತಿ ಅಥವಾ ಶಿರಡಿ ಬಾಬಾನ ಫೋಟೋನೋ, ವಿಗ್ರಹಾನೋ ಕೊಟ್ಬಿಡೋದು. ಬೈಕೊಳೋ ಹಾಗೂ ಇಲ್ಲ; ಬೆಲೆ ಕಟ್ಟೋ ಹಾಗೂ ಇಲ್ಲ. ಬೇಕಿದ್ರೆ ಇಟ್ಕೋತಾರೆ; ಇಲ್ದಿದ್ರೆ ಅದನ್ನ ಹಾಗೇ ಪ್ಯಾಕ್ ಮಾಡಿಟ್ಕೊಂಡು ಬೇರೆ ಚೀಟಿ ಹಾಕಿ ಬೇರೆಯವ್ರಿಗೆ ಕೊಡ್ತಾರೆ" ಅಂದ. ಹಾಗೆಂದಾಕ್ಷಣ ನಮ್ಮ ಮನೆಯ ಅಟ್ಟವನ್ನು ಸೇರಿಕೊಂಡಿರುವ ವಿವಿಧ ಭಾವ ಭಂಗಿಯ, ಆಕಾರದ, ಗಣಪ ಮತ್ತು ಬಾಬಾರ ಪಟಗಳು ಕಣ್ಮುಂದೆ ಬಂದವೆನ್ನಿ.

ಇತ್ತೀಚೆಗಂತೂ ಯಾವ ಅರಳಿ ಕಟ್ಟೆ ಅಥವಾ ಅಶ್ವತ್ಥ ಕಟ್ಟೆಯನ್ನು ನೋಡಿದರೂ, ಅದರ ಮೇಲೆ ಕೂರಲೂ, ಸುತ್ತುಬರಲೂ ಸಾಧ್ಯವಿಲ್ಲದಂತೆ, ದೇವರ ಪಟಗಳೇ ಪಟಗಳು ಅನಾಥವಾಗಿ ಬಿದ್ದಿರುವುದನ್ನು ನೋಡಿದಾಗ ಮನಸ್ಸಿಗೆ ಹಿಂಸೆಯಾಗುತ್ತದೆ. ಪೂಜೆ ಮಾಡಿದ್ದನ್ನು ಕಸದ ಬುಟ್ಟಿಗೆ ಹಾಕಲಾಗುವುದಿಲ್ಲ. ಕೆಲವರು ನದಿಗೆ ಬಿಡುತ್ತೇವೆನ್ನುತ್ತಾರೆ; ಅಲ್ಲಿಗೆ ನದಿಯ ನೀರನ್ನು ಕಲುಷಿತಗೊಳಿಸಿದಂತೆ ಅಲ್ಲವೇ. ನನಗಂತೂ ಇದರ ವಿಲೇವಾರಿಯ ಬಗ್ಗೆ ಯಾವ ದಾರಿಯೂ ಹೊಳೆದಿಲ್ಲ. ನಿಮ್ಮಲ್ಲಿ ಏನಾದರೂ ಪರಿಹಾರವಿದ್ದರೆ ಹೇಳಿ, ನಾನೂ ಒಂದು ಪೆಟ್ಟಿಗೆಯ ತುಂಬಾ ಹೆಚ್ಚಾದ ಪಟಗಳನ್ನು ಹೀಗೇ ತುಂಬಿಟ್ಟಿದ್ದೇನೆ.

*****

ಪದ್ಮಶ್ರೀ ಪ್ರೊ. ಆರ್.ಎಲ್. ಕಶ್ಯಪ್ ಹಾಗೂ
ಶ್ರೀ ಅರಬಿಂದೋರವರ ದರ್ಶನ – ಕಿರು ಪರಿಚಯ

- ಡಾ. ಜಯಂತಿ ಮನೋಹರ್

ಭಾರತದ ಮೂಲ ಚಿಂತನೆಗಳಿರುವ ವೇದ ಸಾಹಿತ್ಯವನ್ನು ಆದ್ಯಂತವಾಗಿ ಅಭ್ಯಸಿಸಿ ಭಾಷ್ಯವನ್ನು ಬರೆದಿರುವ ಬೆರಳೆಣಿಕೆಯಷ್ಟು ವಿದ್ವಾಂಸರಲ್ಲಿ ಈ ವರ್ಷದ ಪದ್ಮಶ್ರೀ ಗೌರವಕ್ಕೆ ಪಾತ್ರರಾದ ಪ್ರೊ.ಆರ್.ಎಲ್.ಕಶ್ಯಪ್ ರವರಿಗೆ ವಿಶೇಷ ಸ್ಥಾನವಿದೆ.

ಹದಿನೈದನೇ ಶತಮಾನದಲ್ಲಿ ಸಾಯಣಾಚಾರ್ಯರಿಂದ ರಚಿತವಾದ ವಿಸ್ತೃತವಾದ ವೇದ ಭಾಷ್ಯ ವೇದಾಧ್ಯಯನದಲ್ಲಿ ಪ್ರಮುಖವಾದ ಆಕರ. ಅದಕ್ಕೆ ಮೊದಲು ಹಾಗೂ ತರುವಾಯ ಭಾಗಶಃ ಮಂತ್ರಗಳಿಗೆ ರಚಿತವಾದ ಹಲವು ಭಾಷ್ಯಗಳು ಕಾಣುತ್ತವೆ. ಈ ದಿಸೆಯಲ್ಲಿ ನಾಲಕ್ಕೂ ವೇದ ಭಾಗಗಳಿಗೆ ಸಮಗ್ರವಾದ ಭಾಷ್ಯವನ್ನು ಇಂಗ್ಲಿಷ್ ಭಾಷೆಯಲ್ಲಿ ರಚಿಸಿರುವ ಕಶ್ಯಪ್ ರವರದು ಅಸೀಮ ಸಾಹಸ.

ಅಮೆರಿಕದ ಪರ್ಡ್ಯೂ ಯೂನಿವರ್ಸಿಟಿಯ ಎಲೆಕ್ಟ್ರಿಕಲ್ ಮತ್ತು ಕಂಪ್ಯೂಟರ್ ವಿಜ್ಞಾನದ ವಿಭಾಗದಲ್ಲಿ 33 ವರ್ಷ ಉನ್ನತ ಪ್ರಾಧ್ಯಾಕರಾಗಿ, ವಿಜ್ಞಾನ ಕ್ಷೇತ್ರದಲ್ಲಿ ಅಪಾರವಾದ ಯಶಸ್ಸು ಗಳಿಸಿರುವ ಕಶ್ಯಪ್ ಅವರು ತಮ್ಮ ಮಧ್ಯವಯಸ್ಸಿನಲ್ಲಿ ಯೋಗಿ ಶ್ರೀ ಅರಬಿಂದೋರವರ ವಿಚಾರಧಾರೆಯಿಂದ ಆಕರ್ಷಿತರಾಗಿ ವೇದಾಭ್ಯಾಸಕ್ಕೆ ತೊಡಗಿದರು.

23 ವರ್ಷಗಳಿಂದ ಭಾರತದಲ್ಲಿಯೇ ನೆಲೆಸಿ ಸತತವಾಗಿ ಪೂರ್ಣ ಪ್ರಮಾಣದಲ್ಲಿ ಅಧ್ಯಯನ, ಸಂಶೋಧನೆ ಹಾಗೂ ಬರಹಗಳಲ್ಲಿ ನಿರತರಾಗಿದ್ದಾರೆ. ಇವರು 1997ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಿರುವ `ಶ್ರೀ ಅರವಿಂದೋ ಕಪಾಲಿ ಶಾಸ್ತ್ರಿ ಇನ್ಸ್ಟಿಟ್ಯೂಟ್ ಆಫ್ ವೇದಿಕ್ ಕಲ್ಚರ್'' ಎಂಬ ಸಂಸ್ಥೆಯ ಮೂಲಕ ಮಾಡುತ್ತಿರುವ ಪುಸ್ತಕ ಪ್ರಕಟಣೆ ದೇಶವಿದೇಶಗಳಲ್ಲಿರುವ ವೇದಾಧ್ಯಯನದಲ್ಲಿ ಆಸಕ್ತಿ ಹೊಂದಿರುವ ಆಸಕ್ತರಿಗೆ ಉಪಯುಕ್ತ ಆಕರಗಳಾಗಿವೆ. ಇದರೊಂದಿಗೆ ಇವರಿಂದ ನಿಯಮಿತವಾಗಿ ಪ್ರವಚನಗಳು ಮತ್ತು ಕಾರ್ಯಾಗಾರಗಳು ನಡೆಯುತ್ತವೆ. ತಮ್ಮ ವೈಜ್ಞಾನಿಕ ಅರಿವಿನ ಹಿನ್ನಲೆಯಲ್ಲಿ ವೇದಮಂತ್ರಗಳಲ್ಲಿರುವ ಸಾಂಕೇತಿಕ ಒಳಹರವನ್ನು ವಿಶ್ಲೇಷಿಸಿರುವುದು ಅವರ ವಿಶೇಷ ಕೊಡುಗೆ.

ಶ್ರೀ ಅರಬಿಂದೋ ದರ್ಶನದ ಬೆಳಕಿನಲ್ಲಿ ವೇದಮಂತ್ರಗಳ ಆಂತರ್ಯ

ವೇದ ಎಂದ ಕೂಡಲೇ, ಹವನ, ಹೋಮ, ಯಜ್ಞ (ಯಾಗ) ಮುಂತಾದ ವ್ರತಾಚರಣೆಗಳನ್ನು ವಿಧಿಸಿರುವ ಒಂದು ಗ್ರಂಥ ಎಂದು ಅರ್ಥೈಸುವ ಪರಿಪಾಠ ಕಾಲಾನುಕ್ರಮದಲ್ಲಿ ನಮ್ಮಲ್ಲಿ ಬೆಳೆದು ಬಂದಿದೆ. ಹಾಗೆಯೇ, ವೇದಾಧ್ಯಯನ ಎಂದರೆ, ಪೂಜಾವಿಧಿಗಳನ್ನು ನಡೆಸುವ ಪುರೋಹಿತರು ಮಾತ್ರ ಮಾಡಬೇಕಾದ ಅಧ್ಯಯನ ಎನ್ನುವ ಭಾವನೆಯನ್ನೇ ಇಂದು ಬಹಳಷ್ಟು ಜನರು ಹೊಂದಿದ್ದಾರೆ. ವೇದ ಎನ್ನುವ ಪದದ ಮೂಲವಾದ `ವಿದ್' ಧಾತುವಿನ ಅರ್ಥವೇ ಜ್ಞಾನ. ಭಾರತೀಯ ಚಿಂತನೆಯ ಸಾರವಿರುವುದು ವೇದಮಂತ್ರಗಳಲ್ಲಿ.

ವೇದಗಳು ಭಾರತದಲ್ಲಿ ಪ್ರಕಟವಾದ ಅತ್ಯಂತ ಹಿಂದಿನ ಜ್ಞಾನವಾಹಿನಿಗಳು. ಭಾರತದಲ್ಲಷ್ಟೇ ಅಲ್ಲದೆ, ಇಡೀ ಪ್ರಪಂಚದ ಚರಿತ್ರೆಯ ಹಿನ್ನೋಟವನ್ನು ಕಂಡಾಗ ಅತ್ಯಂತ ಹಿಂದಿನ ಕಾಲಘಟ್ಟದಲ್ಲಿ ಮಾನವ ಜನಾಂಗವೊಂದು ಸಾರ್ಥಕ ಬದುಕನ್ನು ಬಾಳಿದ ಮಾಹಿತಿಯನ್ನು ವೇದಮಂತ್ರಗಳು ನೀಡುತ್ತವೆ.

ವೇದಕಾಲ ಎಂದಾಗ, ಅದು ಸಾವಿರಾರು ವರುಷಗಳ ಹಿಂದಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಅಲ್ಲಿ ನಮಗೆ ವಿಶ್ವದಲ್ಲಿರುವ ನಿತ್ಯ ಸತ್ಯ ತತ್ತ್ವಗಳ ದರ್ಶನ'ಗಳನ್ನು ಕಂಡಿರುವ ಋಷಿ ಪರಂಪರೆ ಕಂಡುಬರುತ್ತದೆ. `ದರ್ಶನ' ಎಂದರೆ, ತಾವು ಬೆಳೆಸಿಕೊಂಡ ತಪಸ್ ಶಕ್ತಿಯ ಪ್ರಭಾವದಿಂದ ಈ ವಿಶ್ವದಲ್ಲಡಗಿರುವ ಶಕ್ತಿಯನ್ನು ಹಾಗೂ ಸಕಲ ಚರಾಚರ ಜೀವಿಗಳಲ್ಲಿ ಒಳಗೂ ಹೊರಗೂ ವ್ಯಾಪಿಸಿರುವ ಪರಮೋನ್ನತ ಶಕ್ತಿಯ (ಪರಮಾತ್ಮನ) ಅರಿವನ್ನು ತೆರೆದು ತೋರುವ ಒಂದು ಒಳ-ನೋಟ - `ಕಾಣ್ಕೆ'.

ಹಲವಾರು ವೇದ ಮಂತ್ರಗಳಲ್ಲಿ, ಮೇಲುನೋಟಕ್ಕೆ ಕಾಣುವ ಯಜ್ಞಾಚರಣೆಗೆ ಸಂಬಂಧಿಸಿರುವ ಅರ್ಥದ ಹಿಂದೆ ಆಧ್ಯಾತ್ಮಿಕ ಹಾಗೂ ಮನೋವೈಜ್ಞಾನಿಕ ಅರಿವು ವಿವಿಧ ಸಂಕೇತಗಳಲ್ಲಿ ಅಡಗಿವೆ ಎನ್ನುವುದನ್ನು ಯೋಗಿ ಶ್ರೀ ಅರಬಿಂದೋ ಹೇಳುತ್ತಾರೆ.

ಋಚೋ ಅಕ್ಷರೇ ಪರಮೇ ವ್ಯೋಮನ್ ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ। ಋ:1.164.39
- ಋಗ್ವೇದದ ಈ ಮಂತ್ರ, "ವೇದ ಮಂತ್ರಗಳಲ್ಲಿರುವ ಜ್ಞಾನವು ಅತ್ಯುನ್ನತವಾದ ಇಂದ್ರಿಯಾತೀತ ಸ್ತರದಲ್ಲಿರುವ (ಪರಮೇ ವ್ಯೋಮನ್) ದೇವತೆಗಳೊಂದಿಗೆ ಶಾಶ್ವತವಾಗಿ ನೆಲೆಸಿವೆ" ಎನ್ನುತ್ತದೆ.

ಕ್ರಾಂತದರ್ಶಿಗಳಾದ ಅಂದರೆ, ತಮ್ಮ ತಪಸ್ ಶಕ್ತಿಯಿಂದ ಇಂದ್ರಿಯಾತೀತ ದೃಷ್ಟಿಯನ್ನು ಪಡೆದ ಋಷಿಗಳು ಆ ಪರಮೋನ್ನತ ಸ್ತರದಲ್ಲಿ ಕಂಡದ್ದು ವೇದಮಂತ್ರಗಳಲ್ಲಿ ವ್ಯಕ್ತವಾಗಿವೆ. ಈ ಮಂತ್ರಗಳ ಆಳಕ್ಕೆ ಹೋದಂತೆಲ್ಲಾ ಹಲವಾರು ಒಳ ಪದರಗಳಲ್ಲಿ ವಿವಿಧ ಆಯಾಮಗಳಲ್ಲಿ ಅರ್ಥಗಳು ತೆರೆದುಕೊಳ್ಳುತ್ತವೆ.

ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಂ ಋತ್ವಿಜಂ।ಹೋತಾರಂ ರತ್ನಧಾತಮಂ॥ ಋ:೧.೧.೧
- ಋಗ್ವೇದದ ಪ್ರಥಮ ಸೂಕ್ತದ ಈ ಪ್ರಥಮ ಮಂತ್ರದಲ್ಲಿ ದೇವ ಅಗ್ನಿಯನ್ನು ಪುರೋಹಿತ ಎಂದು ಋಷಿಗಳು ಸ್ತುತಿಸಿದ್ದಾರೆ. ಪರೋಹಿತ ಎಂದರೆ 'ಪುರತಃ ನಿಹಿತಃ - ಮುಂದೆ ಇರುವವನು' ಎನ್ನುವ ಅವನ ಕಾರ್ಯವನ್ನು ಶ್ರೀ ಅರಬಿಂದೋರವರು ವಿಸ್ತರಿಸುತ್ತಾರೆ. ನಮ್ಮ ಹೃದಯದಲ್ಲಿ ನಡೆಯುವ ಯಜನದಲ್ಲಿ ಮೊದಲು ಜಾಗೃತನಾಗುವ ಅಗ್ನಿ ನಮ್ಮ ಸಂಕಲ್ಪ ಶಕ್ತಿಯನ್ನು ಉದ್ದೀಪಿಸಿ ನಮಗೆ ಸಹಾಯ ನೀಡುತ್ತಾನೆ ಎನ್ನುತ್ತಾರೆ.

ಹೀಗೆ, ವೇದಮಂತ್ರಗಳಲ್ಲಿ ಕಾಣುವ ವಿವಿಧ ದೇವತೆಗಳ ವಿಶಿಷ್ಟ ಗುಣಗಳು ಹಾಗೂ ಅವರು ಸೃಷ್ಟಿಯ ಒಳಿತಿಗಾಗಿ ನಿರ್ವಹಿಸುವ ಕಾರ್ಯಗಳನ್ನು ಆಧರಿಸಿ, ಅವರು ಸಂಕೇತಿಸುವ ಆಧ್ಯಾತ್ಮಿಕ ಮತ್ತು ಮನೋವೈಜ್ಞಾನಿಕ ಶಕ್ತಿಯನ್ನು ಗುರುತಿಸಬಹುದು. ಚೇತನಾಯುಕ್ತರಾದ ವಿವಿಧ ಧನಾತ್ಮಕ ವಿಶ್ವ ದೈವೀಶಕ್ತಿಗಳಾದ ದೇವತೆಗಳನ್ನು ಮಂತ್ರಯುಕ್ತವಾಗಿ

ಆಹ್ವಾನಿಸಿದಾಗ ಸಾಧಕರ ಸೂಕ್ಷ್ಮಶರೀರದಲ್ಲಿ ಜಾಗೃತರಾಗುವ ಅವರು ಅಲ್ಲಿ ನಡೆಯುವ ಅಂತರ್ಯಜ್ಞದಲ್ಲಿ ಪಾಲ್ಗೊಂಡು ಎಲ್ಲಾ ಕಾರ್ಯಗಳಲ್ಲಿಯೂ ಸಹಕಾರ.ಕೊಡುವುದನ್ನು ಶ್ರೀ ಅರಬಿಂದೋ ದರ್ಶನ ತೆರೆದು ತೋರಿಸುತ್ತದೆ.

ವಿಶ್ವ ದೈವೀ ಹಾಗೂ ಆಸುರೀ ಶಕ್ತಿಗಳು

ವೇದಕಾಲೀನ ದೇವತೆಗಳು ರಾಗ-ದ್ವೇಷಗಳಿಂದ ಕೂಡಿರುವ ಇದೇ ಹೆಸರಿನ ಪುರಾಣ ಕಾಲದ ದೇವತೆಗಳಂತಲ್ಲ. ಪೂರ್ವ ಪ್ರಸಕ್ತ ಶಕೆ 7ನೇ ಶತಮಾನದಲ್ಲಿದ್ದ ಯಾಸ್ಕಾಚಾರ್ಯರು ತಮ್ಮ ಉದ್ಗ್ರಂಥ ನಿರುಕ್ತದಲ್ಲಿ, ದೇವತೆಗಳ ಸ್ವರೂಪವನ್ನು ವಿವರಿಸುತ್ತಾ, ಸತ್ - ಚಿತ್ - ಆನಂದ ಸ್ವರೂಪನಾದ ಪರಮಾತ್ಮನ ವಿವಿಧ ಅಂಗಗಳಂತೆ ದೇವತೆಗಳು ಕಾರ್ಯಮಾಡುತ್ತಾರೆ ಎನ್ನುತ್ತಾರೆ.

ವಿಶ್ವದಲ್ಲಿರುವ ಧನಾತ್ಮಕ ಹಾಗೂ ಋಣಾತ್ಮಕ ವಿಶ್ವ ಶಕ್ತಿಗಳನ್ನು ಋಷಿಗಳು ದೈವೀ ಹಾಗೂ ಆಸುರೀ ಶಕ್ತಿಗಳು ಎಂದು ಹೆಸರಿಸಿದ್ದಾರೆ. ಋಣಾತ್ಮಕ ಭಾವನೆಗಳಿಂದ ಮನಸ್ಸು ಕಲುಷಿತಗೊಂಡಾಗ ಅಲ್ಲಿ ಆನಂದದ ಸೆಲೆ ಬತ್ತಿಹೋಗಿ, ಅದು ದೇಹದ ಆರೋಗ್ಯದ ಮೇಲೆಯೂ ದುಷ್ಪರಿಣಾಮ ಬೀರತೊಡಗುತ್ತದೆ. ಇದನ್ನೇ ನಮ್ಮ ವೇದಕಾಲೀನ ಋಷಿಗಳು ನಮ್ಮ ಮೇಲೆ ನಡೆಯುವ ರಾಕ್ಷಸರ ಆಕ್ರಮಣ ಎಂದು ಗುರುತಿಸುತ್ತಾರೆ. ಇಂತಹ ರಾಕ್ಷಸೀ ಶಕ್ತಿಗಳೊಂದಿಗೆ ಹೋರಾಡಿ, ಜಯಗಳಿಸಿ, ಅಲ್ಲಿ ಆನಂದದ ಸಾಮ್ರಾಜ್ಯವನ್ನು ಸ್ಥಾಪಿಸುವುದಕ್ಕಾಗಿ ವಿಶ್ವ ದೈವೀಶಕ್ತಿಗಳನ್ನು ಆಹ್ವಾನಿಸುತ್ತಾರೆ.

ವೇದಗಳಲ್ಲಿ, ಕಾಣುವ ದೇವ-ದಾನವರ ಸಂಗ್ರಾಮಗಳು, ಮಾನವರ ಮನಸ್ಸಿನಲ್ಲಿ ಒಳಿತು-ಕೆಡುಕುಗಳ ನಡುವೆ ನಡೆಯುವ ಹೋರಾಟವನ್ನು ಸಂಕೇತಿಸುತ್ತವೆ. ನಮ್ಮ ಸುತ್ತಲೂ ಇರುವ ಋಣಾತ್ಮಕ ಶಕ್ತಿಗಳನ್ನು ವೇದಮಂತ್ರಗಳಲ್ಲಿ ವೃತ್ರ-ವಲ ಇತ್ಯಾದಿ ಹೆಸರುಗಳಿಂದ ಕರೆದಿದ್ದಾರೆ. ಸಾಧಕರ ಪ್ರಗತಿಯಲ್ಲಿ ಅಡ್ಡಿತರುವ ವೃತ್ರನನ್ನು ಇಂದ್ರ ೯೯ ಸಲ ಸಂಹಾರ ಮಾಡುವುದು ಋಗ್ವೇದ ಮಂತ್ರಗಳಲ್ಲಿ ಕಾಣುತ್ತದೆ. ಈ ವೃತ್ರಾಸುರನನ್ನು ಜ್ಞಾನ ಪ್ರದಾತೆಯಾದ ಸರಸ್ವತಿ ದೇವಿಯೂ (IÄ:6.61.7) ಸಂಹರಿಸುತ್ತಾಳೆ. ಹಾಗಾಗಿ ಅವಳನ್ನು 'ವೃತ್ರಘ್ನಿ' ಎನ್ನುತ್ತಾರೆ ಋಷಿಗಳು. ಮಹಾಭಾರತ ದಲ್ಲಿಯೂ (ಅಶ್ವಮೇಧ ಪರ್ವದಲ್ಲಿ:11.7.20) ಇಂತಹ ಸಾಂಕೇತಿಕ ಉಲ್ಲೇಖಗಳು ಸಿಗುತ್ತವೆ.

ಆದರೆ, ಈ ವೃತ್ರ-ವಲರನ್ನು ರಕ್ತ-ಮಾಂಸಗಳಿರುವ ಮನುಷ್ಯರೆಂದೂ, ಅವರು ದ್ರಾವಿಡ ರಾಜರೆಂದೂ ಹೇಳುತ್ತಾ, ಆರ್ಯ ದ್ರಾವಿಡ ಸಮರಗಳನ್ನು ತಮ್ಮ ಊಹಾಶಕ್ತಿಯಿಂದ ಹುಟ್ಟುಹಾಕಿದ ಪಾಶ್ಚಿಮಾತ್ಯ ವೇದ ವ್ಯಾಖ್ಯಾನಕಾರರು ಸೃಷ್ಟಿಸಿದ ಮಿಥ್ಯಾಭೇದದ ಫಲವಾಗಿ, ಇಂದಿಗೂ ನಮ್ಮ ದೇಶದಲ್ಲಿ ಕ್ಷೋಭೆ ತರುತ್ತಿರುವ ಆರ್ಯರು - ದ್ರಾವಿಡರು ಎನ್ನುವ ಜನಾಂಗಗಳ ಉಲ್ಲೇಖ ನಮ್ಮ ಯಾವ ಗ್ರಂಥದಲ್ಲಿಯೂ ಕಾಣುವುದಿಲ್ಲ. ಹೀಗೆ, ವಿದೇಶೀ ಇಂಡಿಯಾತಜ್ಞರಿಂದ ನಡೆದಿರುವ ವೇದದ ಅಪವ್ಯಾಖ್ಯಾನವನ್ನು ಖಂಡಿಸಿ, ಶ್ರೀ ಅರಬಿಂದೋರವರು ತೋರಿಸಿರುವ ಜ್ಞಾನದ ಹಾದಿಯಲ್ಲಿ ನಡೆದಿರುವ ಪ್ರೊ.ಆರ್.ಎಲ್. ಕಶ್ಯಪ್ ರವರ ಕಾರ್ಯಗಳು ಸ್ತುತ್ಯರ್ಹ.

*****

ನಾಲ್ಕು ಕವನಗಳು

-ಜಿ. ವಿ. ಅರುಣ

೧) ಎಲ್ಲ ಮುದುಕಿಯರು ಅಮ್ಮಂದಿರೇ!

ಮುದುಕಿಯ ಮುಖ
ನನ್ನ ನೋಡಿ ನಗವನುಸುರಿತ್ತು.
ಎದ್ದು ಅವಳತ್ತ ನಡೆದು
'ಏನಾದರು ಬೇಕೆ?' ಕೇಳಬೇಕೆನಿಸಿತ್ತು.

ಸುಕ್ಕುಗಟ್ಟಿದ ಅವಳ ಮುಖದ
ಕಣಿವೆಗಳಲಿ ಪ್ರೀತಿಯ ಕೋಡಿ
ಹರಿದಿತ್ತು, ಅಂದವ ಹೆಚ್ಚಿಸುತ
ತಣಿಸಿ, ನನಗೇ ಮಾಡಿತ್ತು ಮೋಡಿ.

ಬಳಸಾರಿದೆನಗೆ ಕೇಳಿದಳು
"ಏನು ಬೇಕಿತ್ತು ಮಗೂ...?"
ಅವಳ ಬೊಚ್ಚು ಬಾಯಲ್ಲಿ
ಬಂದಿತ್ತು ನನ್ನದೇ ಪ್ರಶ್ನೆ !

"ನಿನ್ನ ಅಮ್ಮಾ ಎಂದು
ನಾನು ಬಾಯ್ತುಂಬ ಕರೆಯಲೇ?"
ಬೊಚ್ಚು ಬಾಯಿಯ ತೆಗೆದು
ನಗುತ, ಕೈಯ ನನ್ನ ತಲೆಯ ಮೇಲಿಟ್ಟಳು.

೨) ಹುಡುಕಾಟ

ಅತ್ತ, ನೀನಿರುವತ್ತ ಬರುವ ಆಸೆ
ಆಳದ ತಿಳಿಗೊಳವ ದಾಟುವಾಸೆ.
ಹಾಯಿದೋಣಿಯು ಸಿದ್ಧ,
ಅಂಬಿಗನೇ ಇಲ್ಲ, ಅವನೆತ್ತಲೋ ಎದ್ದ.
ಕೊಳವ ದಾಟುವ ನಮ್ಮಾಸೆಗೆ
ಹುಡುಕಲವನ ನಾವೆ ಸಾಗಬೇಕಿದೆ.

೩) ಬೆಳವಣಿಗೆ

ನನ್ನ ತಲೆ ತಿಂದ ನಿನಗೆ
ಅದೇ ಆಹಾರವಾಗಿತ್ತು.
ನೀನು ತಿನ್ನುತ್ತ ಅಲ್ಲೇ ಬಿಟ್ಟ,
ಉತ್ತರ ಸಿಕ್ಕದ ಪ್ರಶ್ನೆಗಳೆಲ್ಲ
ಗೊಬ್ಬರವಾಗಿ ಹರಡಿತ್ತು.
ಉತ್ತರ ಹುಡುಕುತ್ತ ಹೊರಟೆ,
ನನ್ನ ತಲೆ ಬೆಳೆದಿತ್ತು!

೪) ನನಗಿಂತಲೂ ಸೂಕ್ಷ್ಮ

"ಏಕೆ ಪ್ರಿಯೆ? ಇಂದು
ನಿನ್ನ
ಬಿಸಿ ಅಪ್ಪುಗೆಯ ಸುಖವಿಲ್ಲ
ನನಗೆ!

ಅಂಗಡಿಗಳಿಗೊಯ್ದು
ಕೇಳಿದ್ದ ಕೊಡಿಸಿರುವೆ.
ಬಣ್ಣಬಣ್ಣದ ಬಟ್ಟೆ,
ಕಿವಿಗೆ ಲೋಲಾಕು,
ನಿನ್ನ ರಂಗಿಗೊಪ್ಪುವ
ಚಂದದ ಬಿಂದಿ ಬೇರೆ.

ಹೊಸ ದಿರಿಸು ಧರಿಸಿ
ಸಿಂಗರಿಸಿ ನಿಂತವಳು,
ಕತ್ತ ಕೊಂಕಿಸಿ ಕೇಳಿದಳು
ಕೈಯ ಮುಂದೆ ಮಾಡಿ
"ಹೇಗೆ ಅಪ್ಪಲಿ ನಿನ್ನ?
ಸುಂದರ ಬಳೆಗಳಿವು
ನನಗಿಂತಲೂ ಸೂಕ್ಷ್ಮ!"

*****

ಅಂಬಿಗ್ರ ಬಾಳಣ್ಣ

- ಜೀವಿ. ಹೆಗಡೆ

ಅಂಬಿಗ್ರ ಬಾಳಣ್ಣ 'ಭಯಂಕರ' ಸಾಹಸಿ. ಈ ಕುರಿತು ಯಾರಾದರೂ ಕೇಳಿದಲ್ಲಿ ಅವನು ಸೌಜನ್ಯದಲ್ಲಿ ಹೇಳುವದುಂಟು, 'ನನ್ನದೆಂತಹ ಸಾಹಸ? ನನ್ನಜ್ಜ ಬೀರನನ್ನು ನೋಡಬೇಕಿತ್ತು. ಅವನು ನೀರಿನಲ್ಲಿ ಈಜುವವನಾಗಿರಲಿಲ್ಲ. ನಡೆದೇ ನದಿಯನ್ನು ದಾಟುತ್ತಿದ್ದ. ಗಂಗಮ್ಮ ಅಘನಾಶಿನಿ ನಮ್ಮವರನ್ನು ಮುಳುಗಿಸುವದಿಲ್ಲ. ಆಗತಾನೇ ಹುಟ್ಟಿದ ಮಗುವನ್ನು ನೀರಿನಲ್ಲಿ ಬಿಟ್ಟರೂ ಸಹ ಅವಳು ತಂದು ನಮಗೊಪ್ಪಿಸುತ್ತಾಳೆ. ಅವಳಿಗೆ ಕೈಮುಗಿದು ದೋಣಿಯನ್ನು ನೀರಿನಲ್ಲಿ ಇಳಿಸಿದರಾಯಿತು ಅಷ್ಟೇ. ಅವಳು ನೋಡಿಕೊಳ್ಳುತ್ತಾಳೆ. ನಮ್ಮಷ್ಟಕ್ಕೆ ನಮ್ಮ ಕೆಲಸ ಮಾಡಿದರಾಯಿತು'.

ಕುಮಟಾ ತಾಲೂಕಿನ ದೀವಗಿ ಸಮೀಪದ ಮಣಕೋಣದಲ್ಲಿ ಇರುವ ಬಾಳಣ್ಣನಿಗೆ ಅವನ ಹೆಂಡತಿ ಶುಕ್ರಿ ಹಾಗೂ ಮಗ ಬೀರನ ಹಾಗೆ ಎರಡು ದೋಣಿಗಳು ಕುಟುಂಬ ಸದಸ್ಯರು. ಊರಿನ ಜನರು ಹೇಳುವಂತೆ ಅವರೆಲ್ಲರೂ ಗಂಗೆಯ ಮಕ್ಕಳು. 'ನೀರಿನೊಡನೆ ಸರಸ' ಎನ್ನುವದು ಅವರಿಗೆ ಹುಟ್ಟಿನಿಂದಲೇ ಬಂದಿದ್ದು. ಮಕ್ಕಳಿರಲಿ, ಮುದುಕರಿರಲಿ, ಹೆಂಗಸರಿರಲಿ ದೋಣಿ ಎನ್ನುವದು ಅವರ ಬದುಕಿನ ಅವಿಭಾಜ್ಯ ಅಂಗ.

ಬಾಳಣ್ಣನಿಗೆ ಒಂದು ದೊಡ್ಡದಾದ 'ಹಾಯಿ ದೋಣಿಯ' ಇದೆ. ಬಾಳಣ್ಣನ ಎಳವೆಯ ಕಾಲದಲ್ಲಿ ಈಗಿನ ಹಾಗೆ ರಸ್ತೆಯ ಅನುಕೂಲ ಇರಲಿಲ್ಲ. ಕುಮಟಾ ಪಟ್ಟಣದಿಂದ ಅಘನಾಶಿನಿ ನದಿಗೆ ತಾಗಿರುವ 'ಮಣಕಿ ಧಕ್ಕೆ'ಯಿಂದ 'ಉಪ್ಪಿನ ಪಟ್ಟಣ' ಧಕ್ಕೆಯ ತನಕದ ಜಲಮಾರ್ಗ ಬಾಳಣ್ಣನ ಹಾಯಿದೋಣಿಯ ರಾಜಮಾರ್ಗ. ಮಧ್ಯದಲ್ಲಿಯ ಮುಸಗುಪ್ಪೆ, ಕುಡ್ಲೆ, ಕಲ್ಲಬ್ಬೆ ಮೊದಲಾದ ಊರುಗಳು ನಿಲ್ದಾಣಗಳು. ಹಾಯಿದೋಣಿಯೊಳಗೆ ನೆರಳಿನ ವ್ಯವಸ್ಥೆಯೂ ಉಂಟು. ಆರಾಮವಾಗಿ ಪ್ರಯಾಣಿಕರು ಮಲಗಿ ಸಾಗುವಂತಹ ವ್ಯವಸ್ಥೆ.

ಉಪ್ಪಿನ ಪಟ್ಟಣದಲ್ಲಿಯೂ ಎರಡು ಮೂರು ಹಾಯಿದೋಣಿಗಳು ಇದ್ದರೂ ಬಾಲಣ್ಣನ ಸ್ವಭಾವದಿಂದಾಗಿ ಅವನ ದೋಣಿಯನ್ನೇ ಅವಲಂಬಿಸುವ ಹತ್ತಾರು ಕುಟುಂಬದವರಿದ್ದರು. ಮಣಕಿ ಧಕ್ಕೆಯಲ್ಲಿ ಸಾಮಾನು ಸರಂಜಾಮನ್ನು ದೋಣಿಗೆ ಏರಿಸುವದರಿಂದ ಹಿಡಿದು ಮಧ್ಯದಲ್ಲಿ ಸಿಗುವ ನಿಲ್ದಾಣಗಳಲ್ಲಿ ದೋಣಿಯಿಂದ ರಸ್ತೆಗೆ ಸಾಗಿಸಿಡುವ ತನಕ ಬಾಲಣ್ಣನ ಸಹಕಾರ ಇರುತ್ತಿತ್ತು.

ಉಪ್ಪಿನ ಪಟ್ಟಣ ಅಂದರೆ ಅದೇನು ದೊಡ್ಡದಾದ ಪಟ್ಟಣವಲ್ಲ. ಹಿಂದೆ ಸಾಣೆಕಟ್ಟೆಯಿಂದ ಜಲಮಾರ್ಗದಲ್ಲಿ ತಂದ ಉಪ್ಪನ್ನು ಈ 'ಧಕ್ಕೆಯಲ್ಲಿ' ಇಳಿಸಿ ಮುಂದೆ ಚಕ್ಕಡಿಯಲ್ಲಿ ದೇವಿಮನೆ ಘಟ್ಟದ ಮೂಲಕ ಸಿರ್ಸಿ ಹಾದು ಹುಬ್ಬಳ್ಳಿ ಪೇಟೆಗೆ ಸಾಗಿಸು ತ್ತಿದ್ದರಂತೆ. ಈ ಕಾರಣಕ್ಕಾಗಿಯೇ ಉಪ್ಪಿನ ಪಟ್ಟಣ ಎನ್ನುತ್ತಾರಂತೆ. ಹತ್ತಿ ಮೊದಲಾದ ವಸ್ತುಗಳನ್ನು ರಸ್ತೆ ಮಾರ್ಗದಿಂದ ತಂದು ಉಪ್ಪಿನ ಪಟ್ಟಣ ಧಕ್ಕೆಯ ಮೂಲಕ ಕುಮಟಾದ ಬಂದರಿನ ಮೂಲಕ ವಿದೇಶಕ್ಕೂ ಕಳುಹಿಸುತ್ತಿದ್ದಾರಂತೆ. ಈಗ ನೆಲಮಾರ್ಗದ ಅನುಕೂಲತೆಯಿಂದಾಗಿ ಈ ಉಪ್ಪಿನ ಪಟ್ಟಣದ ಹಾಗೂ ಮಣಕಿಯ ಧಕ್ಕೆಯ ಪ್ರಾಶಸ್ತ್ಯ ಕಡಿಮೆ ಆಗಿದೆ. ಊರಿನಲ್ಲಿ ಇನ್ನೂ ಮೂರ್ನಾಲ್ಕು ಅಂಬಿಗರ ಕುಟುಂಬವಿದ್ದರೂ 'ಹೊಳೆ ದಾಟಿಸುವ ಅಂಬಿಗ' ಬಾಳಣ್ಣನೇ. ಉಳಿದವರಿಗೆ ಮೀನು ಹಿಡಿಯುವದು ಹಾಗೂ ಬೆಳಚು ಹೆಕ್ಕಿ ಪಕ್ಕದ ಮುಸಗೊಪ್ಪೆಗೊ ಅಥವಾ ಮೂರೂರಿಗೊ ಹೋಗಿ ಮಾರಬೇಕು. ಈ ಕೆಲಸ ಅಂಬಿಗ ಹೆಣ್ಣುಮಕ್ಕಳದು.

ದೋಣಿ ದೊಡ್ಡದಿದ್ದುದರಿಂದ ಆಕಡೆ ಈಕಡೆ ದಾಟುವಾಗ ಸೈಕಲ್ ಹಾಗೂ ಉಳಿದ ಸಾಮಾನು ಸರಂಜಾಮುಗಳನ್ನು ದಾಟಿಸಲು ಅನುಕೂಲ. ಇಲ್ಲಿಯೂ ಬಾಳಣ್ಣನು ಸೈಕಲ್ ಹಾಗೂ ಸಾಮಾನುಗಳನ್ನು ಎತ್ತಿ ಇಡಲು ಸಹಕರಿಸುತ್ತಿದ್ದನು. ನಾಲ್ಕು ಕಿಲೋಮೀಟರ್ ದೂರದ ಉಪ್ಪಿನ ಪಟ್ಟಣದಲ್ಲಿ ಹೊಳೆ ದಾಟಿಸುವ ಕೆಲಸಕ್ಕೆ ಪ್ರತಿವರ್ಷ ಟೆಂಡರ್ ಕರೆದರೂ ಮಣಕೋಣಿನಲ್ಲಿ ಈ ವ್ಯವಸ್ಥೆ ಇಲ್ಲ. ಇಲ್ಲಿಯ ತಾರಿಯಲ್ಲಿ ಅಷ್ಟು ಗಳಿಕೆ ಇಲ್ಲದಿರುವದೇ ಇದಕ್ಕೆ ಕಾರಣ.

ಆದರೆ ಈಗ ಹಾಯಿದೋಣಿಯ ಪ್ರಯೋಜನ ಹೆಚ್ಚಿಲ್ಲದಿದ್ದಲೂ ಹೊಳೆಯ ಈಚಿನ ಮಣಕೋಣಿನಿಂದ ಆಚೆ ಮುಸಗುಪ್ಪೆ ಹಾಗೂ ಮೂರೂರಿಗೆ ಹೊಳೆದಾಟಲು ದೋಣಿ ಬೇಕೇಬೇಕು. ಸಣ್ಣದಾದ ಪಾತಿದೋಣಿ ಮೀನು ಹಿಡಿಯಲೊ ಅಥವಾ ಬೆಳಚು ತರಲೊ ಉಪಯೋಗವಾಗುತ್ತದೆ. ಮತ್ತೊಂದು ಸ್ವಲ್ಪ ದೊಡ್ಡ ದೋಣಿಯು ಹೊಳೆ ದಾಟಿಸಲು ಉಪಯೋಗ.

ಈ ಕಡೆ ಮೂರ್ನಾಲ್ಕು ಪ್ರಯಾಣಿಕರು ಸಿದ್ಧರಾದ ಮೇಲೆಯೇ ಹೊಳೆಗೆ ದೋಣಿ ಇಳಿಸಬೇಕು. ದಾಟಿದ ಮೇಲೆಯೂ ಆಕಡೆ ನಾಲ್ಕು ಜನರಾದ ಮೇಲೆಯೇ ದೋಣಿ ಪುನಃ ತಿರುಗಬೇಕು. ತೀರಾ ಅವಶ್ಯಕತೆ ಇದ್ದಾಗ ಕೂ ಹಾಕಿ ಕರೆಯಿಸಿಕೊಳ್ಳಬೇಕು.

ಮಳೆಗಾಲದಲ್ಲಿ ಈ ಹೊಳೆ ದಾಟಿಸುವ ಕೆಲಸ ಇರುವದಿಲ್ಲವೆನ್ನಿ. ಮೀನು ಹಿಡಿಯುವ ಹಾಗೂ ಬೆಳಚು ಕಲ್ಲು ಹೆಕ್ಕುವ ಕೆಲಸವೂ ಇರುವದಿಲ್ಲವಲ್ಲ. ದಿನಂಪ್ರತಿ ದುಡಿದೇ ಹೊಟ್ಟೆ ತುಂಬಿಸಿಕೊಳ್ಳಬೇಕಾದ ಬಾಳಣ್ಣನ ಕುಟುಂಬಕ್ಕೆ ಮಳೆಗಾಲದಲ್ಲಿ 'ತುಂಬಿ ಹರಿಯುವ' ಅಘನಾಶಿನಿಯೇ ಜೀವಾಳ. ಅವಶ್ಯಕತೆ ಇರುವ ಪ್ರಯಾಣಿಕರು ಒಂದಕ್ಕೆ ನಾಲ್ಕು ಪಟ್ಟು ಹಣ ಕೊಟ್ಟು ಹೊಳೆದಾಟುತ್ತಾರೆ. ಮಳೆಗಾಲದಲ್ಲಿ ಹೊಳೆ ದಾಟಿಸುವ ಕೆಲಸವನ್ನು ಬಾಳಣ್ಣನ ಹೊರತಾಗಿ ಯಾರೂ ಮಾಡಲು ಸಾಧ್ಯವಿಲ್ಲ.

ಒಳ್ಳೆಯ ಕುದುರೆ ಸವಾರ, ಕುದುರೆಯನ್ನು ಕಂಟ್ರೋಲ್ ಮಾಡಿದ ಹಾಗೆ, ಮಾವುತ ಆನೆಯನ್ನು ನಡೆಸಿದ ಹಾಗೆ ಬಾಳಣ್ಣ ಅವನು ನಡೆಸುವ ದೋಣಿಗಳನ್ನೂ ಮಾತು ಕೇಳಿಸುತ್ತಿದ್ದ.

ಮಳೆಗಾಲದಲ್ಲಿ ತುಂಬಿ ಹರಿಯುವ ಅಘನಾಶಿನಿಯಲ್ಲಿ ಬರಬಹುದಾದ ಬೆಲೆಬಾಳುವ ವಸ್ತುಗಳನ್ನು ಹಿಡಿಯಲು ಬಾಳಣ್ಣ ತನ್ನ ಪಾತಿದೋಣಿಯ ಮೂಲಕ ಅಘನಾಶಿನಿಗೆ ಇಳಿಯುತ್ತಾನೆ. ನದಿಯ ಮಧ್ಯಭಾಗಕ್ಕೆ ಹೋಗಲು ತೊಂದರೆ ಇದ್ದರೂ ಅಂಚಿನಲ್ಲಿಯೇ ಚಲಿಸಿದಾಗ ರಭಸದಲ್ಲಿ ಹರಿಯುವ ನದಿಯಲ್ಲಿ ತೇಲಿ ಬರುವ ತೆಂಗಿನಕಾಯಿಗಳೂ ಬಾಳಣ್ಣನ ಆದಾಯ.

ಈಗ ಬಾಳಣ್ಣ ಮುದುಕನಾಗಿದ್ದಾನೆ. ಕಾಲವೂ ಬದಲಾಗಿದೆ. ಜೀವನ ಕ್ರಮವೂ ಬದಲಾಗಿದೆ. ಜಲಮಾರ್ಗದ ಅವಶ್ಯಕತೆಯೂ ಈಗ ಅಷ್ಟಿರುವದಿಲ್ಲ. ಎಲ್ಲರ ಹಾಗೆ ಬಾಳಣ್ಣನ ಕುಟುಂಬಕ್ಕೂ ಮಳೆಗಾಲದಲ್ಲಿ ಹೊಳೆ ದಾಟಬೇಕಾದ ಅವಶ್ಯಕತೆ ಇಲ್ಲ. ಮಗ ಅಘನಾಶಿನಿಯ ಜೊತೆ ಸರಸವಾಡುವದಿಲ್ಲ.

ಈಗ ಬಾಳಣ್ಣನು ಮಾತಿಗೆ ಸಿಕ್ಕಿದವರ ಜೊತೆ ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತಿರುತ್ತಾನೆ.

*****

ನೋಡಿಯೋ ಸಾಹಿತ್ಯ ದಾಸೋಹ ೧೯೫/೨ – ಅಧ್ಯಕ್ಷರ ಅನಿಸಿಕೆಗಳು

– ಗುರುರಾಜ ಶಾಸ್ತ್ರಿ

ನೋಡಿಯೋ ಸಾಹಿತ್ಯ ದಾಸೋಹದ ಅಧ್ಯಕ್ಷನಾಗಿ ನನ್ನನ್ನು ಆಯ್ಕೆ ಮಾಡಿರುವುದಕ್ಕೆ ನಾನು ಸಂಚಾಲಕರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಎರಡು ವರ್ಷಗಳ ಹಿಂದೆ ಒಂದೆರೆಡು ನಾಟಕಗಳನ್ನು ಬರೆದಿದ್ದ ನಾನು ಅಕಸ್ಮಾತ್ತಾಗಿ ಬ್ಯಾಂಕಿನ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರವೀಂದ್ರ ಅವರನ್ನು ಭೇಟಿ ಮಾಡಿ ನನ್ನ ನಾಟಕಗಳ ಬಗ್ಗೆ ತಿಳಿಸಿದಾಗ 'ಸಮನ್ವಯ ಸಮಿತಿ ಕನ್ನಡವೇ ಸತ್ಯ' ವಾಟ್ಸಾಪ್ ಗುಂಪಿಗೆ ಸೇರಲು ಆಹ್ವಾನ ಕೊಟ್ಟರು. ಅಲ್ಲಿಂದ ಪ್ರಾರಂಭವಾದ ಈ ಪಯಣ ಇಂದು ಈ ದಾಸೋಹದ ಅಧ್ಯಕ್ಷತೆ ವಹಿಸುವವರೆಗೆ ಸಾಗುತ್ತಾ ಬಂದಿದ್ದರ ಜೊತೆಗೆ ನನ್ನ ಸಾಹಿತ್ಯ ಕೃಷಿಗೆ ನಾನು ಬರೆದ ಸುಮಾರು ೭೦ ಲೇಖನಗಳು ಹಾಗು ४೦ ಕವನಗಳು ಸೇರಿಕೊಂಡಿವೆ. ಇಷ್ಟು ಸಾಹಿತ್ಯ ಕ್ಷೇತ್ರದಲ್ಲಿ ಮುಂದುವರಿದ ಶ್ರೇಯಸ್ಸು ಸಂಪೂರ್ಣ ಈ ಸಸಕಸ ಗುಂಪಿಗೆ ಸೇರಬೇಕೆಂದು ನಾನು ತಿಳಿಸುತ್ತೇನೆ.

ಇಂದಿನ ಪ್ರಸ್ತುತಿಗಳ ವಿಮರ್ಶೆ

೧. ದಂತಕಥೆ - ಶ್ರೀಮತಿ ನಾಗರತ್ನಾ ಚಂದ್ರಶೇಖರ್

ನಾನು ನಾಗರತ್ನ ಅವರ ಮೊದಲ ಪ್ರಸ್ತುತಿ ಕೇಳಿದ್ದು ಅವರು ಕೈಕಾಲು ಉಗುರುಗಳನ್ನು ಶುದ್ಧಮಾಡಿ ಅದಕ್ಕೆ ಬಣ್ಣ ಹಚ್ಚಿಸಿಕೊಂಡ ಅವರ ಅಮೇರಿಕಾದ ಅನುಭವದ ಬಗ್ಗೆ ಅವರು ದಾಸೋಹದಲ್ಲಿ ಮಾತನಾಡಿದಾಗ. ಅಲ್ಲಿಂದ ಅವರ ಪ್ರಸ್ತುತಿಗಳನ್ನು ಬಿಡದೇ ಓದುತ್ತಾ ಬಂದಿದ್ದೇನೆ. ಹಾಸ್ಯವನ್ನು ಸೇರಿಸಿ ಅವರು ಬರೆಯುವ ಲೇಖನಗಳು ನನಗಂತೂ ಬಹಳ ಸಂತೋಷ ಕೊಟ್ಟಿದೆ. ಇಂದಿನ ಲೇಖನದಲ್ಲಿ ಹಲ್ಲಿನ ಆರೋಗ್ಯದ ವಿಷಯವನ್ನೇ ತೆಗೆದುಕೊಂಡು ಅವರು ಬರೆದ ಲೇಖನ ಚೆನ್ನಾಗಿತ್ತು. ಅದರಲ್ಲೂ ಹೊಸ ದಂತ ವಿದ್ಯಾರ್ಥಿನಿಯ ಮೊದಲನೇ ಪ್ರಯೋಗಕ್ಕೆ ತುತ್ತಾಗಬೇಕಿದ್ದ ಇವರ ಹಲ್ಲನ್ನು ಉಳಿಸಿಕೊಳ್ಳಲು ಇವರು ಮಾಡಿದ ಸಾಹಸ ಅದ್ಭುತವಾಗಿದೆ. ಅಭಿನಂದನೆಗಳು.

೨. ಏನಾಯ್ತು ಗೊತ್ತಾ - ಶ್ರೀಮತಿ ಶೀಲಾ ಅರಕಲಗೂಡು

ಇವರು ಲೇಖನವನ್ನು ಓದುತ್ತಿದ್ದರೆ ಅದು ಕನಸೆಂಬುದೂ ತಿಳಿಯದ ಹಾಗೆ ಬಹಳ ಅಚ್ಚುಕಟ್ಟಾಗಿ ಬರೆದಿದ್ದಾರೆ. ಎಲ್ಲರ ಚಿತ್ತ ನನ್ನತ್ತ ನನ್ನ ಚಿತ್ತ ಸೀರೆಯತ್ತ ಎನ್ನುವ ಸಾಲುಗಳು ಹಾಸ್ಯಮಯವಾಗಿದೆ. ಪ್ರಸ್ತುತಿಗಳ ವಿಮರ್ಶೆ ಮಾಡಲು ಅವರು ಹೆದರಿದ್ದು ಈವತ್ತಿನ ನನ್ನ ಪರಿಸ್ಥಿತಿಯನ್ನು ವರ್ಣಿಸದಂತಿದೆ. ಅಭಿನಂದನೆಗಳು.

೩. ನವೆಂಬರ್ ಕನ್ನಡಿಗರು ನಾವು - ಶ್ರೀ ಜಿ.ಬಿ. ಕೋಟೆ ಅನಂತ್

ಎಷ್ಟು ಸತ್ಯವಲ್ಲವೇ ಇವರ ನುಡಿಗಳು. ನವೆಂಬರ್ ಬಂದರೆ ಎಲ್ಲಿಲ್ಲದ ನಮ್ಮ ಕನ್ನಡದ ಉತ್ಸಾಹ, ನವೆಂಬರ್ ಮುಗಿಯುತ್ತಿದ್ದಂತೆ ದೀಪಾವಳಿಯ ಪಠಾಕಿಯಂತೆ ಟುಸ್ ಆಗುತ್ತದೆ. ಅದರಲ್ಲೂ ಅನಂತ್ ಅವರು ಕಡೆಯಲ್ಲಿ ಕನ್ನಡ ತಾಯಿಯನ್ನೇ ಇನ್ನು

ಹನ್ನೊಂದು ತಿಂಗಳುಗಳ ಕಾಲ ಮಲಗಿಸುವಂತೆ ಬರೆದಿರುವುದು ಅವರಿಗಾಗಿರುವ ನೋವು ಅರ್ಥವಾಗುತ್ತದೆ. ಆದರೆ ಸಂತೋಷದ ಸಂಗತಿಯೆಂದರೆ ನಮ್ಮ ವೇದಿಕೆಯಂತೂ ಕನ್ನಡಮ್ಮನ ತೇರು ಎಳೆಯುತ್ತಾ ವರ್ಷವೆಲ್ಲಾ ರಾಜ್ಯೋತ್ಸವ ಆಚರಿಸುತ್ತಿದೆ ಎಂದರೆ ಅತಿಶಯೋಕ್ತಿಯೇನಲ್ಲ. ಅಭಿನಂದನೆಗಳು.

೪. ಜೀವನ ಪ್ರಮಾಣ ಪತ್ರ - ಶ್ರೀಮತಿ ಗೌರಿ ಭಟ್ಟ

ಸಮಾಜ ಸೇವೆ ಮಾಡಲು ಬ್ಯಾಂಕ್ ಒಂದು ಉತ್ತಮ ವೇದಿಕೆ ಎಂಬುದನ್ನು ಗೌರಿಭಟ್ಟ ಅವರು ತಮ್ಮ ಲೇಖನದಲ್ಲಿ ತಿಳಿಸಿಕೊಟ್ಟಿದ್ದಾರೆ. ಒಳ್ಳೆಯ ಗ್ರಾಹಕ ಸೇವೆ ನೀಡಿ ಬರುವ ಸಾರ್ಥಕತೆ ಮತ್ತ್ಯಾವುದರಲ್ಲೂ ನಾನಂತೂ ಕಂಡಿಲ್ಲ. ಜೀವನ ಪ್ರಮಾಣ ಪತ್ರ ನೀಡಲು ಬರುತ್ತಿದ್ದ ಬ್ಯಾಂಕಿನ ಗ್ರಾಹಕರ ಜೊತೆಗೆ ನಡೆದ ವಿವಿಧ ಅನುಭವವಗಳನ್ನು ಅದ್ಭುತವಾಗಿ ಲೇಖನದಲ್ಲಿ ಹಂಚಿಕೊಂಡಿದ್ದಾರೆ. ನನಗೂ ನನ್ನ ಬ್ಯಾಂಕಿಂಗ್ ದಿನಗಳನ್ನು ನೆನಪು ತರಿಸಿತು ಈ ಲೇಖನ. ಅಭಿನಂದನೆಗಳು.

೫. ನೀವು ಅಳಿಲು ಸಾಕಿದ್ದೀರಾ - ಶ್ರೀಮತಿ ಪ್ರಮೋದಾ ಮೂರ್ತಿ

ನಾಯಿ, ಬೆಕ್ಕು, ಕೋತಿ ಸಾಕಿರೋದರ ಬಗ್ಗೆ ನಾವು ಬಹಳಷ್ಟು ಕೇಳಿದ್ದೇವೆ ಹಾಗೂ ನೋಡಿದ್ದೇವೆ. ಆದರೆ ಇದೆಂತದು ಅಳಿಲನ್ನು ಸಾಕುವುದೇ. ಪ್ರಮೋದಾ ಮೂರ್ತಿಯವರು ಅವರ ಮನೆಯಲ್ಲಿ ನಡೆದ ಘಟನೆಯನ್ನು ನಮ್ಮೊಂದಿಗೆ ಹಂಚಿಕೊಂಡು, ಪ್ರೀತಿ ಮತ್ತು ಆರೈಕೆಯಿಂದ ಬೇರೆ ಬೇರೆ ಜೀವಿಗಳನ್ನು ಹೇಗೆ ಸಾಕಬಹುದು ಎಂಬುದನ್ನು ತಮ್ಮ ಲೇಖನದಲ್ಲಿ ತೋರಿಸಿಕೊಟ್ಟಿದ್ದಾರೆ. ಲೇಖನದಲ್ಲಿ ಬರುವ ವಿನಯ್ ಅವರ ಪ್ರಾಣಿ ಪ್ರೀತಿ ಅಪಾರ. ಲೇಖನ ಕೇಳಿಸಿಕೊಂಡ ಮೇಲೆ ಅವರನ್ನೊಮ್ಮೆ ಭೇಟಿಮಾಡಬೇಕೆಂಬ ಆಸೆಯಾಗಿದೆ. ಇತರ ಜೀವಿಗಳ ಮೇಲೆ ಮೇಘನಾ ಅವರಿಗಿರುವ ಕಾಳಜಿ ಶ್ಲಾಘನೀಯ. ಅಭಿನಂದನೆಗಳು.

೬. ತಪ್ಪೊಪ್ಪಿಗೆ - ಶ್ರೀಮತಿ ಮಾಲತಿ ಶ್ರೀನಿವಾಸನ್

ಮೀಸಲಾತಿ ಬೇಕೋ ಬೇಡವೋ ಎಂಬುದು ಬಗೆಹರಿಯದ ಒಂದು ವಿಚಾರ. ಈ ವೇದಿಕೆಯಲ್ಲಿ ಅದರ ಬಗ್ಗೆ ನಾನು ಮಾತನಾಡುವುದು ತಪ್ಪಾಗುತ್ತದೆ. ಆದರೆ ಈ ಮೀಸಲಾತಿಯ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ನಮಗೆ ಗೊತ್ತಿತ್ತು ಆದರೆ ಈ ಮಟ್ಟಕ್ಕೆ ಎಂದು ನನಗೆ ಗೊತ್ತಿರಲಿಲ್ಲ. ವೈದ್ಯಕೀಯ ಸೀಟಿನ ಆಸೆಗೆ ಹೆತ್ತ ತಂದೆಯನ್ನೇ ಇಲ್ಲವೆಂದು ತಿಳಿಸುವುದು ಕ್ಷಮಿಸಲಾಗದ ಅಪರಾಧ. ಆದರೆ ಎಲ್ಲೋ ಒಂದು ಕಡೆ ಈ ತಪ್ಪು ಮಧುಕರನಿಗಿಂತ ಅವನ ತಂದೆ ತಾಯಿಯರೇ ಮಾಡಿದರೇನೋ ಅನಿಸುತ್ತೆ. ಮೀಸಲಾತಿ ದುರುಪಯೋಗ ಆಗಿರುವುದು ಖಾತ್ರಿಯಾದ ಮೇಲೆ ರುಕ್ಮಿಣಿಯ ಮನಸ್ಸಿನಲ್ಲಿ ಏಳುವ ಗೊಂದಲಗಳ ಪ್ರಶ್ನೆಗಳನ್ನು ಚೆನ್ನಾಗಿ ಚಿತ್ರಿಸಿದ್ದಾರೆ ಮಾಲತಿಯವರು. ಅವರಿಗೆ ಅಭಿನಂದನೆಗಳು.

೭. ಒಟಿಪಿ ಹಗರಣಗಳು : ಕಿರು ನಾಟಕ - ಶಂಕರ ರಾವ್ ಗುರುರಾಜ ಶಾಸ್ತ್ರಿ (ಜಂಟಿ ಪ್ರಸ್ತುತಿ)

ಕಷ್ಟ ಪಟ್ಟು ಸಂಪಾದಿಸಿದ ಹಣವನ್ನು ಕ್ಷಣಮಾತ್ರದಲ್ಲಿ ಒಟಿಪಿ ಹೇಳಿ ಹಣ ಕಳೆದುಕೊಳ್ಳುತ್ತಿರುವ ಅಮಾಯಕ ಜನರಲ್ಲಿ ಜನಜಾಗೃತಿ ಮೂಡಿಸುವಲ್ಲಿ ಇದೊಂದು ಚಿಕ್ಕ ಪ್ರಯತ್ನ

೮. ದಂಡಪುರಾಣ -ಶ್ರೀ ದಾ ಭಿ ಪ್ರಾಣೇಶ್ ರಾವ್

ನಿಘಂಟುವಿನಲ್ಲಿ "ದಂಡ" ಎಂದರೆ ಕೊಟ್ಟಿರುವ ಎಲ್ಲಾ ಅರ್ಥಗಳಿಗೂ ಒಂದೊಂದು ಉದಾಹರಣೆಯನ್ನು ನೀಡಿ ಅಚ್ಚುಕಟ್ಟಾಗಿ ಬರೆದಿರುವ ಲೇಖನ ಇದಾಗಿದೆ. ಅಷ್ಟೇ ಅಲ್ಲದೆ ಚಲನಚಿತ್ರ, ಧಾರಾವಾಹಿಗಳಲ್ಲಿ ಈ ದಂಡ ಪದವನ್ನು ಬಳಸಿಕೊಂಡಿರುವುದನ್ನು ಪ್ರಾಣೇಶ್‌ರಾವ್ ಅವರು ತಿಳಿಸಿದ್ದಾರೆ. ಇದರಲ್ಲಿ ಬರುವ ಪರೀಕ್ಷೆಯ ದಂಡಯಾತ್ರೆಯಂತೂ ನಾವು ಚಿಕ್ಕ ವಯಸ್ಸಿನಲ್ಲಿ ಕೇಳಿದ್ದು ನೆನಪು ತಂದಿತು. ಒಳ್ಳೆಯ ಲೇಖನ, ಅಭಿನಂದನೆಗಳು.

೯. ಎರಡು ಕವನಗಳು - ಹು ವಾ ಶ್ರೀಪ್ರಕಾಶ್

'ಈಗೇಕೆ ಯೋಚನೆ' - ವಾಟ್ಸಾಪಿನ ಡಿ.ಪಿ. ನೋಡಿ ಮನಸ್ಸಿನಲ್ಲಿ ಹಳೆಯ ನೆನಪುಗಳನ್ನು ತರಿಸಿಕೊಳ್ಳುವುದು ಸರ್ವೇ ಸಾಮಾನ್ಯ. ಆದರೆ ಆ ನೆನಪಿಗೆ ಕವನದ ರೂಪವನ್ನು ಕೊಟ್ಟು ಶ್ರೀಪ್ರಕಾಶ್ ಪದಗಳನ್ನು ಹೆಣೆದಿದಾರೆ.

'ಆನಂದಮಯ' ಕವನವೂ ಜಾತ್ರೆಯಲ್ಲಿ ನಡೆಯುವ ಸಂಗೀತ ಕಛೇರಿಯ ಬಗ್ಗೆ ತಿಳಿಸಿ ಕಡೆಗೆ ಜನರು ಮಧುರವಾದ ಗಾನಕ್ಕೆ ಸುಂದರವಾದ ಗಾಯಕಿಯನ್ನು ಕಲ್ಪಿಸಿಕೊಳ್ಳುವ ಕೇಳುಗರ ಬಗ್ಗೆ ತಿಳಿಸಿದ್ದಾರೆ. ಎರಡೂ ಉತ್ತಮವಾದ ಕವನಗಳು. ಅಭಿನಂದನೆಗಳು.

೧೦. ಶಾರದಾ ದಂಡಕ - ರತ್ನಮೂರ್ತಿ

ರತ್ನಾಮೂರ್ತಿಯವರ ಈ ರಚನೆ ಮತ್ತು ಅವರ ಗಾಯನ ಆಲಿಸಿದಾಗ ನನಗೆ ನಮ್ಮ ಯೋಗದಲ್ಲಿ ಮಾಡುವ ಕಪಾಲಭಾತಿ ಪ್ರಾಣಾಯಾಮ ನೆನಪಿಗೆ ಬಂತು. ಈ ದಂಡಕವನ್ನು ಒಂದೆರೆಡು ಸಲ ಹೇಳಿದರೆ ಸಾಕು ಪ್ರಾಣಾಯಾಮ ಮುಗಿದ ಹಾಗೆಯೇ. ಶಾರೆದೆಗಿರುವ ಹೆಸರುಗಳೆಷ್ಟೆಂದು ಯಾರಾದರೂ ನನ್ನನ್ನು ಕೇಳಿದರೆ ನಾನು ಆರು ಅಥವಾ ಏಳು ಹೆಸರುಗಳನ್ನು ಹೇಳಬಲ್ಲೆ. ಆದರೆ ಈ ಶಾರದಾ ದಂಡಕದಲ್ಲಿ ರತ್ನಾಮೂರ್ತಿಯವರು ಬಳಸಿರುವ ಪದಗಳು ಅವರಿಗೆ ಕನ್ನಡ ಭಾಷೆ ಮೇಲೆ ಇರುವ ಹಿಡಿತವನ್ನು ನಿರೂಪಿಸಿದೆ. ಅಭಿನಂದನೆಗಳು.

೧೧. ನನ್ನ ಕವನ - ಶ್ರೀಮತಿ ಪಾರ್ವತಿ ವಿ ಹೆಗಡೆ

ಈ ಕವನ ನಾವು ಆತ್ಮವನ್ನು ಅರಿತುಕೊಳ್ಳುವ ವಿಚಾರ ಬರುವಾಗ ತಿಳಿಸುವಂತೆ ನೇತಿ ವಾದದಂತಿದೆ. ತಮ್ಮ ಕವನದಲ್ಲಿ ಏನೂ ಇಲ್ಲ ಎಂದು ಹೇಳುತ್ತಲೇ ಪಂಪ, ರಾಘವಾಂಕ, ಬಸವಣ್ಣ, ಅಲ್ಲಮಪ್ರಭು ಎಲ್ಲರನ್ನೂ ಪರಿಚಯಿಸಿದ್ದಾರೆ. ಕಡೆಯಲ್ಲಿ ಇದೊಂದು ಸರಳ ರಚನೆಯ ಕವನ, ಆತ್ಮತೃಪ್ತಿಯ ಕವನ ಎಂದು ಅವರು ಮುಗಿಸಿರುವುದು ಚೆನ್ನಾಗಿದೆ. ಅಭಿನಂದನೆಗಳು.

೧೨. ಈ ಸಾವು ನ್ಯಾಯವೇ - ಶ್ರೀಮತಿ ರೇಣುಕಾ ದೇಸಾಯಿ

ಬಾಂಗ್ಲಾದೇಶದ ದೇವಸ್ಥಾನಗಳಲ್ಲಿ ಆದ ಹಿಂಸಾಚಾರದ ಬಗ್ಗೆ ತಮ್ಮ ಮನದಲ್ಲಿ ಮೂಡಿದ ನೋವನ್ನು ಕವನದ ಮೂಲಕ

ಹಂಚಿಕೊಂಡಿದ್ದಾರೆ ರೇಣುಕಾ ದೇಸಾಯಿಯವರು. ಇದು ದೇವಸ್ಥಾನಗಳಷ್ಟೇ ಅಲ್ಲ ಪ್ರಪಂಚದ ಎಲ್ಲಾ ಪ್ರಾರ್ಥನಾ ಮಂದಿರಗಳಲ್ಲೂ ಇತ್ತೀಚೆಗೆ ಧರ್ಮಭೇದವಿಲ್ಲದೆ ಈ ಹಿಂಸಾಚಾರಗಳು ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹಿಂದೆ ತುಪಾಕಿ ಯುದ್ಧಕ್ಕಾಗಿ ಹಾಗೂ ಧರ್ಮ ಶಾಂತಿಗಾಗಿ ಬಳಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ತುಪಾಕಿ ಶಾಂತಿಗಾಗಿ ಹಾಗೂ ಧರ್ಮ ಯುದ್ಧಕ್ಕಾಗಿ ಬಳಕೆಯಾಗುತ್ತಿದೆ. ಸಮುಷ್ಟಿಯಲ್ಲಿ ಅಂಗೈಮುಷ್ಟಿಯಷ್ಟೇ ನಾವು ಎಂದು ಇವರು ಬರೆದಿರುವ ಸಾಲು ನನಗೆ ಇಷ್ಟವಾಯಿತು. ಅಭಿನಂದನೆಗಳು.

೧೩. ಸರ್ವಭಾವಗಳಿಗೂ ಪ್ರೇಮವೇ ಪಿತಾಮಹನಲ್ಲವೇ - ಶ್ರೀಮತಿ ಗಿರಿಜಾರಾಜ್

ಕ್ರಿಸ್ತಶಕ ೨೬೯ರಲ್ಲಿ ಇದ್ದಂತಹ ವ್ಯಾಲೆಂಟೈನ್ ಬಗ್ಗೆ ವಿವರವಾಗಿ ಈ ಲೇಖನದಲ್ಲಿ ತಿಳಿಸಿದ್ದಾರೆ. ಶ್ರೀಮತಿ ಗಿರಿಜಾರಾಜ್ ಅವರು. ಆತನ ವಿಷಯವನ್ನು ಸ್ವಲ್ಪವೂ ತಿಳಿಯದೆ ಮೋಜಿಗಾಗಿ ಆಚರಿಸುವ ವ್ಯಾಲಂಟೈನ್ಸ್ ದಿನ ನಿಜವಾಗಲೂ ನೋವು ತಂದಿದೆ. ಅದರಲ್ಲೂ ಆ ದಿನ ಆತನನ್ನು ಗಲ್ಲಿಗೇರಿಸಿದ ದಿನ ಎಂಬುದು ನನಗೆ ಹೊಸ ವಿಷಯ. ಒಳ್ಳೆಯ ಜ್ಞಾನವೃದ್ಧಿಯ ಲೇಖನ, ಅಭಿನಂದನೆಗಳು.

೧೪. ದೀಪಾವಳಿಯ ದರೋಡೆಕೋರರು - ಶ್ರೀಮತಿ ರಾಧಿಕಾ ಗುಜ್ಜರ್

ರಾಧಿಕಾ ಅವರು ಇಸವಿ ಹೇಳಿರುವುದರಿಂದ ಇದೊಂದು ನೈಜ ಘಟನೆ ಎಂದು ತಿಳಿಯುತ್ತದೆ. ಜಾನಕಮ್ಮನವರ ಸಮಯ ಪ್ರಜ್ಞೆ ಹಾಗೂ ಸೊಸೆ ಶಾಂತಲಾ ಅವರ ಧೈರ್ಯವನ್ನು ಮೆಚ್ಚಬೇಕಾದ್ದೆ. ಲೇಖನ ಕೇಳಿಸಿಕೊಳ್ಳುತ್ತಿದ್ದರೆ ವೀಡಿಯೋ ನೋಡುತ್ತಿದ್ದೇವೇನೋ ಎಂಬಂತೆ ಭಾಸವಾಯಿತು. ಅಭಿನಂದನೆಗಳು.

೧೫. ಅರೇಬಿಯನ್ ನೈಟ್ಸ್ - ಶ್ರೀ ವಿಠಲ್ ಇಜೇರಿ

ಕಿ.ಶ.೧೭೦೭ರಲ್ಲಿ ಬರೆದಿರುವ ಈ ಕಥೆಗಳು ಇಂದಿಗೂ ಜನರನ್ನು ಆಕರ್ಷಿಸುತ್ತಿದೆ ಎಂದರೆ ಎಷ್ಟು ಚೆಂದವಿದೆ ಅಲ್ಲವೇ ಈ ಕಥೆಗಳು. ಈ ಕಥೆಗಳು ಬರೆದ ಕಾರಣ, ಸರಣಿ ಕಥೆ ಹೇಳುತ್ತಾ ಕುತೂಹಲ ಘಟ್ಟಗಳಲ್ಲಿ ನಿಲ್ಲಿಸಿ ರಾಜನಿಂದ ಮರಣ ದಂಡನೆಯನ್ನೇ ತಪ್ಪಿಸಿಕೊಂಡ ಮಂತ್ರಿಯ ಮಗಳ ವಿಷಯವನ್ನು ಶ್ರೀ ಇಜೇರಿಯವರು ಚೆನ್ನಾಗಿ ವರ್ಣಿಸಿದ್ದಾರೆ. ಅಭಿನಂದನೆಗಳು.

೧೬. ಅಂಬಾಜೋಗಾಯಿ -ಸ್ಥಳ ಪರಿಚಯ - ಶ್ರೀ ಹೇಮಚಂದ್ರ

ಈ ಅಂಬಾ ಜೋಗಾಯಿ ಪ್ರದೇಶದ ಇತಿಹಾಸ, ಅಲ್ಲಿಗೆ ತಲುಪುವ ಬಗೆ, ಸಮೀಪದ ಹೆಸರುವಾಸಿ ಊರುಗಳು, ಇಲ್ಲಿರುವ ದೇವಸ್ಥಾನಗಳು, ಅಲ್ಲಿದ್ದ ಕವಿಗಳು ಹಾಗೂ ಕೆಲವು ಸಮಾಧಿಗಳು ಎಲ್ಲವನ್ನೂ ಒಳಗೊಂಡಂತೆ ಪರಿಚಯ ಮಾಡಿಕೊಟ್ಟಿದ್ದಾರೆ ಹೇಮಚಂದ್ರ ಅವರು. ಈಗಲೂ ಈ ಸ್ಥಳದಲ್ಲಿ ಸಂಜೆಯ ಹೊತ್ತು ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ತಿಳಿಸಿದಾಗ ನನಗೆ ನನ್ನ ಬೆಳಗಾವಿಯಲ್ಲಿ ಆದ ಅನುಭವಗಳ ನೆನಪಾಯಿತು. ಒಂದು ಸ್ಥಳ ಪರಿಚಯ ಹೇಗೆ ಮಾಡಿಕೊಡಬೇಕೆಂಬುದಕ್ಕೆ ಉದಾಹರಣೆಯಾಗಿದೆ ಈ ಲೇಖನ. ಅಭಿನಂದನೆಗಳು.

೧೭. ವಿದ್ಯಾರ್ಥಿನಿ ನಿಖಿಯಾ ಶಂಷೀರ್ - ಶ್ರೀ ಎನ್.ವಿ. ರಘುರಾಮ್

ಮನೆಯ ಕೆಲಸದವರ ಮಗುವಿಗೆ ಕೊಟ್ಟ ಒಂದು ಹಳೇ ಸ್ಕೂಲ್ ಬ್ಯಾಗ್ ಆ ಮಗುವಿನ ಮುಖದಲ್ಲಿ ಮೂಡಿಸಿದ ಘಟನೆಯಿಂದ ತನ್ನ ಜೀವನದ ಗುರಿಯನ್ನು ತಿಳಿದುಕೊಂಡ ನಿಖಿಯಾ ಶಂಷೀರ್ ನಮಗೆಲ್ಲಾ ಆದರ್ಶ ವ್ಯಕ್ತಿಯಾಗುತ್ತಾರೆ. ಇವರಿಂದ ಸಹಾಯ ಪಡೆದ ಹಾಗೂ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ೧೫ ಸಾವಿರಕ್ಕೂ ಹೆಚ್ಚೆಂದು ಈ ಲೇಖನದಲ್ಲಿ ತಿಳಿಸಿದಾಗ ಅಂತರ್ಜಾಲದ ಮೂಲಕ ಇವರ ಬಗ್ಗೆ ಇನ್ನೂ ಹೆಚ್ಚು ತಿಳಿದುಕೊಳ್ಳುವ ಆಸೆಯಾಗಿದೆ. ಇವರು ಕನ್ನಡಿಗರೆಂಬುದು ನಮಗೆ ಹೆಮ್ಮೆ ತಂದಿದೆ. ಸಮಾಜಸೇವೆ ಎಂಬುದು ಪ್ರಪಂಚದಲ್ಲೇ ಅತಿ ಕಷ್ಟವಾದ ಕೆಲಸ. ನಾವು ನೇರವಾಗಿ ಇದರಲ್ಲಿ ಕೆಲಸಮಾಡದಿದ್ದರೂ ಪಾರದರ್ಶಕತೆಯಿಂದ ಸಮಾಜಸೇವೆ ಮಾಡುತ್ತಿರುವ ನಿಖಿಯಾ ಶಂಷೀರ್ ಅಂತವರಿಗೆ ನಾವು ಹಣ ಸಹಾಯಮಾಡಬಹುದು. ಒಂದು ಉತ್ತಮ ವ್ಯಕ್ತಿಯ ಪರಿಚಯ. ಅಭಿನಂದನೆಗಳು.

೧೮. ಪ್ರೊ. ಆರ್.ಎಲ್. ಕಶ್ಯಪ್ ಹಾಗೂ ಶ್ರೀ ಅರಬಿಂದೋರವರ ದರ್ಶನ – ಕಿರು ಪರಿಚಯ - ಡಾ. ಜಯಂತಿ ಮನೋಹರ್

ಇರುವ ವೇದಗಳನ್ನೆಲ್ಲಾ ಓದಿ ಅರ್ಥ ಮಾಡಿಕೊಳ್ಳುವಷ್ಟು ಸಮಯ ನಮಗಂತೂ ಯಾರಿಗೂ ಇಲ್ಲ. ಹೀಗಿರುವಾಗ ವೇದ ಸಾಹಿತ್ಯಕ್ಕೆ ಆಂಗ್ಲಭಾಷೆಯಲ್ಲಿ ಭಾಷ್ಯವನ್ನು ಬರೆದು ನಮಗೆಲ್ಲಾ ಸಹಾಯ ಮಾಡುತ್ತಿರುವ ಕಶ್ಯಪ್ ಅವರ ಪರಿಚಯ ಚೆನ್ನಾಗಿದೆ. ಹಾಗೆಯೇ ಶ್ರೀ ಅರಬಿಂದೋರವರ ದರ್ಶನ ಅವರ ಬಗ್ಗೆ ಇನ್ನಷ್ಟು ಓದುವ ಆಸೆ ನನ್ನಲ್ಲಿ ಮೂಡಿಸಿದೆ. ಅತ್ತುತ್ತಮ ಲೇಖನ, ಅಭಿನಂದನೆಗಳು.

೧೯. ನಾಲ್ಕು ಕವನಗಳು - ಶ್ರೀ ಜಿ.ವಿ.ಅರುಣ

'ಎಲ್ಲಾ ಮುದುಕಿಯರು ಅಮ್ಮಂದಿರೇ' - ಮಮತೆಯ ಶ್ರೇಷ್ಠತೆಯನ್ನು ಬಿಚ್ಚಿಟ್ಟಿದೆ ಈ ಕವನ. ಆ ಮುದುಕಿ ತಲೆ ಸವರುವುದಂತೂ ಕಣ್ಣಲ್ಲಿ ನೀರು ತಂದಿತು.

'ಹುಡುಕಾಟ' - ಸಾಕ್ಷಾತ್ಕಾರಕ್ಕೆ ಬೇಕಾದ ಗುರುವೇ ಮಾಯವಾದಾಗ, ಮೋಕ್ಷಕ್ಕಿಂತ ಗುರುವನ್ನು ಹುಡುಕುವುದೇ ನಮ್ಮ ಕರ್ತವ್ಯವಾಗುತ್ತದೆ ಎಂಬುದನ್ನು ಕವಿ ತಿಳಿಸಿದ್ದಾರೆ ಎಂದು ನಾನು ನಂಬಿದ್ದೇನೆ.

'ಬೆಳವಣಿಗೆ' - ಅತ್ಯುತ್ತಮ ಕವನ

'ನನಗಿಂತ ಸೂಕ್ಷ್ಮ' - ಇಂದಿನ ಅಧ್ಯಕ್ಷರು ಬ್ರಹ್ಮಚಾರಿಗಳೆಂದು ತಿಳಿದು ಹಾಗೂ ವಿಮರ್ಶೆಮಾಡಲು ಸವಾಲು ಹಾಕಲು ಈ ಕವನವನ್ನು ದಾಸೋಹದಲ್ಲಿ ಓದಲು ಆಯ್ಕೆಮಾಡಿರಬಹುದು ಎಂದು ನನಗನಿಸಿತು. ನಾನು ಅರ್ಥಮಾಡಿ ಕೊಂಡಂತೆ ಬಹುಶಃ ಗಾಜಿನ ಬಳೆಯ ಬದಲು ಚಿನ್ನದ ಬಳೆ ಕೊಡಿಸಿದ್ದರೆ ಸುಖವು ಪ್ರಾಪ್ತವಾಗುತ್ತಿತ್ತೇನೋ ಅನಿಸುತ್ತೆ.

೨೦. ಕರ್ಮದ ಮೂಟೆ - ಶಾಂತಾ ನಾಗಮಂಗಲ

ಜೀವನದಲ್ಲಿ ಒಮ್ಮೆ ತಪ್ಪು ಮಾಡಿದರೆ ಮುಂದೆ ಬರುವ ಎಲ್ಲಾ ತೊಂದರೆಗಳಿಗೂ ನಾವು ಆ ತಪ್ಪಿನ ಕಾರಣವಾಗಿಯೇ ಇರಬಹುದೆಂದು ಊಹಿಸಿಕೊಂಡು ನರಳುತ್ತೇವೆ. ಅದರಲ್ಲೂ ನಮಗೆ ಮಾತ್ರ ತಿಳಿದ ನಾವು ಮಾಡಿದ ತಪ್ಪು ಮತ್ತೊಬ್ಬರಲ್ಲಿ ಹಂಚಿಕೊಳ್ಳಲೂ ಆಗದೆ ವೇದನೆಯನ್ನು ಅನುಭವಿಸುವ ಶಿವಾನಿಯ ಪಾತ್ರ ಚೆನ್ನಾಗಿದೆ. ಈ ಲೇಖನ ಒಂದು ಚಲನಚಿತ್ರದ ಸ್ಕ್ರಿಪ್ಟ್ ಇದ್ದ ಹಾಗಿದೆ. ಅಭಿನಂದನೆಗಳು.

೨೧. ಪರಮಾತ್ಮನ ಪಟಕ್ಕೊಂದು ಜಾಗ - ಶ್ರೀಮತಿ ಶ್ರವಣಕುಮಾರಿ

ಎಲ್ಲರೂ ಕಥೆ ಓದಿದರೆ, ಇವರು ಇಂದು ಓದಿದ್ದು ಕಥೆ ಹೇಳಿದಂತಿತ್ತು. ತಮ್ಮ ಎಲ್ಲಾ ಕಥೆಗಳಲ್ಲೂ ಇವರು ತರುವ ಪಾತ್ರಗಳು ನಿಜವಾಗಿಯೂ ಇವರ ಬಂಧುಬಳಗದಲ್ಲಿ ಇದ್ದಾರೆಯೇ ಅಥವಾ ಅಷ್ಟು ಅದ್ಭುತವಾದ ಕಲ್ಪನೆಯೋ ಗೊತ್ತಿಲ್ಲ. ಈ ಪಟಗಳನ್ನು ಕೊಡುವುದು ಅದನ್ನು ಹೊರಗೆಸೆಯಲು ಹೆದರುವುದೂ ಇವೆಲ್ಲಾ ಪ್ರತಿಯೊಬ್ಬರ ಜೀವನದಲ್ಲೂ ನಡೆದೇ ಇರುತ್ತವೆ. ಆದರೆ ಪಟಗಳನ್ನು ಕೊಡುವವರ ಉದ್ದೇಶ ಒಳ್ಳೆಯದಾಗಲಿ ಎಂಬುದಾಗಿರುತ್ತದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ತಮ್ಮ ಮನೆಯ ಪೆಟ್ಟಿಗೆಯಲ್ಲೂ ಇನ್ನೂ ಮೂವತ್ತೋ ಮೂವತ್ತೈದು ಪಟಗಳಿವೆ, ಹೇಗೆ ಅದನ್ನು ಹಂಚುವುದು ಎಂದು ಶ್ರವಣಕುಮಾರಿಯವರು ತಿಳಿಸದ್ದಾರೆ. ಅಕ್ಕಿ ರೊಟ್ಟಿ ಆಸೆಗೆ ವೇದಿಕೆ ಸದಸ್ಯರು ಅವರ ಮನೆಗೆ ಹೋಗುವ ತಯಾರಿಯಲ್ಲಿದ್ದಾಗ ಪ್ರತಿ ಅಕ್ಕಿ ರೊಟ್ಟಿಯ ಜೊತೆಗೆ ಈ ಪಟಗಳು ಬೋನಸ್ ಆಗಿ ಸಿಗುತ್ತದೆಯೇ ಎಂಬುದೇ ನನ್ನ ಅನುಮಾನ. ಒಳ್ಳೆಯ ವಿಷಯಾಧಾರಿತ ಲೇಖನ. ಅಭಿನಂದನೆಗಳು.

೨೨. ಅಂಬಿಗ್ರ ಬಾಳಣ್ಣ - ಶ್ರೀ ಗಣಪತಿ ಹೆಗಡೆ

ಕುಮಟಾ ತಾಲೂಕಿನ ಮಣಕೋಣವೆಂಬ ಪ್ರದೇಶದ ಜನರ ಅಂದಿನ ಜೀವನ ಶೈಲಿ, ಅವರು ಬೇರೆ ಪ್ರದೇಶಗಳಿಗೆ ಪಯಣಿಸುತ್ತಿದ್ದ ದೋಣಿಯ ಬಗ್ಗೆ, ಅವರುಗಳು ಹೆಚ್ಚು ನಂಬಿಕೆ ಇಟ್ಟಿದ್ದ ಅಘನಾಶಿನಿ ನದಿಯ ಬಗ್ಗೆ ಒಳ್ಳೆ ಮಾಹಿತಿ ನೀಡಿದ್ದಾರೆ ಗಣಪತಿ ಹೆಗಡೆಯವರು. ಇತ್ತೀಚೆಗೆ ಶಿರಸಿಯ ಒಂದು ಹೋಮ್‌ಸ್ಟೇಗೆ ಹೋದಾಗ ನನಗೂ ಅಘನಾಶಿನಿ ನದಿಯಲ್ಲಿ ಇಳಿಯುವ ಅವಕಾಶ ಸಿಕ್ಕಿತು. ಹೆತ್ತ ತಾಯಿಯಂತೆ ತಲೆ ಸವರುತ್ತಾ ಹರಿಯುತ್ತಿದ್ದ ಈ ನದಿ ಮನಸ್ಸಿನಲ್ಲಿ ಹೊಸ ಆನಂದವನ್ನೇ ಸೃಷ್ಠಿಸಿತ್ತು. ಬೆಂಗಳೂರಿನಲ್ಲೇ ಹುಟ್ಟಿ ಬೆಳೆದ ನಾವು ಈ ಪರಿಸರದ ಅಗಾಧತೆಯ ಅನಭವಗಳನ್ನು ಎಷ್ಟು ಕಳೆದುಕೊಂಡೆವು ಎಂಬ ಅರಿವಾಯಿತು. ಒಂದು ಉತ್ತಮ ಲೇಖನ. ಅಭಿನಂದನೆಗಳು.

ನನ್ನ ಅರಿವಿಗೆ ಬಂದಷ್ಟು ಹಾಗೂ ಈ ಅಧ್ಯಕ್ಷ ಪದವಿಯ ಜವಾಬ್ಧಾರಿಯನ್ನು ಅರಿತು ನಾನು ಇಂದಿನ ಪ್ರಸ್ತುತಿಗಳ ವಿಮರ್ಶೆ ನೀಡಲು ಪ್ರಯತ್ನಿಸಿದ್ದೇನೆ. ಎಲ್ಲರಿಗೂ ಧನ್ಯವಾದಗಳು.

*****